
ಜನಶಕ್ತಿ

ಕನ್ನಡ ವಾರಪತ್ರಿಕೆ



Blog: janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 14
ಏಪ್ರಿಲ್ 07, 2013 ಪುಟ 16 ರೂ. 10/-




ಸೈಪ್ರಸ್ ದೇಶ : ನವ ಉದಾರವಾದಿ ನೀತಿಗಳಿಗೆ ಬಲಿಪಶು



ಬೇಕಿದೆ ಅವಕಾಶವಾದಿ ಅಲ್ಲದ ಧೋರಣೆಗಳ ಪರ್ಯಾಯ

ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊರತೆ

ದೌರ್ಜನ್ಯಗಳು ಮತ್ತು ಮಹಿಳೆಯರ ತುಚ್ಛೀಕರಣ : ಕುಪ್ರಸಿದ್ಧ ಮನುಸ್ಮೃತಿಯ ಕುಖ್ಯಾತ ಕೊಡುಗೆ





ರಂಗಾಯಣ : ಸಾಂಸತಿಕ ಸ್ವಾಯತ್ತತೆ ಹಾಳಾಗದಿರಲಿ



ಅಪ್ರತಿಮ ಹೋರಾಟಗಾರ ಎ.ಕೆ.ಗೋಪಾಲನ್

ಆರೋಗ್ಯ ಕ್ಷೇತ್ರದ ಬೆಳವಣಿಗೆಗೆ ಯೋಜನಾ ಆಯೋಗದ ಅಡ್ಡಗಾಲು!

ಡಇತ್ತೀಚಿಗೆ ಭಾರತೀಯ ಯೋಜನಾ ಆಯೋಗ ಸುದ್ದಿಯಲ್ಲಿತ್ತು. ಭಾರತದಲ್ಲಿ ಯಾರು ದಿನಕ್ಕೆ ರೂ. 28.65 ಆದಾಯವನ್ನು ಹೊಂದಿರುತ್ತಾರೋ ಅವರನ್ನು ಬಡವರು ಎಂದು ಕರೆದಿದೆ. ಯಾರಿಗೆ ರೂ 28.65 ಗಿಂತ ಹೆಚ್ಚಿನ ಆದಾಯವಿರುತ್ತದೋ ಅವರು ಅಂದರೆ ದಿನಕ್ಕೆ 29 ರೂ ಆದಾಯ ಇರುವವರು ಬಡವರಲ್ಲ ಎಂದರ್ಥ. ಈ ತರಹದ ಹೇಳಿಕೆಗಳನ್ನು ನೀಡಿ, ಹೇಗೆ ಯೋಜನಾ ಆಯೋಗ ಜನರಿಂದ ದೂರವಾಗುತ್ತಿದೆ, ಹೇಗೆ ಜನರ ನಿಜಸ್ಥಿತಿ ಅರಿಯಲು ಅದ-ಕ್ಕೆ ಸಾಧ್ಯವಾಗುತ್ತಿಲ್ಲ ಎಂದು ತಿಳಿದುಬರುತ್ತದೆ.

12 ನೇ ಪಂಚವಾರ್ಷಿಕ ಯೋಜನೆ, ಇತರೇ ಸರಕಾರಿ ಯೋಜನಾ ವರದಿಯಂತೆ ಜಾರಿಯಲ್ಲಿದೆ. ಆದರೆ ಆರೋಗ್ಯ ಕ್ಷೇತ್ರವನ್ನು ಸಾರ್ವಜನಿಕ ಕ್ಷೇತ್ರದಿಂದ, ಕಾರ್ಪೊರೇಟ್(ಸಾಂಸ್ಥಿಕ) ಹಾಗೂ ಖಾಸಗಿ ಕ್ಷೇತ್ರದೆಡೆಗೆ ಕೊಂಡೊಯ್ಯುವ ಹುನ್ನಾರದಲ್ಲಿದೆ ಎಂದು ತಿಳಿದು ಬರುತ್ತಿದೆ. ಹಿಂದೆಯೂ ಯೋಜನಾ ಆಯೋಗ ತನ್ನ ಮಾತಿನಲ್ಲಿ ತಪ್ಪಿದ ಸನ್ನಿವೇಶಗಳು ಹಲವಾರು. 11 ನೇ ಯೋಜನಾ ಆಯೋಗದ ವರದಿಯಲ್ಲಿ ಕೊನೆಯ ಎರಡು ವರ್ಷ ಆರೋಗ್ಯಕ್ಕೆ 48 % ಹೆಚ್ಚು ಹಣವನ್ನು ಖರ್ಚುಮಾಡುವುದಾಗಿ ಹೇಳಿತ್ತು. ಈ ಹೆಚ್ಚಳದಿಂದ ಒಟ್ಟು ಖರ್ಚು ಒಟ್ಟು ಆಂತರಿಕ ಉತ್ಪನ್ನದ 0.87% (ಕೇಂದ್ರ) ಹಾಗೂ 1.13% (ರಾಜ್ಯ) 2011–12 ರಲ್ಲಿ ಮಾಡಿದಂತಾಗುತ್ತದೆ ಎಂದು ಹೇಳುತ್ತದೆ. ಆದರೆ ವಾಸ್ತವವೇ ಬೇರೆ. ಈಗ ಆರೋಗ್ಯ-ಕ್ಕೆ ಕೇವಲ ಒಟ್ಟು ಆಂತರಿಕ ಉತ್ಪನ್ನದ 1.1% (0.32% ಕೇಂದ್ರ, 0.7 ಶೇ. ರಾಜ್ಯ) ಮಾತ್ರ ಖರ್ಚು ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ 11 ನೇ ಯೋಜನೆಯಲ್ಲಿ ಆಶ್ವಾಸನೆ ನೀಡಿದ ಮೊತ್ತದಲ್ಲಿ ಕೇವಲ ಶೇ. 37% ಮಾತ್ರ ನೀಡುತ್ತಿದೆ. 2012ರ ಹೊತ್ತಿಗೆ 1,75,000 ಉಪಕೇಂದ್ರಗಳು 30,000 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 6,500 ಸಮುದಾಯ ಆರೋಗ್ಯ ಕೇಂದ್ರಗಳು ಅಸ್ತಿತ್ವಕ್ಕೆ ಬರುತ್ತವೆ ಎಂದು ಹೇಳಲಾಗಿತ್ತು. ಆದ-ರೆ ಅದು ಸಾಧ್ಯವಾಗಿಲ್ಲ. ಶಿಶುಮರಣ ಸಂಖ್ಯೆ 2012ರ ಹೊತ್ತಿಗೆ 28ಕ್ಕೆ ಇಳಿಯಬೇಕಿತ್ತು. ಆದರೆ ಈಗ ಇರುವುದು 48 ರ ಪ್ರಮಾಣದಲ್ಲಿ. ಭಾರತಕ್ಕಿಂತ ನೇಪಾಳ ಹಾಗೂ ಬಾಂಗ್ಲಾದೇಶ ಈ ವಿಷಯದಲ್ಲಿ ಇನ್ನೂ ಹೆಚ್ಚು ಸಾಧಿಸಿವೆ.



'5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಾವಿನ ದರ'

ಈಗ ಏಳುವ ಪ್ರಶ್ನೆ "ಯಾಕೆ ನಾವು 12 ನೇ ಪಂಚವಾರ್ಷಿಕ ಯೋಜನೆ ಬಗ್ಗೆ ಆತಂಕ ಗೊಳ್ಳಬೇಕು? ಇದಕ್ಕೆ ಇರುವ ಕಾರಣ, ಭಾರತ ಸರಕಾರ ಮೊದಲನೇ ಬಾರಿ ಸಾರ್ವಜನಿಕ ಆರೋಗ್ಯದ ಜವಾಬ್ದಾರಿಯನ್ನು ಸಾಂಸ್ಥಿಕ ಕ್ಷೇತ್ರಕ್ಕೆ (ಽಡಿಡಿಽಡಿಚಿಣಜ, ಜಛಿ-ಣಽಡಿ) ನೀಡಿರುವುದು. ಬೇರೆ ಸರಕಾರಗಳೂ (ಮೆಕ್ಸಿಕೋ ಕೊಲಂಬಿಯಾ) ಸಹಿತ ಇದೇ ಮಾದರಿಯ ಬೆಳವಣಿಗೆಯನ್ನು ಅನುಸರಿಸುತ್ತಿವೆ.

ಆರೋಗ್ಯ ಕ್ಷೇತ್ರ ನವ ಉದಾರವಾದಿ ಮಂತ್ರವನ್ನು ಅನುಸರಿಸುತ್ತಿದೆ. ಉದಾ:

(ಒಂದು ಜೀವಂತ ಹೆರಿಗೆಗಳಲ್ಲಿ 5 ವರ್ಷ ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಾವಿನ ದರ)

	1990	1995	2000	2005	2012
ಭಾರತ	115	100	86	73	63
ಪಾಕಿಸ್ತಾನ	124	115	101	94	87
ಬಾಂಗ್ಲಾದೇಶ	143	114	86	64	18
ನೇಪಾಳ	141	110	89	65	50

(ಆಧಾರ: ವಿಶ್ವಬ್ಯಾಂಕ್ http: data.w…rld bank.org)

ಮೆಕ್ಸಿಕೋ, ಕೊಲಂಬಿಯಾ, ಭಾರತ 3–4 ದಶಕಗಳ ಹಿಂದೆ ವಿಶ್ವಬ್ಯಾಂಕ್ ಹಾಗೂ ಅಂತರಾಷ್ಟ್ರೀಯ ಹಣಕಾಸು ನಿಗಮ ಮುಂದುವರೆಯುತ್ತಿರುವ ದೇಶಗಳ ಮೇಲೆ ಶರತ್ತುಗಳನ್ನು ವಿಧಿಸಿತ್ತು. ಅದರಲ್ಲಿ ಮುಖ್ಯವಾದುದು–ಸಾರ್ವಜನಿಕ ಆರೋಗ್ಯ ವೆಚ್ಚವನ್ನು ಕಡಿಮೆ ಮಾಡುವುದು ಹಾಗೂ ಆರೋಗ್ಯ ಕೇಂದ್ರ, ಆಸ್ಪತ್ರೆಗಳಲ್ಲಿ ಉಪಯೋಗ ಶುಲ್ಕ ವಿಧಿಸುವುದು. 80–90 ರ ದಶಕದಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚಗಳನ್ನು ಕಡಿಮೆ ಮಾಡಿ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ದುರ್ಬಲಗೊಳಿಸಲಾಯಿತು. ಹಾಗೂ ಇದರಿಂದಾಗಿ ಖಾಸಗಿ ಸಂಸ್ಥೆಗಳು ಹೆಚ್ಚುತ್ತಾ ಬಂದವು. 90 ರ ದಶಕದ ಹೊತ್ತಿಗೆ ಸಾರ್ವಜನಿಕ ವಲಯವನ್ನು ಮತ್ತೆ ಬಲಪಡಿಸಲು ಪ್ರಯತ್ನಿಸಲಾಯಿತು. ಆಗ ಅದು ಇನ್ನೊಂದು ಅವತಾರವನ್ನು ತಾಳಿತು. ಸಾರ್ವಜನಿಕ ಕ್ಷೇತ್ರವನ್ನು ದುರ್ಬಲಗೊಳಿಸುತ್ತ ಆ ಹಣವನ್ನು ಖಾಸಗಿ ಕ್ಷೇತ್ರದ ಅಭಿವೃದ್ದಿಗೆ ಬಳಸಲಾಯಿತು. ಖಾಸಗಿ ಕ್ಷೇತ್ರಕ್ಕೆ ಆರೋಗ್ಯದ – ಜವಾಬ್ದಾರಿ ನೀಡಲಾಯಿತು. ಆರೋಗ್ಯದ ಬದಲು ಸಾರ್ವಜನಿಕ ಆಸ್ಪತ್ರೆಗಳ ನಿರ್ವಹಣೆಯನ್ನು (ಟಚಿಟಿ-ಚಿಂಜಜ ಛಿಚಿಡಿಜ) ಸರಕಾರ ಮಾಡಲು ಮುಂದಾಯಿತು ಹಾಗೂ ಇದು ಈಗ ಜಾರಿಗೆ ಬಂದಿದೆ.

ಭಾರತದಲ್ಲಿ ಸುಧಾರಣೆ

ಯು ಪಿ ಎ 1 ಸರ್ಕಾರವಿದ್ದಾಗ, ಎಡಪಕ್ಷಗಳ ಪ್ರಭಾವದಿಂದಾಗಿ ಆರೋಗ್ಯ ಕ್ಷೇತ್ರದಲ್ಲಿನ ಬಿಕ್ಕಟ್ಟು ಎದುರಿಸಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು ಜಾರಿಗೆ ತಂದಿತು. ಈ ಅಭಿಯಾನದ ಮುಖ್ಯ ಉದ್ದೇಶ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು. ಆದರೆ ಈ ಅಭಿಯಾನದ ಕೊರತೆ ಹಣಕಾಸು. ಕೇಂದ್ರ ಸರ್ಕಾರ ಈ ಮೊದಲೇ ವಾಗ್ದಾನ ಮಾಡಿದ ಕೇವಲ 40% ಹಣವನ್ನು ಆರೋಗ್ಯ ಕ್ಷೇತ್ರ-ಕ್ಕೆ ಬಿಡುಗಡೆ ಮಾಡಿತು. ಇದರ ಪರಿಣಾಮ ತೃತೀಯ ಆರೋಗ್ಯ ವ್ಯವಸ್ಥೆ ನೀಡಲು ವ್ಯವಸ್ಥಿತ ಸಾಂಸ್ಥಿಕ ಆಸ್ಪತ್ರೆಗಳ ಉಗಮ.

ಸಾರ್ವಜನಿಕ ಆರೋಗ್ಯ ಈ ಹಂತದಲ್ಲಿ ಸಮಸ್ಯೆಯ ಸುಳಿಯಲ್ಲಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಕೊರತೆಗಳಿದ್ದಾಗ್ಯೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಬಲಗೊಂಡಿದೆ. ಈ ಹಂತದಲ್ಲಿ ಅದನ್ನು ಬಲಪಡಿಸುವ ಬದಲು ಸರಕಾರ ನವ ಉದಾರವಾದಿ ಆರ್ಥಿಕ ವ್ಯವಸ್ಥೆಯಿಂದ ಪ್ರಭಾವಿತವಾಗಿದೆ ಹಾಗೂ ಅದನ್ನು ಜಾರಿಗೆ ತರಲು ಮುಂದಾಗಿದೆ. ಈ ನಿಟ್ಟಿನಲ್ಲಿ ಜಾರಿಗೆ ಬಂದ ಮೊದಲ ಕಾರ್ಯಕ್ರಮ ಕೇಂದ್ರದಲ್ಲಿ ರಾಜೀವಗಾಂಧಿ ಸ್ವಾಸ್ಥ್ಯ ಭೀಮಾ ಯೋಜನೆ (ಆರ್‌ಎಸ್‌ಬಿವೈ) ಹಾಗೂ ರಾಜ್ಯಗಳಲ್ಲಿ ಅದೇ ತರಹದ ಯೋಜನೆಗಳು. ಈ ಭೀಮಾ ಯೋಜನೆಗೆ ಸರಕಾರ ಹಣಕಾಸು ನೀಡುತ್ತಿದ್ದು, ಇದರಲ್ಲಿ ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗೆ 30 ಸಾವಿರ ರೂಪಾಯಿ, ವಿಮಾ ಪರಿಹಾರ ದೊರಕುತ್ತದೆ.



ಇಲ್ಲಿ ಗಮನಿಸಿಬೇಕಾದ ಸಂಗತಿಯೆಂದ-ರೆ, ಚಿಕಿತ್ಸೆ ನೀಡುವ ಸಂಸ್ಥೆ ಸಾಮಾನ್ಯವಾಗಿ ಖಾಸಗಿ ಆರೋಗ್ಯ ಸಂಸ್ಥೆಯಾಗಿರುತ್ತದೆ. ಈ ತರಹದ ವಿಮಾ ಹಣವನ್ನು ಖಾಸಗಿ ಸಂಸ್ಥೆಗೆ ಕೊಡುವುದರಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿ ನಿರಂತರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ. ಈ ಖಾಸಗಿ ಸಂಸ್ಥೆಗಳು ಸರಕಾರಿ ಹಣ ಉಪಯೋಗಿಸಿ ಸರಕಾರದ ಖಜಾನೆಯನ್ನು ಬರಿದು ಮಾಡಲು ಹೊರಟಿವೆ. ಇತ್ತೀಚಿನ ಒಂದು ಬೆಳವಣಿಗೆ ಎಂದರೆ ಛತ್ತೀಸ್ ಗಢದಲ್ಲಿ ಆರೋಗ್ಯ ಇಲಾಖೆ 22 ನರ್ಸಿಂಗ್ ಹೋಂ ಮೇಲೆ ಕ್ರಮ ತೆಗೆದು ಕೊಂಡಾಗ ಅಲ್ಲಿ ಮಾಡಲಾಗುತ್ತಿದ್ದ ಅನಗತ್ಯ ಆಪರೇಶನ್‌ಗಳ ವಿಷಯ ಬಯಲಿಗೆ ಬಂದಿವೆ. ಎಂಟು ತಿಂಗಳಲ್ಲಿ ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳು 1800 ಗರ್ಭಕೋಶಗಳನ್ನು ತೆಗೆಯುವ ಆಪರೇಶನ್ ಮಾಡಿವೆ. ವಿಮಾಯೋಜನೆಗಳಿಂದ ಖಾಸಗಿ ಕೇಂದ್ರಗಳು ಸುಮಾರು 2 ಕೋಟಿ ರೂಪಾಯಿಗಳನ್ನು ಪಡೆದ ವಿಷಯ 'ಹಿಂದೂಸ್ಥಾನ್ ಟೈಮ್ಸ್'ನ ಆಗಸ್ಟ್ 14, 2012 ರ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದೇ ತರಹದ ಘಟನೆಗಳೂ ದೇಶದ ಹಲವಾರು ಕಡೆಗಳಲ್ಲಿ ವರದಿಯಾಗಿವೆ. ಈ ಘಟನೆಗಳು ಸಂಭವಿಸಿದರೂ ರಾಷ್ಟ್ರೀಯ ಆರೋಗ್ಯ ಅಭಿಯಾನ ಜಾರಿಯಲ್ಲಿದೆ ಹಾಗೂ ಖಾಸಗಿ ಸಂಸ್ಥೆಗಳಿಗೆ ಕಣ್ಣುರಿಯಾಗಿದೆ. ಇಂದು ಭಾರತದಲ್ಲಿ ಖಾಸಗಿ ವೈದಕೀಯ ವ್ಯವಸ್ಥೆಯ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಗಳ ಸಹಾಯ ಹಸ್ತದಿಂದ ದೊಡ್ಡ ಸಂಸ್ಥೆ (ಒಇಉಂ ಅಔಖಕಔಖಂಖಖಔಓ) ಯಾಗಿದ್ದು ಅಲ್ಲಿ ಆಸ್ಪತ್ರೆ ಸೇವೆ, ಖಾಸಗಿ ವಿಮಾ, ಔಷಧಿ ಪ್ರಯೋಗ ಉದ್ಯಮ ಹಾಗೂ ಔಷಧಿ ತಯಾರಿಕಾ ಸಂಸ್ಥೆಗಳ ಹೊಂದಾಣಿಕೆಯಿಂದ ಕೆಲಸ ಸಾಗಿಸುತ್ತವೆ. ಈ ದೊಡ್ಡ ಸಂಸ್ಥೆಗಳ ವ್ಯವಸ್ಥಾಪಕರು ಭಾರತೀಯ ಆಡಳಿತ ವ್ಯವಸ್ಥೆ ಹಾಗೂ ತಜ್ಞರ ಸಮಿತಿಯ ಮೇಲೆ ಪ್ರಭಾವ ಬೀರಿ ರಾಷ್ಟ್ರೀಯ ನೀತಿ ರೂಪಿಸಲು ಪ್ರಯತ್ನಿಸುತ್ತಿವೆ. ಇವರು ಖಾಸಗಿ ಆಸ್ಪತ್ರೆಗಳ ಮೇಲಿನ ನಿಯಂತ್ರಣ ಬಾರದಂತೆ ಹಾಗೂ ಸರಕಾರದ ಅನುದಾನ ನಿರಂತರವಾಗಿ ಖಾಸಗಿ ಸಂಸ್ಥೆಗಳಿಗೆ ಲಭ್ಯವಾಗುವಂತೆ ಪ್ರಯತ್ನಿಸುತ್ತಿದ್ದುದು ಈಗ ಮುಚ್ಚಿಡದ ಸಂಗತಿಯಾಗಿದೆ. ಅದು ಯೋಜನಾ ಆಯೋಗದ ಆರೋಗ್ಯ ನೀತಿಯ ಮೇಲೂ ಪ್ರಭಾವ ಬೀರಿರುವುದು ಬಹಿರಂಗವಾದ ಸಂಗತಿ.

ಆರೋಗ್ಯಕ್ಕೆ ಅತಿ ಕಡಿಮೆ ಸಂಪನ್ಮೂಲ ಹೂಡಿಕೆ

ಯೋಜನಾ ಆಯೋಗ "ಹೈಲೆವೆಲ್ ಎಕ್ಸಪರ್ಟ್ ಕಮಿಟಿ" ನೇಮಿಸಿ ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಏನು ಮಾಡಬಹುದು ಎಂಬುದರ ಬಗ್ಗೆ ಸಲಹೆ ಕೇಳಿತ್ತು. ಸರ್ಕಾರದ ಆರೋಗ್ಯ ಹಾಗೂ ಕುಟುಂಬ ಯೋಜನೆ ಇಲಾಖೆಯು ಇನ್ನೊಂದು ತಜ್ಞರ ಗುಂಪನ್ನು ಆಯೋಜಿಸಿ, ಆರೋಗ್ಯ ಸುಧಾರಣೆಗೆ ಸಲಹೆ ಕೇಳಿತ್ತು. ಸರಕಾರ ಈ ಬಾರಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸುಧಾರಿಸಲು 12 ನೇ ಯೋಜನಾ ಅಯೋಗದಲ್ಲಿ ಹೆಚ್ಚಿನ ಹಣ ಹೂಡಲು ತಯಾರಿ ನಡೆಸಿತ್ತು. ಅಂತಿಮವಾಗಿ ಸರಕಾರ ಸಾರ್ವಜನಿಕ ಆರೋಗ್ಯಕ್ಕೆ ಒಟ್ಟು ಆಂತರಿಕ ಉತ್ಪನ್ನದ ಪ್ರತಿಶತ 1.02% ನಿಂದ 1.58%ಗೆ ಏರಿಸಿದೆ.

ಇಲ್ಲಿ ಗಮನಿಸಿಬೇಕಾದ ವಿಷಯವೆಂದರೆ, ಇದು ಸರಕಾರ 11ನೇ ಯೋಜನಾ ಆಯೋಗ ಏರಿಸಬೇಕೆಂದಿದ್ದ ಹಣಕಾಸಿಗಿಂತಲೂ (2%) ಕಡಿಮೆ ಇದೆ ಹಾಗೂ ವಿಶ್ವಾರೋಗ್ಯ ಸಂಸ್ಥೆಯ .ಆದೇಶಕ್ಕಿಂತಲೂ (5%) ಕಡಿಮೆ

ಪುಟ 6 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊರತೆ

ಕರ್ನಾಟಕ ರಾಜ್ಯ ಇನ್ನೊಂದು ಭೀಕರ ಬರದ ಹೊಸ್ತಿಲಲ್ಲಿ ಇದ್ದಂತೆ ಕಾಣುತ್ತದೆ. ಹಿಂದಿನ ವರ್ಷ ಮಳೆ ಕೈಕೊಟ್ಟ ಪರಿಣಾಮವಾಗಿ ಜಲಾಶಯಗಳಲ್ಲಿ ಅಗತ್ಯವಿರುವಷ್ಟು ನೀರು ಸಂಗ್ರಹ ಆಗಲಿಲ್ಲ. ಹೀಗಾಗಿ ಈ ವರ್ಷ ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಕೆರೆ ಕಟ್ಟೆಗಳು ಬರಿದಾಗಿವೆ. ಬೇಸಿಗೆ ಬೆಳೆ ಬಹುತೇಕ ನಾಶವಾಗಿದೆ. ಕೃಷಿ ಕೂಲಿಕಾರರಿಗೆ ಗ್ರಾಮೀಣ ಪ್ರದೇಶದಲ್ಲಿ ಕೆಲ್ಸ ಕೊಡುವವರು ಇಲ್ಲ. ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಅರ್ಜಿ ಹಾಕಿದರೂ ಕೆಲ್ಸ ಕೊಡುವುದಿಲ್ಲ; ಕೆಲ್ಸ ಕೊಟ್ಟರೂ ಮಾಡಿದ ಕೆಲಸಕ್ಕೆ ಸರಿಯಾದ ಕೂಲಿ ಕೊಡುವುದಿಲ್ಲ ಎಂದು ಶಾಪ ಹಾಕುತ್ತಾ ಉತ್ತರ ಕರ್ನಾಟಕದ ಜನ ಹೊಟ್ಟೆಪಾಡಿಗಾಗಿ ಕೂಲಿ ನಾಲಿ ಅರಸಿ ಗುಳೆ ಹೋಗುತ್ತಿದ್ದಾರೆ.

ಕಾಲುವೆ ನೀರಾವರಿ ಕೈಕೊಟ್ಟಾಗ ರೈತರನ್ನು ಬದುಕಿಸುತ್ತಿದ್ದುದು ಕೊಳವೆ ಬಾವಿಗಳು. ಆದರೆ ರಾಜ್ಯದ ರೈತರ ಕೊಳವೆ ಬಾವಿಗಳಿಗೆ ಸಮರ್ಪಕ ವಿದ್ಯುತ್ ಪೂರೈಸದ ಪರಿಣಾಮವಾಗಿ ರಾಜ್ಯದಲ್ಲಿ ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಒಣಗುವ ಆತಂಕ ಎದುರಾಗಿದೆ. ಬೇಸಿಗೆಯಲ್ಲೂ ದಿನಕ್ಕೆ 6 ತಾಸು 3ಫೇಸ್ ವಿದ್ಯುತ್ ಕೊಡುವುದಾಗಿ ರಾಜ್ಯ ಬಿಜೆಪಿ ಸರ್ಕಾರ ಹೇಳಿತ್ತು. ಇದನ್ನು ನಂಬಿದ ರೈತರೂ ಭತ್ತ, ಕಬ್ಬು, ತರಕಾರಿ, ಹೂ-ಹಣ್ಣು ಸೇರಿದಂತೆ ನಾನಾ ಬೆಳೆಗಳನ್ನು ಬೆಳೆದಿದ್ದರು. ಆದರೆ ಗ್ರಾಮೀಣ ಭಾಗದಲ್ಲಿ ದಿನಕ್ಕೆ 3 ತಾಸು ಕೂಡ 3 ಫೇಸ್ ವಿದ್ಯುತ್ ಸರಬರಾಜು ಆಗುತ್ತಿಲ್ಲ. ಇದರ ಪರಿಣಾಮವಾಗಿ ಬೆಳೆಗಳು ಒಣಗುತ್ತಿವೆ. ರೈತರು ಕಂಗಾಲಾಗಿದ್ದಾರೆ.

ರಾಜ್ಯದಲ್ಲಿ ಸುಮಾರು 18 ಲಕ್ಷ ಅಧಿಕೃತ ಮತ್ತು ಸುಮಾರು 4ಲಕ್ಷ ಅನಧಿಕೃತ ಪಂಪ್‌ಸೆಟ್‌ಗಳಿವೆ ಎನ್ನಲಾಗುತ್ತಿದೆ. 10 ಎಚ್.ಪಿ.ಗಿಂತ ಹೆಚ್ಚು ಸಾಮರ್ಥ್ಯದ ಪಂಪ್‌ಸೆಟ್‌ಗಳಿಗೆ 3 ಫೇಸ್ ವಿದ್ಯುತ್ ಅವಶ್ಯ. ಆದರೆ ರಾಜ್ಯ ಬಿಜೆಪಿ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳದೆ ಇರುವುದರಿಂದ ಸಾವಿರಾರು ರೂಪಾಯಿ ಖರ್ಚುಮಾಡಿ ಭೂಮಿಗೆ ಬೀಜ, ಗೊಬ್ಬರ ಸುರಿದ ರೈತರಿಗೆ ಈಗ ದಿಕ್ಕು ತೋಚದಂತಾಗಿದೆ.

ವಿದ್ಯುತ್ ಪೂರೈಕೆಗೆ ನಿರ್ದಿಷ್ಟ ಸಮಯ ಎಂಬುದು ಇಲ್ಲ. ಹೀಗಾಗಿ ರೈತರು ಯಾವಾಗಲೂ ಪಂಪ್‌ಸೆಟ್ ಮುಂದೆಯೇ ಕಾಯುತ್ತಿರಬೇಕಾಗುತ್ತದೆ. ಹಗಲು ಕೂಡ ಪದೇ ಪದೇ ವಿದ್ಯುತ್ ಕೈಕೊಡುವುದರಿಂದ ನೀರೆತ್ತಲು ಸಾಧ್ಯವಾಗುತ್ತಿಲ್ಲ. ಮಧ್ಯರಾತ್ರಿ 12 ಗಂಟೆ., 1ಗಂಟೆ, 2ಗಂಟೆಗೆ ಹೀಗೆ ಅನಿರ್ದಿಷ್ಟವಾಗಿ 3 ಫೇಸ್ ವಿದ್ಯುತ್ ಕೊಡುವುದರಿಂದ ರೈತರು ನಿದ್ದೆಗೆಟ್ಟು ಕಾಯಬೇಕಾಗುತ್ತದೆ.

ಬೇಸಿಗೆ ಅವಧಿಯಲ್ಲಿ ರಾಜ್ಯದಲ್ಲಿ 6.81 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೆ ಕೃಷಿ ಇಲಾಖೆಯ ಮಾಹಿತಿಯ ಪ್ರಕಾರ ಶೇ. 75ರಷ್ಟು ಕ್ಷೇತ್ರದಲ್ಲಿ ಮಾತ್ರ ಬಿತ್ತನೆಯಾಗಿದೆ. ತುಂಗಭದ್ರ ಮತ್ತು ಕಾವೇರಿ ಕಣಿವೆಯಲ್ಲಿ ನೀರಿನ ಕೊರತೆಯಿಂದಾಗಿ 3.01 ಲಕ್ಷ ಹೆಕ್ಟೇರ್ ಬದಲು 1.47 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಭತ್ತ ನಾಟಿಯಾಗಿದೆ. ಸುಮಾರು 2.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬೆಳೆ ಇದೆ. ಅಲ್ಲದೇ ಕಬ್ಬು, ಮೆಕ್ಕೆ ಜೋಳ ಮುಂತಾದ ಬೆಳೆಗಳನ್ನು ರೈತರು ಬೆಳೆದಿದ್ದಾರೆ. ಆದರೆ ನೀರು ಇಲ್ಲದೆ ಬೆಳೆಗಳು ಒಣಗುತ್ತಿವೆ.

ವಿದ್ಯುತ್ ಕೊರತೆ ಹೆಚ್ಚು ಕಾಡುತ್ತಿರುವುದು ತೋಟಗಾರಿಕೆ ಬೆಳೆಗಳಿಗೆ. ತರಕಾರಿ, ಹೂ, ಹಣ್ಣು ಬೆಳೆಗಳಿಗೆ ಪ್ರತಿನಿತ್ಯ ನೀರು ಪೂರೈಸದಿದ್ದರೆ ಅವು ಬಾಡುತ್ತವೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ತರಕಾರಿ, ಹಣ್ಣುಗಳು ಮತ್ತಷ್ಟು ದುಬಾರಿ ಆಗಲಿವೆ.


ಜನ ಮತ್ತು ಜಾನುವಾರುಗಳ ಕುಡಿಯುವ ನೀರಿಗೂ ಪಂಪ್‌ಸೆಟ್‌ಗಳು ಅವಶ್ಯ. ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗುತ್ತಿರುವ ಈ ದಿನಗಳಲ್ಲಿ ಪಂಪ್‌ಗಳಿಗೆ ವಿದ್ಯುತ್ ಪೂರೈಕೆಯ ಕೊರತೆ, ಸಮಸ್ಯೆಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಕೊಳವೆ ಬಾವಿಗಳಲ್ಲಿ ನೀರು ಇದ್ದರೂ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಇಲ್ಲದಿದ್ದಾಗ ನೀರೆತ್ತಲಾಗದೆ ಕುಡಿಯುವ ನೀರಿಗಾಗಿ ಜನ ಪರದಾಡಬೇಕಾಗುತ್ತದೆ. ರಾಜ್ಯದ ಜನತೆ ಕುಡಿಯುವ ನೀರಿನ ಬರದಲ್ಲಿ ಬಳಲುತ್ತಿರುವಾಗಲೇ ವಿದ್ಯುತ್ ದರವನ್ನು ಹೆಚ್ಚಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ತೀರ್ಮಾನಿಸಿದ್ದು ಖಂಡನೀಯವಾಗಿದೆ. ಇನ್ನು ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ವಿದ್ಯುತ್ ದರ ಪರಿಷ್ಕರಣೆ ಆಗಲಿದೆ ಎನ್ನಲಾಗುತ್ತಿದ್ದು ಇದನ್ನು ತೀವ್ರವಾಗಿ ವಿರೋಧಿಸುವ ಅಗತ್ಯವಿದೆ. ಗುಣಮಟ್ಟದ ವಿದ್ಯುತ್ತನ್ನು ಅಗತ್ಯಕ್ಕೆ ತಕ್ಕಂತೆ ಒದಗಿಸಲಾಗದ ಎಸ್ಕಾಂಗಳಿಗೆ ದರಗಳನ್ನು ಹೆಚ್ಚಿಸಲು ಹಕ್ಕೆಲ್ಲಿದೆ?

ರಾಜ್ಯದಲ್ಲಿ ಇಂದು ತಲೆದೋರಿರುವ ವಿದ್ಯುತ್ ಸಮಸ್ಯೆಗೆ ರಾಜ್ಯ ಬಿಜೆಪಿ ಸರ್ಕಾರದ ಬೇಜವಾಬ್ದಾರಿತನವೇ ಪ್ರಧಾನ ಕಾರಣವಾಗಿದೆ. ಬಿಜೆಪಿ ಸರ್ಕಾರದಲ್ಲಿ ಯಾವುದೇ ಲಂಗುಲಗಾಮು ಇಲ್ಲದೆ ರಾಕ್ಷಸಾಕಾರದಲ್ಲಿ ಬೆಳೆದ ಭ್ರಷ್ಟಾಚಾರ, ಅದರೊಂದಿಗೆ ಅದರ ಹೈಕಮಾಂಡಿಗೂ ನಿಯಂತ್ರಿಸಲಾಗದ ರೀತಿಯಲ್ಲಿ ಬೆಳೆದು ಬಂದ ಅಧಿಕಾರಕ್ಕಾಗಿನ ಆಂತರಿಕ ಕಿತ್ತಾಟದಿಂದಾಗಿ ಜನತೆಯ ಸಮಸ್ಯೆಗಳಿಗೆ ಸ್ಪಂಧಿಸುವ ವ್ಯವಧಾನವನ್ನೇ ಈ ಸರ್ಕಾರ ಕಳೆದುಕೊಂಡಿತು. ಮುಂದಾಲೋಚನೆ, ಮುನ್ನೆಚ್ಚರಿಕೆಯಂತಹ ಕ್ರಮಗಳಿಗೆ ಗಮನವೇ ಇಲ್ಲವಾಯಿತು. ಇಂತಹ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರುವುದನ್ನು ತಡೆಯುವುದೇ ಈಗ ಉಳಿದಿರುವ ದಾರಿ.

ರಂಗಾಯಣ: ಸ್ವಾಯತ್ತತೆ ಹಾಳಾಗದಿರಲಿ

ಸಾಂಸ್ಕೃತಿಕ ವಿಶಿಷ್ಟ ಪ್ರಯೋಗಗಳಿಂದ ಖ್ಯಾತವಾಗಿದ್ದ ಮೈಸೂರಿನ ರಂಗಾಯಣ ಇತ್ತೀಚಿನ ದಿನಗಳಲ್ಲಿ ಹಲವು ವಿವಾದಗಳ ನಡುವೆ ಬೇಯುತ್ತಿದೆ. ಸೃಜನಶೀಲ, ಅದರಲ್ಲೂ ಸಾರ್ವಜನಿಕ ಸಂಸ್ಥೆಯೊಂದು ತನ್ನನ್ನು ಜನಮುಖಿಯಾಗಿರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಹತ್ತಾರು ವಿವಾದಗಳು ಹುಟ್ಟುವುದೂ ಸಹಜ. ಆದರೆ ರಂಗಾಯಣ ಸುದ್ದಿ ಮಾಡುತ್ತಿರುವುದು ಅದರಲ್ಲಲ್ಲ, ಆಡಳಿತಾತ್ಮಕ ವಿಷಯಗಳಲ್ಲಿ. ಅದರಲ್ಲೂ ಇಂತಹ ಒಂದು ಸಾಂಸ್ಕೃತಿಕ ಸಂಸ್ಥೆಯೊಂದರ ಬೆಳವಣಿಗೆಗೆ ಸರ್ವ ಸಹಕಾರ, ಸ್ವಾಯತ್ತತೆ ನೀಡಿ ಪ್ರೋತ್ಸಾಹಿಸಬೇಕಾದ ಸರಕಾರವೇ ಅದರ ಸಾಮಾನ್ಯ ವ್ಯವಹಾರಗಳಲ್ಲಿಯೂ ಹಸ್ತಕ್ಷೇಪ ನಡೆಸುತ್ತಾ ಅನಾರೋಗ್ಯಕರ ವಾತಾವರಣ ನಿರ್ಮಿಸುತ್ತಿರುವುದು ದುರಂತವಾಗಿದೆ.

ವಿವಾದಗಳು



ಇತ್ತೀಚೆಗೆ ರಂಗಾಯಣದ ಸುಮಾರು 12 ಕಲಾವಿದರನ್ನು ಏಕಾಏಕಿಯಾಗಿ ನಿರ್ಮಿತಗೊಳ್ಳುತ್ತಿರುವ ಧಾರವಾಡ ಮತ್ತು ಶಿವಮೊಗ್ಗ ಕೇಂದ್ರಗಳಿಗೆ ಕನ್ನಡ-ಸಂಸ್ಕೃತಿ ಇಲಾಖೆ ವರ್ಗಾಯಿಸಿ ಆದೇಶ ಹೊರಡಿಸಿತು. ಇದನ್ನು ಪ್ರಶ್ನಿಸಿದ ಮತ್ತು ಪ್ರತಿಭಟಿಸಿದ ಕಲಾವಿದರ ಮೇಲೆ ಕ್ರಮ ಜರುಗಿಸಲಾಯಿತು. ಅಲ್ಲದೇ ಇದನ್ನು ಆಕ್ಷೇಪಿಸಿದ ಸಂಸ್ಥೆಯ ನಿರ್ದೇಶಕರಾದ ಬಿ.ವಿ.ರಾಜಾರಾಮ್ ರವರನ್ನೇ ನಿರ್ದೇಶಕ ಹುದ್ದೆಯಿಂದ (ಪದಮುಕ್ತ) ವಜಾಗೊಳಿಸಲಾಯಿತು. ಇದಕ್ಕೂ ಕೆಲವು ತಿಂಗಳ ಮೊದಲು ನಿರ್ದೇಶಕರಿಗಿದ್ದ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ಹಿಂಪಡೆದು ಇದ್ದ ಕನಿಷ್ಟ ಅಧಿಕಾರವನ್ನು ಮೊಟಕುಗೊಳಿಸಲಾಯಿತು.

ಸರಕಾರದ ಒಟ್ಟು ಈ ಕ್ರಮಗಳನ್ನು ಗಮನಿಸಿದರೆ ಅದು ತನ್ನ ಕ್ರಮಗಳನ್ನು ಈಗ ಹೊರಗೆ ಸಮರ್ಥಿಸಿಕೊಳ್ಳುವಷ್ಟು ಸಹಜ ನಡೆಯೆಂದು ಖಂಡಿತ ಅನ್ನಿಸಲಾರದು. ಬದಲಾಗಿ, ಅದರ ದುರುದ್ದೇಶವೇ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಹಿಂದೆಯೂ ಜಯಶ್ರೀಯವರು ನಿರ್ದೇಶಕರಾಗಿದ್ದಾಗಲೂ ಇಂತಹ ವರ್ಗಾವಣೆ, ಘರ್ಷಣೆಗಳು ನಡೆದಿದ್ದವು. ಇದು ತಾರಕ ಸ್ವರೂಪ ಪಡೆದು ನಿರ್ದೇಶಕ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ನಿರ್ಗಮಿಸಿದ್ದಾಯಿತು. ಅಂದರೆ ಹಂತ ಹಂತವಾಗಿ ಘರ್ಷಣೆಗಳನ್ನು ಹುಟ್ಟು ಹಾಕುವ, ರಂಗಾಯಣವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ.

ದುರ್ಬಲಗೊಳಿಸುವ ಪ್ರಯತ್ನ

ಒಂದು ವಿಷಯವನ್ನಿಲ್ಲಿ ಗಮನಿಸಬೇಕು. 'ನಾಟಕ ಕರ್ನಾಟಕ ರಂಗಾಯಣ' ವೆಂಬ ಈ ಸಂಸ್ಥೆ ಆರಂಭಗೊಂಡುದುದು 1989 ರ ಜನವರಿ 14ರಂದು. ಇದಕ್ಕೀಗ 25ರ ಸಂಭ್ರಮ. ಇದು ಸುವಿಖ್ಯಾತ ರಂಗ ನಿರ್ದೇಶಕ, ಪ್ರತಿಭಾನ್ವಿತ ಬಿ.ವಿ.ಕಾರಂತರ ಕನಸಿನ ಕೂಸು. ಈ ದಶಕವೂ ಕರ್ನಾಟಕದ ಅಂದಿನ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಅತ್ಯಂತ ಕ್ರಿಯಾಶೀಲವಾಗಿದ್ದ, 'ಸಮುದಾಯ'ದಂತಹ ಸಾಂಸ್ಕೃತಿಕ ಚಳುವಳಿಯ ಸಂಘಟನೆ ಜನಪರ, ಎಡಪಂಥೀಯ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಪ್ರಭಾವಶಾಲಿ ಪಾತ್ರ ನಿರ್ವಹಿಸುತ್ತಿದ್ದ ಕಾಲಘಟ್ಟದಲ್ಲಿ. ರಂಗಾಯಣವನ್ನು ಆರಂಭಿಸುವಾಗ ಇದೊಂದು ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆಯಾಗಿ, ವೃತ್ತಿ ತರಬೇತಿ, ದಾಖಲಾತಿ, ರಂಗ ಸಂಶೋಧನೆ, ನಾಟಕ ಪ್ರದರ್ಶನದ ಗುರಿಯನ್ನು ಹೊಂದಿತ್ತು. ಕಾರಂತರ ನಂತರ ಪ್ರಸನ್ನ, ಸಿ.ಬಸವಲಿಂಗಯ್ಯ, ಜಂಬೆ ಲಿಂಗದೇವರು ಹಳೇಮನೆ ಮುಂತಾದ ಹಲವಾರು ಪ್ರತಿಭಾನ್ವಿತ ನಿರ್ದೇಶಕರು ಬಂದು ಹೋಗಿದ್ದಾರೆ. ಅವರದ್ದೇ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾರೆ. ಅವರೆಲ್ಲರ ಒಂದು ಸಾಮಾನ್ಯ ಕೇಳಿಕೆ ಸ್ವಾಯತ್ತತೆಯ ಪ್ರಶ್ನೆ, ಸಂಸ್ಥೆ ಬಲಗೊಳಿಸುವ ನಿಟ್ಟಿನಲ್ಲಿ ಇನ್ನಷ್ಟು ಹೆಚ್ಚಿನ ಅಧಿಕಾರ. ಆದರೆ ಸರಕಾರದ ಪ್ರತಿಕ್ರಿಯೆ ಮತ್ತು ಕ್ರಮಗಳು ಇದನ್ನು ಬಲಗೊಳಿಸುವ ಬದಲು ದುರ್ಬಲಗೊಳಿಸುವ ದಿಕ್ಕಿನಲ್ಲೇ ಸಾಗಿದ್ದು ದುರಂತ.

ಸರ್ವಾಧಿಕಾರಿತನ

ಈಗಿನ ವಿವಾದದಲ್ಲೂ ಸರಕಾರ ಸ್ಪಷ್ಟವಾಗಿ ಆ ಆಶಯಗಳನ್ನು ಗಾಳಿಗೆ ತೂರಿದೆ. ನಿಜ ಇಲ್ಲಿ ಹಲವಾರು ಉಜ್ವಲ ಪ್ರತಿಭೆಗಳು ಬೆಳೆದಿವೆ, ಬೆಳಗಿವೆ. ಹಾಗೇ ಇಲ್ಲಿ ತಯಾರಾದವರು ಹಲವಾರು ಪ್ರದೇಶಗಳಲ್ಲಿ ತರಬೇತಿ ನೀಡಿ ರಂಗ ಚಟುವಟಿಕೆಗಳನ್ನು ವಿಸ್ತರಿಸಬೇಕು, ಬೇರೆಡೆಗೆ ಹೋಗಬೇಕೆಂಬುದು ಸರಿ. ಆದರೆ ಅದಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯ, ಸಾಧ್ಯತೆಗಳನ್ನೂ ಕಲ್ಪಿಸಬೇಕು. ಅಲ್ಲಿಗೆ ಒಮ್ಮೆಗೆ ಇಷ್ಟು ಕಲಾವಿದರನ್ನು ವರ್ಗಾಯಿಸಿ ಬಿಟ್ಟರೆ ಮೈಸೂರಿನ ಕೇಂದ್ರದಲ್ಲಿನ ಚಟುವಟಿಕೆಗಳು ಮುಚ್ಚುವಂತಾಗುವ ಆತಂಕ ಸುಲಭವಾಗಿ ತಳ್ಳಿ ಹಾಕುವಂತಹುದಲ್ಲ. ಮೇಲಾಗಿ ತಾನು ಅನುದಾನ ನೀಡುತ್ತಿರುವುದರಿಂದಾಗಿ ಅವರೆಲ್ಲಾ ತನ್ನ ಆದೇಶಕ್ಕನುಗುಣವಾಗಿ ನಡೆದುಕೊಳ್ಳಬೇಕಾದ ನೌಕರರೆಂದೂ, ಇಲ್ಲವಾದರೆ ವಜಾಗೊಳಿಸುವ ಭಾಷೆ, ಬೆದರಿಕೆಗಳಿಂದ ಸಾಂಸ್ಕೃತಿಕ ಸಂಸ್ಥೆ ಅಥವಾ ಕಲಾವಿದರನ್ನು ದುಡಿಸಿಕೊಳ್ಳಬಹುದು, ನಡೆಸಿಕೊಳ್ಳುವುದು ಎನ್ನುವುದು ಸರಿಯಲ್ಲ. ತನ್ನ ಸಲಹೆ ಸೂಚನೆ, ಕಾರ್ಯ ಯೋಜನೆ ನಿರ್ಧಾರಗಳನ್ನು ಹಂತ ಹಂತವಾಗಿ, ಅವರ ಜೊತೆ ಮುಕ್ತ ಸಮಾಲೋಚನೆ, ವಿಶ್ವಾಸಕ್ಕೆ ತೆ-ಗೆದುಕೊಂಡು ಬಳಿಕ ಜಾರಿ ಮಾಡಬೇಕಾದುದು ಅಗತ್ಯ. ಆದರೆ ಇಲ್ಲಿ ಕಲಾವಿದರ ಜೊತೆಗಿರಲಿ, ನಿರ್ದೇಶಕರೊಂದಿಗೇ ಸಮಾಲೋಚಿಸದೇ ಈ ಸರಕಾರ ಎಂದಿನ ತನ್ನ ಸರ್ವಾಧಿಕಾರಿ ಅಧಿಕಾರಶಾಹೀ ಪ್ರವೃತ್ತಿಯಲ್ಲಿ ವರ್ತಿಸಿರುವುದು ಅಕ್ಷಮ್ಯ.


ಹೀಗೆ ಸರಕಾರ ರಂಗಾಯಣದಂತಹ ಸಾಂಸ್ಕೃತಿಕ ಸಂಸ್ಥೆಯೊಂದರ ಕತ್ತು ಹಿಸುಕುವಲ್ಲಿ

ಪುಟ 6 ಕ್ಕೆ

ಬಳ್ಳಾರಿ ವಾರ್ತೆ

ನದಿಗೆ ನೀರು ಬಿಡಲು ಒತ್ತಾಯಿಸಿ ಧರಣಿ :

ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ತುಂಗಭದ್ರ ಜಲಾಶ್ರಯದಿಂದ ನದಿಗೆ ನೀರು ಬಿಡುವಂತೆ ಕೆಂಚನಗುಡ್ಡ, ದೇಶನೂರು, ದ್ಯಾವಲಾಪುರ, ಇಬ್ರಾಂಪುರ, ಸಿರುಗುಪ್ಪ ಪಟ್ಟಣ ಸೇರಿದಂತೆ ಹಲವಾರು ಹಳ್ಳಿಗಳ ರೈತರು ಧರಣಿಯಲ್ಲಿ ಭಾಗವಹಿಸಿದ್ದರು.





ಒತ್ತಾಯಿಸಿ ಇತ್ತೀಚೆಗೆ ಕರ್ನಾಟಕ ಪ್ರಾಂತ ರೈತ ಸಂಘ ಕಾರ್ಯಕರ್ತರು ಸಿರುಗುಪ್ಪ ತಹಸಿಲ್ದಾರ್ ಕಚೇರಿ ಎದುರು ಧರಣಿ ನಡೆಸಿದರು

ಕಳೆದ ಜನವರಿ ತಿಂಗಳಲ್ಲಿ ಕಂಪ್ಲಿ,ಸಿರುಗುಪ್ಪ ಭಾಗದ ರೈತರು ಧರಣಿ ಪ್ರಾರಂಭಿಸಿದಾಗ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಆನಂದ ಸಿಂಗ್, ಸಂಸದೆ ಜೆ.ಶಾಂತ, ಎಂ.ಎಲ್.ಸಿ.ಜಿನಗಾ ಮಾರ್ಚ್ 31 ರ ವರಗೆ 1100 ಕ್ಯೂಸೆಕ್ಸ್ ನೀರು ಹರಿಸುವ ಭರವಸೆ ನೀಡಿದ್ದರು. ಆದರೆ ಜನವರಿ 21 ಕ್ಕೇ ನೀರು ಬಂದ್ ಮಾಡಲಾಗಿತ್ತು. ಪರಿಣಾಮವಾಗಿ ಕಾಲುವೆ ಮತ್ತು ನದಿ ಪಾತ್ರದ ರೈತರ ಬೆಳೆಗಳು ಸಂಪೂರ್ಣ ನಾಶವಾಗಿವೆ ಮಾತ್ರವಲ್ಲ ಕುಡಿಯಲೂ ನೀರಿಲ್ಲದಂತಾಗಿದೆ. ನದಿಯಲ್ಲಿರುವ ಅಲ್ಪಸ್ವಲ್ಪ ನೀರು ದುರ್ವಾಸನೆ ಬೀರುತ್ತಿದೆ. ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಸಂಚಾಲಕ ಅಡಿವೆಪ್ಪ ಹಾನಿಯಾದ ಬೆಳೆಗಳ ಬಾಬತ್ತು ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಮತ್ತು ತುರ್ತಾಗಿ ಕುಡಿಯುವ ನೀರಿಗಾಗಿ ನದಿಗೆ ಒಂದು ಟಿ.ಎಂ.ಸಿ. ನೀರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿದರು. ತಾಲ್ಲೂಕಿನ

ಕೂಲಿ ಪಾವತಿಗೆ ಆಗ್ರಹಿಸಿ ಪ್ರತಿಭಟನೆ :

ಉದ್ಯೋಗ ಖಾತ್ರಿಯೋಜಯಡಿ ಕೆಲಸ ಮಾಡಿದ 1200ಕ್ಕೂ ಹೆಚ್ಚು ಕೂಲಿಕಾರರಿಗೆ ದೇಶನೂರ ಗ್ರಾಮ ಪಂಚಾಯ್ತಿಯವರು ಕೂಲಿ ಪಾವತಿ ಮಾಡಿಲ್ಲ ಎಂದು ಸಿರುಗುಪ್ಪ ತಾಲ್ಲೂಕು ಪಂಚಾಯ್ತಿ ಎದುರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದವರು ಪ್ರತಿಭಟಿಸಿದರು. ಕಳೆದ ಜನವರಿ 30 ರಿಂದ ಫಬ್ರವರಿ 6 ರ ವರೆಗೆ ನಿತ್ಯವೂ 200 ಜನ ಕೂಲಿಕಾರರಿಂದ ಕಾಲುವೆಯ ಹೂಳು ತೆಗೆಯಿಸಲಾಗಿದ್ದು ಇಲ್ಲಿಯ ವರೆಗೆ ಕೂಲಿ ಹಣ ಪಾವತಿ ಮಾಡಿಲ್ಲ. ನಿತ್ಯವೂ ಕೂಲಿ ಹಣಕ್ಕಾಗಿ ಗ್ರಾಮ ಪಂಚಾಯ್ತಿಗೆ ಅಲೆಯುತ್ತಿದ್ದೇವೆ. ಬಡ ಕೂಲಿಕಾರರಿಗೆ ತಿಂಗಳುಗಟ್ಟಲೆ ಕೂಲಿ ಹಣ ಪಾವತಿ ಮಾಡದಿದ್ದರೆ ಜೀವನ ಸಾಗಿಸುವುದು ಹೇಗೆ ಎಂದು ಕೂಲಿಕಾರರ ಸಂಘದ ಗ್ರಾಮ ಘಟಕದ ಅಧ್ಯಕ್ಷ ಇಬ್ರಾಂಪುರ ಅಬ್ದುಲ್ ಸಾಬ್ ಕೇಳುತ್ತಾರೆ. ಕೂಲಿಕಾರರಿಗೆ ತಕ್ಷಣ ಕೂಲಿ ಪಾವತಿ ಮಾಡಬೇಕೆಂದು ಒತ್ತಾಯಿಸುವ ಮನವಿಯೊಂದನ್ನು ತಾಲ್ಲೂಕು ಪಂಚಾಯ್ತಿ ಅಧಿಕಾರಿಗೆ ನೀಡಲಾಯಿತು ಎಂದು ತಾಲ್ಲೂಕು ಸಂಚಾಲಕ ಇ.ಆರ್.ಯಲ್ಲಪ್ಪ ತಿಳಿಸಿದ್ದಾರೆ.

ಬ್ಯಾಂಕ್ ಮೂಲಕ ವೇತನ ಪಾವತಿಗೆ ಒತ್ತಾಯ :

ಪ್ರತಿ ತಿಂಗಳು ಬ್ಯಾಂಕ್ ಮೂಲಕ ವೇತನ ಪಾವತಿಮಾಡಬೇಕು ಎಂಬ ಬೇಡಿಕೆ-ಯೂ ಸೇರಿದಂತೆ ಇನ್ನಿತರ ಬೇಡಿಕೆಗಳಿಗಾಗಿ ಒತ್ತಾಯಿಸಿ ಸರ್ಕಾರಿ ಹಾಸ್ಟೇಲ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರು ಇತ್ತೀಚೆಗೆ ಜಿಲ್ಲಾ ಪಂಚಾಯಿತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಕಳೆದ 15-20 ವರ್ಷಗಳಿಂದ ಸರ್ಕಾರಿ ಹಾಸ್ಟೇಲ್‌ಗಳಲ್ಲಿ ಸೇವೆಸಲ್ಲಿಸುತ್ತಿರುವ ಅಡುಗೆ ಸಹಾಯಕರು, ಸ್ವಚ್ವತಾ ಕೆಲಸಗಾರರು, ಕಾವಲುಗಾರರು ಮತ್ತಿತರ ದಿನಗೂಲಿ ನೌಕರರು ತಮ್ಮ ಸೇವೆ ಕಾಯಂ ಆಗುತ್ತದೆ ಎಂಬ ಆಶಾಭಾವನೆಯೊಂದಿಗೆ ಕಡಿಮೆ ವೇತನದಲ್ಲೇ ದುಡಿಯುತ್ತಿದ್ದಾರೆ. ಆದರೆ ಇದೀಗ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ದುಡಿಸಿಕೊಳ್ಳಲಾಗುತ್ತಿದ್ದು ಆ ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರ ನಿಗದಿಪಡಿಸಿದ ಕನಿಷ್ಠ ಕೂಲಿಯನ್ನೂ ನೀಡದೆ ನೌಕರರಿಗೆ ಮೋಸ ಮಾಡುತ್ತಿವೆ.

ಹಾಸ್ಟೇಲ್ ದಿನಗೂಲಿ ನೌಕರರಿಗೆ ಬ್ಯಾಂಕ್ ಮೂಲಕ ಪ್ರತಿ ತಿಂಗಳಿನ 10 ನೇ ತಾರೀಖಿನೊಳಗೆ ವೇತನ ಪಾವತಿಸಬೇಕು, ಸ್ವಯಂ ಸೇವಾ ಸಂಸ್ಥೆ ಮೂಲಕ ದುಡಿಸಿಕೊಳ್ಳವುದನ್ನು ಕೈ ಬಿಟ್ಟು, ಸೇವೆಯನ್ನು ಕಾಯಂ ಮಾಡಬೇಕು, ಯಾವುದೇ ತಾರತಮ್ಯ ಮಾಡದೆ ಸಮಾನ ವೇತನ ನೀಡಬೇಕು, ಮಾಸಿಕ ರೂ 10 ಸಾವಿರ ಕನಿಷ್ಠ ವೇತನ ನಿಗದಿಪಡಿಸಬೇಕು, ಇಎಸ್‌ಐ, ಮತ್ತು ಪಿ.ಎಫ್. ಸೌಲಭ್ಯ ನೀಡಬೇಕು ಮುಂತಾದ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಜಿಲ್ಲಾ ಪಂಚಾಯತಿ



ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್ ನಾಯ್ಕ್ ಅವರಿಗೆ ಸಲ್ಲಿಸಲಾಯಿತು. ಸಂಘದ ರಾಜ್ಯ ಸಂಚಾಲಕ ಭೀಮಶೆಟ್ಟಿ ಯಂಪಳ್ಳಿ, ಜಿಲ್ಲಾ ಸಂಚಾಲಕ ಇ.ಆರ್.ಯಲ್ಲಪ್ಪ, ಬಸವರಾಜ, ಚಂದ್ರಕುಮಾರಿ, ಕವಿತಮ್ಮ, ಹುಲಿಗೆಮ್ಮ, ಸಿದ್ದಲಿಂಗಯ್ಯ, ಹನುಮಕ್ಕ, ಗಂಗಮ್ಮ, ರೇಣುಕಾ, ಸರೋಜಮ್ಮ, ನಾಗರಾಜ, ಶರಣಪ್ಪ, ಸಿಐಟಿಯುವಿನ ಸತ್ಯಬಾಬು ಮೊದಲಾದವರು ಪ್ರತಿಭಟನೆಯ ನೇತೃತ್ವವಹಿಸಿದ್ದರು.

ವರದಿ - ಇ.ಆರ್. ಯಲ್ಲಪ್ಪ.

ಕಾಂ. ಸಿ. ನಂಜುಂಡಪ್ಪ ಭವವ ಉದ್ಘಾಟನೆ



ಬೆಂಗಳೂರು ಮಹಾನಗರ ಪೀಣ್ಯ ಸಮಿಪದ ಹೆಗ್ಗನಹಳ್ಳಿ ಪ್ರದೇಶದಲ್ಲಿ ದುಡಿಯುವ ಜನರ ಕೇಂದ್ರ 'ಸಿ. ನಂಜುಂಡಪ್ಪ ಭವನ'ದ ಉದ್ಘಾಟನೆ ಸಮಾರಂಭ ಮಾರ್ಚ್ 24ರಂದು ನಡೆಯಿತು. ಭಗತ್‌ಸಿಂಗ್ ಜನ್ಮ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಟ್ಟಡಕ್ಕೆ ನಿವೇಶನ ನೀಡಿದ ಕಾಂ. ವೆಂಕಟಾಚಾರ್ ರವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಅಧ್ಯಕ್ಷತೆಯನ್ನು ಟಿ. ಲೀಲಾವತಿ ವಹಿಸಿದ್ದರು. ಕಾಂ. ಮೀನಾಕ್ಷಿ ಸುಂದರಂ ಇತರ ಮುಖಂಡರು ಭಾಗವಹಿಸಿದ್ದರು.

ಅಪ್ರತಿಮ ಹೋರಾಟಗಾರ ಎ.ಕೆ.ಜಿ

ಕಮ್ಯೂನಿಸ್ಟ್ ಚಳುವಳಿಯ ಮೇರು ಚೇತನ, ಧೀರ ಸ್ವಾತಂತ್ರ್ಯ ಸೇನಾನಿ, ದಲಿತರ ಕಣ್ಮಣಿ, ಸಮರ್ಥ ಜನಸಂಘಟಕ, ಧೀಮಂತ ಸಂಸತ್ ಪಟು, ತುರ್ತುಪರಿಸ್ಥಿತಿ ವಿರುದ್ಧ ಹೋರಾಡಿದ ಜನನಾಯಕ, ಅಪ್ರತಿಮ ಸ್ನೇಹಜೀವಿ ಕಾಮ್ರೇಡ್ ಎ.ಕೆ.ಜಿ. ನಿಧನರಾಗಿ ಇದೇ ಮಾರ್ಚ್ 22 ರಂದು 36 ವರ್ಷಗಳಾದವು,

ಅಂದು ದೇಶಾದ್ಯಂತ ಕಾಮ್ರೇಡ್ ಎ.ಕೆ.ಜಿ. ದಿನವನ್ನು ಆಚರಿಸಲಾಯಿತು. ತುಂಬಾ ಪ್ರಸ್ತುತವಾಗಿರುವ ಅವರ ಜೀವನ ಸಂದೇಶದ ಕಿರು ಸ್ಮರಣೆ.

1904 ರಲ್ಲಿ ಅಕ್ಟೋಬರ್ 1 ರಂದು ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಎ.ಕೆ. ಗೋಪಾಲನ್‌ರವರ ಜನನ, ತಂದೆ ರೈರು ನಾಯರ್, ತಾಯಿ ಮಾಧವಿಯಮ್ಮ, ಸಮಾಜ ಸೇವಕರಾಗಿದ್ದ ತಂದೆಯಿಂದ ಜನಸೇವೆಯ ಮೊದಲ ಪಾಠ ಎ.ಕೆ. ಗೋಪಾಲನ್‌ರವರಿಗಾಗಿತ್ತು.


1924 ರಿಂದ ಏಳು ವರ್ಷ ಕಾಲ ಶಾಲಾ ಅಧ್ಯಾಪಕರಾಗಿದ್ದ ಎ.ಕೆ. ಗೋಪಾಲನ್‌ರವರು ಶಾಲಾ ಮಕ್ಕಳಿಗೆ ಪ್ರೀತಿಯ ನಂಬಿಯಾರ್ ಮಾಸ್ಟರ್ ಆಗಿದ್ದರು. ತಂದೆಯ ಸಮಾಜ ಸೇವೆಯಿಂದ ಪ್ರೇರೇಪಿತರಾಗಿ ಅಧ್ಯಾಪಕರಾಗಿದ್ದ ಸಮಯದಲ್ಲಿ ಅಸ್ಪೃಶ್ಯತಾ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿ ಈ ಚಳುವಳಿಯ ಮುಖ್ಯ ಕಾರ್ಯಕರ್ತರಾಗಿದ್ದರು.

ಆರಂಭದಲ್ಲಿ ಕಾಂಗ್ರೆಸ್ ಕಾರ್ಯಕರ್ತನಾಗಿದ್ದ ಎ.ಕೆ. ಗೋಪಾಲನ್‌ರವರು 1928 ರಲ್ಲಿ ಖಾದಿ ಬಳಕೆ ಬಗ್ಗೆ ಪ್ರಚಾರ ಹಾಗೂ ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿಯಲ್ಲಿ ಭಾಗವಹಿಸಿದ್ದರು. ಶಾಲಾ ರಜಾ ದಿನಗಳಲ್ಲಿ ಸ್ವದೇಶಿ ಚಳುವಳಿ ಹಾಗೂ ಸ್ವದೇಶಿ ವಸ್ತುಗಳ ಬಳಕೆ ಬಗ್ಗೆ ಜನರಿಗೆ ತಿಳುವಳಿಕೆ ನೀಡಲು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದರು. 1930 ರಲ್ಲಿ ಉಪ್ಪಿನ ಸತ್ಯಾಗ್ರಹ ಜಾಥಾಗೆ ಸ್ವಾಗತ ನೀಡುವಲ್ಲಿ ಮುಂದೆ ನಿಂತುದುಡಿದಿದ್ದರು. ಮುಂದೆ ಶಾಲಾ ಅಧ್ಯಾಪಕನ ಉದ್ಯೋಗ-ಕ್ಕೆ ರಾಜಿನಾಮೆ ನೀಡಿದ ಎ.ಕೆ. ಗೋಪಾಲನ್‌ರವರು ನೇರವಾಗಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾದರು ಹಾಗೂ ಕಣ್ಣೂರು ಹಾಗೂ ನಂತರ ವೆಲ್ಲೂರು ಕೇಂದ್ರ ಕಾರಾಗ್ರಹಕ್ಕೆ ಕಳುಹಿಸಲ್ಪಟ್ಟರು. 1931ರಲ್ಲಿ ಗಾಂಧಿ-ಇರ್ವಿನ್ ಒಪ್ಪಂದದ ನಂತರ ಜೈಲಿನಿಂದ ಬಿಡುಗಡೆಗೊಂಡ ಎ.ಕೆ. ಗೋಪಾಲನ್‌ರವರು ವಯನಾಡಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು.

ದಲಿತರ ದೇವಸ್ಥಾನ ಪ್ರವೇಶ ಹಕ್ಕಿಗಾಗಿ :

ಅಸ್ಪೃಶ್ಯತೆ ಬಲವಾಗಿ ಬೇರೂರಿದ್ದ ಅಂದಿನ ಕಾಲದಲ್ಲಿ ದಲಿತರಿಗೆ ರಸ್ತೆಯಲ್ಲಿ ಮುಕ್ತವಾಗಿ ಓಡಾಡಲು ಅನುಮತಿಯಿರಲಿಲ್ಲ, ದೇವಸ್ಥಾನಗಳಿಗೆ ಪ್ರವೇಶವಿರಲಿಲ್ಲ. ಅಸ್ಪೃಶ್ಯತೆಗೆ ವಿರುದ್ಧವಾಗಿ ದಲಿತರನ್ನು ಸಂಘಟಿಸಿ ರಸ್ತೆಯಲ್ಲಿ ಬಹಿರಂಗವಾಗಿ ಮೆರವಣಿಗೆ ನಡೆಸಿದ್ದಾಕ್ಕಾಗಿ ಅವರು ಪಟ್ಟಭದ್ರ ಹಿತಾಸಕ್ತಿಗಳಿಂದ ಕ್ರೂರವಾದ ಹಲ್ಲೆಗೆ ಒಳಗಾಗಿ ತೀವ್ರವಾಗಿ ಗಾಯಗೊಂಡಿದ್ದರು. ಈ ಚಳುವಳಿಯನ್ನು ಮುಂದುವರೆಸಿ 1931 ನವೆಂಬರ್ 1 ರಂದು ಕಣ್ಣೂರಿನಿಂದ ಗುರುವಾಯೂರು ದೇವಸ್ಥಾನದೊಳಗೆ ದಲಿತರಿಗೆ ಪ್ರವೇಶಕ್ಕೆ ಅವಕಾಶ ನೀಡಬೇಕೆಂದು ಒತ್ತಾಯಿಸಿ ನಡೆದ ಜಾಥಾದಲ್ಲಿ ಎ.ಕೆ. ಗೋಪಾಲನ್‌ರವರು ಸ್ವಯಂ ಸೇವಕ ಪಡೆ-ಯ ನಾಯಕರಾಗಿದ್ದರು.

ಅಸ್ಪೃಶ್ಯತಾ ವಿರೋಧಿ ಚಳುವಳಿ ಸಂಬಂಧವಾಗಿ ಪುನಃ 1932ರ ಜನವರಿ 4 ರಂದು ಪುನಃ ಬಂಧನಕ್ಕೆ ಒಳಗಾದ ಎ.ಕೆ. ಗೋಪಾಲನ್‌ರವರಿಗೆ 4 ವರ್ಷ ಶಿಕ್ಷೆ ವಿಧಿಸಿ ಮೊದಲಿಗೆ ಕಣ್ಣೂರು ನಂತರ ತಮಿಳುನಾಡಿನ ಕಡಲೂರು ಜೈಲಿಗೆ ಕಳುಹಿಸಲಾಯಿತು. ಜೈಲಿನೊಳಗೆ ಸಹಾ ಕ್ರೂರ ಹಲ್ಲೆಗೆ ಒಳಗಾಗಿ ಮೊದಲಿಗೆ ಕಣ್ಣೂರು ನಂತರ ಕರ್ನಾಟಕ ಬಳ್ಳಾರಿ ಜೈಲಿಗೆ ಕಳುಹಿಸಲ್ಪಟ್ಟರು. ಬಳ್ಳಾರಿ ಜೈಲಿನಲ್ಲಿ ಎಣ್ಣೆ ಗಾಣಕ್ಕೆ ಬುಜಕೊಟ್ಟು ಗಾಣ ಎಳೆಯುವ ಶಿಕ್ಷೆ. ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಕೈ-ಕಾಲಿಗೆ ಸರಪಳಿ ತೊಡಿಸಿ, ಪ್ರತಿದಿನ ಏಟಿನ ಶಿಕ್ಷೆ ನೀಡಲಾಗುತ್ತಿತ್ತು. ಮಲಮೂತ್ರ ವಿಸರ್ಜನೆಗೆ ಬಳಸುವ ಪಾತ್ರೆಯಲ್ಲಿ ಆಹಾರ ನೀಡಲಾಗುತಿತ್ತು. ಜೈಲಿನಲ್ಲಿ ಏಕಾಂತ ವಾಸದ ಕೊಠಡಿಯಲ್ಲಿ ಹಾಕಲಾಗಿತ್ತು. ಈ ಶಿಕ್ಷೆಗಳನ್ನು ವಿರೋಧಿಸಿ ಎ.ಕೆ. ಗೋಪಾಲನ್‌ರವರು ಜೈಲಿನೊಳಗೆ ಒಂದು



ವಾರ ಕಾಲ ಉಪವಾಸ ಸತ್ಯಾಗ್ರಹ ನಡೆಸಿದರು. 1933 ರ ಕೊನೆಯಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದರು.

ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಾರ್ಯಕರ್ತನಾಗಿ :

1934 ರಲ್ಲಿ ಕಾಂಗ್ರೇಸ್-ಸೋಷಿಯಲಿಸ್ಟ್ ಪಕ್ಷ ಅಸ್ಥಿತ್ವಕ್ಕೆ ಬಂದಾಗ ಅದರ ಪ್ರಮುಖ ಕಾರ್ಯಕರ್ತರಾದರು. 1935 ರಲ್ಲಿ ಕಾರ್ಮಿಕರನ್ನು ಸಂಘಟಿಸುವಲ್ಲಿಯೂ ಮುಂದಾಳತ್ವ ವಹಿಸಿ ಹಲವು ಕಾರ್ಮಿಕ ಸಂಘಗಳ ಸ್ಥಾಪನೆಗೆ ಕಾರಣರಾದರು.

1936 ರಲ್ಲಿ ಬಡತನ ಹಾಗೂ ನಿರುದ್ಯೋಗದ ವಿರುದ್ಧ ಕಣ್ಣೂರಿನಿಂದ ಮದ್ರಾಸ್ ಅಸೆಂಬ್ಲಿವರೆಗೆ ನಡೆದ 750 ಮೈಲಿ ದೂರದ ಚರಿತ್ರಾರ್ಹವಾದ ಕಾಲ್ನಡಿಗೆ ಜಾಥಾಗೆ ನೇತೃತ್ವ ನೀಡಿದ್ದರು. ಜಾಥಾದ ಅವಧಿಯಲ್ಲಿ ಒಟ್ಟು 500 ಬಹಿರಂಗ ಸಭೆ ನಡೆಸಿ, 2 ಲಕ್ಷಕ್ಕೂ ಹೆಚ್ಚು ಜನರನ್ನು ಉದ್ದೇಶಿಸಿ ಮಾತನಾಡಿದರು. ಈ ಜಾಥಾದಲ್ಲಿ ಅಂದಿನ ಕಾಲದಲ್ಲಿ 25 ಸಾವಿರ ಕರಪತ್ರ ಮುದ್ರಿಸಿ ಹಂಚಲಾಗಿತ್ತು. ಈ ಜಾಥಾ ನಡೆಸಿದ್ದಕ್ಕಾಗಿ ಪುನಃ ಬಂಧನಕ್ಕೆ ಒಳಗಾಗಿ ತಮಿಳುನಾಡಿನ ತಿರುಚಿನಾಪಳ್ಳಿ ಜೈಲಿಗೆ ಕಳುಹಿಸಲ್ಪಟ್ಟರು.

1938 ರಲ್ಲಿ ಕಾಂಗ್ರೇಸ್-ಸೋಷಿಯಲಿಸ್ಟ್ ಪಕ್ಷದ ಮುಖವಾಣಿ ಪತ್ರಿಕೆ "ಪ್ರಭಾತಂ"ನ ವ್ಯವಸ್ಥಾಪಕರಾಗಿ ಜವಾಬ್ದಾರಿ ವಹಿಸಿಕೊಂಡಿದ್ದರು. ಆ ವರ್ಷದಲ್ಲಿ ರಾಜರ ಆಳ್ವಿಕೆ ಮಲಬಾರಿನಿಂದ ಟ್ರಾವಂಕೂರ್ ಸಂಸ್ಥಾನಕ್ಕೆ ನಡೆದ ಜಾಥಾದ ನೇತೃತ್ವ ವಹಿಸಿ ಪುನಃ ಬಂಧನಕ್ಕೆ ಒಳಗಾದರು. 1939 ಜೂನ್-ಜುಲೈ ತಿಂಗಳಲ್ಲಿ ಪ್ರಭಾತಂ ಪತ್ರಿಕೆಗೆ ನಿಧಿ ಸಂಗ್ರಹಿಸಲು ಸಿಲೋನ್ ಹಾಗೂ ಸಿಂಗಪುರ್‌ಗೆ ಸಹಾ ಭೇಟಿ ನೀಡಿದ್ದರು. ಆ ವರ್ಷದಲ್ಲಿಯೇ ಕೇರಳದಲ್ಲಿ ಕಾಂಗ್ರೇಸ್ ಸೋಷಿಯಲಿಸ್ಟ್ ಪಕ್ಷ ಕಮ್ಯೂನಿಸ್ಟ್ ಪಕ್ಷವಾಗಿ ಮಾರ್ಪಾಡು ಮಾಡುವ ನಿರ್ಣಯ ಕೈಗೊಂಡ ಸಭೆಯಲ್ಲಿ ಭಾಗವಹಿಸಿದ್ದರು. ಮುಂದೆ 1940 ಮಾರ್ಚ್ 1 ರಿಂದ ಒಂದು ವರ್ಷಕಾಲ ಭೂಗತ ಜೀವನದ ನಂತರ 1941 ರಲ್ಲಿ ಪುನಃ ತಿರುಚುನಾಪಳ್ಳಿಯಲ್ಲಿ ಪೋಲೀಸರಿಂದ ಬಂಧಿಸಲ್ಪಟ್ಟರು. ಅದೇ ವರ್ಷದ ಸೆಪ್ಟಂಬರ್ 25 ರಂದು ತಿರುಚುನಾಪಳ್ಳಿ ಜೈಲಿನಿಂದ ಪರಾರಿಯಾಗಿ ಈ ಕಾರಣ ಮುಂದೆ ನಾಲ್ಕು ವರ್ಷಗಳ ಕಾಲ ಭೂಗತರಾಗಿದ್ದರು.

ಜೈಲಿನಲ್ಲೇ ಸ್ವಾತಂತ್ರ್ಯ ದಿನಾಚರಣೆ :

ಈ ನಾಲ್ಕು ವರ್ಷದ ಅವಧಿಯಲ್ಲಿ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಭೂಗತರಾಗಿದ್ದು ಪಕ್ಷದ ಕೆಲಸ ನಡೆಸಿದರು. 1946 ರಲ್ಲಿ ಹಲವು ಸುಳ್ಳು ಮೊಕದ್ದಮೆಗಳ ಕಾರಣ ಪುನಃ ಪೋಲಿಸರಿಂದ ಬಂಧಿಸಲ್ಪಟ್ಟು ಜೈಲಿಗೆ ಕಳುಹಿಸಲ್ಪಟ್ಟರು. 1947 ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ ಬಂದಾಗ ಎಲ್ಲಾ ಸ್ವಾತಂತ್ರ ಯೋಧರ ಹಾಗೂ ಇತರೆ ಕೈದಿಗಳು ಬಿಡುಗಡೆಯಾದರೂ ಸಹಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎ.ಕೆ. ಗೋಪಾಲನ್‌ರವರನ್ನು ಮಾತ್ರ ಕಾಂಗ್ರೇಸ್ ಸರ್ಕಾರ ಬಿಡುಗಡೆಗೊಳಿಸಲಿಲ್ಲ. ಎ.ಕೆ. ಗೋಪಾಲನ್‌ರವರು ಜೈಲಿನಲ್ಲಿಯೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಿದರು. ಈ ಬಗ್ಗೆ ದೀರ್ಘ ಹೋರಾಟದ ನಂತರ 1947 ರ ಅಕ್ಟೋಬರ್ 24 ರಂದು ಎ.ಕೆ. ಗೋಪಾಲನ್‌ರವರ ಬಿಡುಗಡೆಯಾಯಿತು. ಆದರೆ ಕೂಡಲೇ ಪೋಲಿಸ್ ಪೇದೆಯೊಬ್ಬನನ್ನು ಬೆದರಿಸಿರುತ್ತಾರೆ ಎಂಬ ಸುಳ್ಳು ಮೊಕದ್ದಮೆ ಹೂಡಿ ಪುನಃ ಬಂಧಿಸಲ್ಪಟ್ಟು ಕೇರಳದ ಕಣ್ಣೂರು ಹಾಗೂ ಆಂಧ್ರದ ರಾಜಮುಂಡ್ರಿ ಜೈಲಿಗೆ ಕಳುಹಿಸಲ್ಪಟ್ಟರು.

1951 ರಲ್ಲಿ "ಮುನ್ನೆಚ್ಚರಿಕೆ ಕ್ರಮವಾಗಿ ಬಂಧನದ ವಿರುದ್ಧ" ಎ.ಕೆ. ಗೋಪಾಲನ್‌ರವರು ಸುಪ್ರೀಂಕೋರ್ಟ್‌ನಲ್ಲಿ ಒಂದು ಐತಿಹಾಸಿಕ ಮೊಕದ್ದಮೆ ನಡೆಸಿದರು. ಈ ಮೊಕದ್ದಮೆಯ ತೀರ್ಪೇ ಮುಂದೆ ಎ.ಕೆ.ಜಿ. ಗಿ/ಖ ಸ್ಟೇಟ್ ಎಂಬ ಐತಿಹಾಸಿಕ ತೀರ್ಪಾಗಿ ಪ್ರಸಿದ್ಧವಾಗಿ ಇಂದು ಕಾನೂನು ವಿದ್ಯಾರ್ಥಿಗಳ ಅಭ್ಯಾಸಕ್ಕೆ ಮುಖ್ಯ ಪಾಠ ಕೂಡಾ ಆಗಿದೆ. ಆ ವರ್ಷದಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಿಸಾನ ಸಭಾದ ರಾಷ್ಟ್ರೀಯ ಸಮ್ಮೇಳನದಲ್ಲಿ ಕಿಸಾನ್ ಸಭಾದ ಅಖಿಲ ಭಾರತ ಅಧ್ಯಕ್ಷರಾಗಿ ಆಯ್ಕೆಗೊಂಡರು.

1952 ರ ಮೊಟ್ಟ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕಣ್ಣೂರು ಲೋಕಸಭಾ ಕ್ಷೇತ್ರದಿಂದ ಆರಿಸಲ್ಪಟ್ಟು ಲೋಕಸಭೆಯಲ್ಲಿ ವಿರೋದ ಪಕ್ಷದ ಗುಂಪಿನ ನಾಯಕರಾದರು. ಆಶ ಕಾಲದಲ್ಲಿ ಚೀನಾದಲ್ಲಿ ನಡೆದ ಏಷಿಯನ್ - ಫೆಸಿಪಿಕ್ ಆಕ್ಟ್ ಸಂಧಾನ ಸಮಾವೇಶದಲ್ಲಿ ಭಾಗವಹಿಸಿದ್ದರು ಹಾಗೂ ಮುಂದೆ ಸೋವಿಯತ್ ರಷ್ಯಾಕ್ಕೂ ಭೇಟಿ ನೀಡಿದ್ದರು. 1952 ರಲ್ಲಿ ಸಿ.ಕೆ. ಸುಶೀಲರವರನ್ನು ವಿವಾಹವಾದ ತಕ್ಷಣದಲ್ಲಿಯೇ 8 ತಿಂಗಳ

ಪುಟ 15 ಕ್ಕೆ

.....ಯೋಜನಾ ಆಯೋಗದ ಅಡ್ಡಗಾಲು!

ಪುಟ 2 ರಿಂದ

ಇದೆ. ಭಾರತ ಆರೋಗ್ಯ ವ್ಯವಸ್ಥೆ ಅತಿ ಹೆಚ್ಚು ಖಾಸಗೀಕರಣಗೊಂಡ ರಾಷ್ಟ್ರವಾಗಿದ್ದು, ಈ ಹಿನ್ನೆಲೆಯಲ್ಲಿ ಸರಕಾರದ ಆರೋಗ್ಯದ ವೆಚ್ಚವನ್ನು ಅರ್ಥೈಸಿಕೊಳ್ಳಬೇಕಾಗಿದೆ. ಸಾರ್ವಜನಿಕ ಆರೋಗ್ಯಕ್ಕೆ ಒಟ್ಟು ಆರೋಗ್ಯಕ್ಕೆ ತಗಲುವ ಖರ್ಚಿನ 29.2% ಹಣವನ್ನು ಮಾತ್ರ ಸರ್ಕಾರಕ್ಕೆ ನೀಡುತ್ತಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಜಗತ್ತಿನ 200 ದೇಶಗಳಲ್ಲಿ ಆರೋಗ್ಯಕ್ಕೆ ಭಾರತಕ್ಕಿಂತ ಕಡಿಮೆ ಖರ್ಚು ಮಾಡುವ ದೇಶಗಳು ಕೇವಲ 13. – ಗಿನಿಯಾ ಬಿಸ್ಸಾವು, ಗಿನಿಯಾ, ಸಿಯಾರಾ ಲಿಯೋನ್, ಅಫ್ಘಾನಿಸ್ಥಾನ, ಮಯಾನ್ ಮಾರ್, ಅಝುರ್ ಬೈಝಾನ್, ಹೈತಿ, ಕೊಟೇರಿ ಐವರಿ, ಉಗಾಂಡಾ, ಜಾರ್ಜಿಯಾ, ಯಮೆನ್, ಛಾಡ್, ತಜಕಿಸ್ಥಾನ.

ಸಾರ್ವಜನಿಕ ಆರೋಗ್ಯಕ್ಕೆ ಭಾರತ ಹಾಗೂ ಇತರೇ ದೇಶಗಳು ಮಾಡುತ್ತಿರುವ ಖರ್ಚು

ಭಾರತ	29.20
ಹೆಚ್ಚು ಉತ್ಪನ್ನವಿರುವ ದೇಶಗಳ ಸರಾಸರಿ	65.10
ಕಡಿಮೆ ಉತ್ಪನ್ನವಿರುವ ದೇಶಗಳ ಸರಾಸರಿ	38.78
ಮಧ್ಯ ಉತ್ಪನ್ನವಿರುವ ದೇಶಗಳ ಸರಾಸರಿ	52.04
ಜಗತ್ತಿನ ಸರಾಸರಿ	62.76

ಆಧಾರ : ವಿಶ್ವಬ್ಯಾಂಕ್ ಮಾಹಿತಿ http// dat.....wo...ldbank.org

ಆರೋಗ್ಯ ಪಾಲನೆಯನ್ನು ನೀಡುವ ತನ್ನ ಗುರಿಯಿಂದ ಸರಕಾರ ಹಿಂದಕ್ಕೆ

ಸರಕಾರ ಈಗ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಹೊರಟಿದೆ. ಈಗ ವಿಮಾಯೋಜನೆ ಜಾರಿಗೆ ನೀಡುವ, ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಕೇವಲ ನಿರ್ವಹಣೆ ಮಾಡುವ (MANAGED NETWORK) ಜಾಲದ ಜವಾಬ್ದಾರಿ ಹೊರಲು ಪ್ರಯತ್ನಿಸುತ್ತಿದೆ. ಅಂದರೆ ಅರೋಗ್ಯ ಸೇವೆಗಳನ್ನು ಖಾಸಗಿ ಸಂಸ್ಥೆಗಳಿಗೆ ಹಾಗೂ ಕೆಲವೇ ಸಾರ್ವಜನಿಕ ಸಂಸ್ಥೆಗಳಿಗೆ ಜವಾಬ್ದಾರಿ ಕೊಟ್ಟು ಅದರ ಮೇಲ್ವಿಚಾರಣೆಯ ಜವಾಬ್ದಾರಿ ಹೊತ್ತುಕೊಳ್ಳಲು ಮುಂದಾಗಿದೆ. ಸಾರ್ವಜನಿಕ ಆರೋಗ್ಯದ ಸಾರ್ವತ್ರೀಕರಣದಲ್ಲಿ ರೋಗ ತಡೆಗಟ್ಟಲು ಚಿಕಿತ್ಸೆ ನೀಡಲು ಸರಕಾರ ಹಣ ನೀಡುತ್ತದೆ. ಆದರೆ ಸರಕಾರ ನೇರವಾಗಿ ಚಿಕಿತ್ಸೆ ದೊರಕಿಸಿಕೊಡದೇ ಇರಬಹುದು. ಅಂದರೆ ಸರಕಾರ ಕೆಲವೇ ಸೇವೆಗಳನ್ನು ನೀಡಲು ಮುಂದಾಗಿ ಇತರೆ ಎಲ್ಲ ರೋಗ ಸೇವೆಗಳನ್ನು ಸಾಂಸ್ಥಿಕ ಆಸ್ಪತ್ರೆ ಅಥವಾ ವ್ಯವಸ್ಥೆಗೆ ನೀಡಲಿದೆ. ಸರಕಾರ ಆರೋಗ್ಯ ಸೇವೆಗಳನ್ನು ಕಾರ್ಪೋರೇಟ್ ವಲಯದಿಂದ ಕೊಂಡು ಕೊಂಡು, ಆ ಕ್ಷೇತ್ರಕ್ಕೆ ಹಣ ನೀಡಿ, ಖಾಸಗಿ ಕ್ಷೇತ್ರವನ್ನು ಬಲಪಡಿಸಲು ಮುಂದಾಗಿದೆ.

ಇದರಿಂದ ಕಾರ್ಪೋರೇಟ್ ಕ್ಷೇತ್ರಕ್ಕೆ ಲಾಭ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕ್ರಮೇಣ ನಿಷ್ಕ್ರಿಯಗೊಳಿಸಲು ಮುಂದಾಗುತ್ತದೆ. ಈಗ ಸರ್ಕಾರಿ ಕ್ಷೇತ್ರ ಖಾಸಗಿ ಕ್ಷೇತ್ರದೊಂದಿಗೆ ಪೈಪೋಟಿ ನಡೆಸಿ, ರೋಗಿಗಳನ್ನು ಆಕರ್ಷಣೆ ಮಾಡಬೇಕಾಗುತ್ತದೆ. ಪ್ರತಿ ಕುಟುಂಬಕ್ಕೆ ಅಗತ್ಯ ಆರೋಗ್ಯ ವ್ಯವಸ್ಥೆ ಮಾಡಿ ಅವರು ಅದನ್ನು ಎಲ್ಲಿ ಬೇಕಾದರಲ್ಲಿ ಪಡೆಯುವ ವ್ಯವಸ್ಥೆ ಮಾಡಲು ಸರಕಾರ ಮುಂದಾಗುತ್ತಿದೆ. ಇದಲ್ಲದೆ ಖಾಸಗಿ ಹಾಗೂ ಸರ್ಕಾರೇತರ ಸಂಸ್ಥೆಗಳಿಗೂ ಈ ಅಗತ್ಯ ಆರೋಗ್ಯ ಸೇವೆಗಳನ್ನು ನೀಡಲು ಮುಂದಾಗಿದೆ. ಈ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ವಾಹಕರು ಖಾಸಗಿ ಕ್ಷೇತ್ರದಿಂದ ಸೇವೆ ಪಡೆದು, ಆ ಕ್ಷೇತ್ರವನ್ನು ಬಲಪಡಿಸಲು ದುಡ್ಡು ನೀಡುತ್ತಾರೆ. ಇದಲ್ಲದೇ ಆರ್‌ಎಸ್‌ಬಿವೈ ಯೋಜನೆಯನ್ನು ಬಲಪಡಿಸಿ ಎಲ್ಲರಿಗೂ ಅದನ್ನು ದೊರಕಿಸಿಕೊಡಲು ಮುಂದಾದ ಸರ್ಕಾರ, ಆರೋಗ್ಯ ಸೇವೆಗಳ ಬದಲು ವಿಮಾ ಯೋಜನೆಗೆ ಹೆಚ್ಚು ಖರ್ಚು ಮಾಡಲು ಮುಂದಾಗಿರುವುದು ಕಂಡುಬರುತ್ತದೆ. ಅಂದರೆ ಹೆಸರಿಗೆ ಸಾರ್ವಜನಿಕ ಆರೋಗ್ಯ, ಆದರೆ ಅದು ಖಾಸಗಿ ಆರೋಗ್ಯ ವ್ಯವಸ್ಥೆ. ಯೋಜನಾ ಆಯೋಗದ ಆರೋಗ್ಯ ತಜ್ಞರ ತಂಡವೂ ಈ ವಿಮಾಯೋಜನೆಯನ್ನು ಬಲಪಡಿಸುವ ಬಗ್ಗೆ ವಿರೋಧ ವ್ಯಕ್ತಪಡಿಸಿದೆ.

ಯೋಜನಾ ಆಯೋಗದ ತಪ್ಪಿದ ತಾತ್ವಿಕ ನೆಲೆ

ಯೋಜನಾ ಆಯೋಗ ಕಾರ್ಪೋರೇಟ್ ವೈದ್ಯಕೀಯ ಕ್ಷೇತ್ರಕ್ಕೆ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ತೆರೆಯಲು ಒಂದು ಬಹುಮಾನ ಕೊಟ್ಟಂತಿದೆ. ಆರೋಗ್ಯವನ್ನು ಇತರೆ ತಳರಚನೆಯ ಕ್ಷೇತ್ರಗಳಂತೆ ಗುರುತಿಸಲಾಗಿದ್ದು, ಆ ಕ್ಷೇತ್ರಕ್ಕೆ ಒಟ್ಟು ವೆಚ್ಚದ ಪ್ರತಿಶತ 20 ರಷ್ಟು ಹಣವನ್ನು ಸಾರ್ವಜನಿಕ–ಖಾಸಗೀ ಒಡಂಬಡಿಕೆಯ ಯೋಜನೆಯಡಿಯಲ್ಲಿ ಸರಕಾರ ಭರಿಸಲಿದೆ. ಇದರ ಪರಿಣಾಮವಾಗಿ ಖಾಸಗಿ ಕ್ಷೇತ್ರಕ್ಕೆ ಆರೋಗ್ಯದಲ್ಲಿ ಹಣಹೂಡಲು ಸಹಾಯವಾಗಲಿದೆ. ವೈದ್ಯಕೀಯ ಕಾಲೇಜುಗಳ ಹಾಗೂ ಆಸ್ಪತ್ರೆಗಳನ್ನು ನಗರ–ಪಟ್ಟಣ ಬಿಟ್ಟು ಹೊರಗಡೆ ತೆಗೆಯಲು ಸಾಧ್ಯವಾಗುವುದಿಲ್ಲ. ಕಾರಣ ಅದು ಲಾಭದಾಯಕವಲ್ಲ ಹಾಗೂ ಈ ಕಾರಣಕ್ಕೆ ಸರಕಾರದಿಂದ ಖಾಸಗಿ ಸಂಸ್ಥೆಗಳು ಅನುದಾನ ಪಡೆಯಬಹುದು. ಇಲ್ಲಿ ಆಸ್ಪತ್ರೆ ತೆರೆಯುವ ಯೋಗ್ಯತೆ, ಆ ಸ್ಥಳ ಹಾಗೂ ಸಂಸ್ಥೆಯ ಮೇಲೆ ಅವಲಂಬಿಸಿದೆ. ಸಾರ್ವಜನಿಕ ಆರೋಗ್ಯ ಉದ್ದೇಶ ಖಂಡಿತಾ ಇಲ್ಲ. ಇದರಲ್ಲಿ ಇನ್ನೊಂದು ಆತಂಕಕರ ವಿಷಯವೆಂದರೆ ಈ ಸಂಸ್ಥೆಗಳು ಎಷ್ಟು ಬೇಕಾದಷ್ಟು ಹಣವನ್ನು ಖಾಸಗಿ ಸಂಸ್ಥೆಗಳಿಂದ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಬಹುದು. ಇಲ್ಲಿ ತೃತೀಯ ಅರೋಗ್ಯ ಸೇವೆಗಳನ್ನು ಪ್ರಾರಂಭಿಸುವುದು ಲಾಭದಾಯಕ ಹಾಗೂ ತಾವೇ ಸಂಗ್ರಹಿಸಿದ ಹಣವನ್ನು ಉಪಯೋಗಿಸಲು ಸಹಾಯಕವಾಗುತ್ತಿದೆ. ಆದರೆ ಈ ಸೌಲಭ್ಯಗಳು ದುರುಪಯೋಗವಾಗುವ ಸಾಧ್ಯತೆ ಹೆಚ್ಚು.

ಯೋಜನಾ ಆಯೋಗದ ವರದಿ ಪ್ರಕಾರ "ಸಾರ್ವಜನಿಕ ಆರೋಗ್ಯ ಸೇವೆಗಳನ್ನು ನೀಡುವವರಿಗೆ ಯಾವುದೇ ಪ್ರೋತ್ಸಾಹ ಇರುವುದಿಲ್ಲ". ಜಗತ್ತಿನಾದ್ಯಂತ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚು ಸಮಂಜಸ ಹಾಗೂ ಅಗತ್ಯ ಪ್ರಾಮುಖ್ಯತೆ ದೊರೆತಾಗ ಭಾರತದ ಯೋಜನಾ ಆರೋಗ್ಯದ ತೀರ್ಮಾ ಹಾಸ್ಯಾಸ್ಪದ. ನಮ್ಮ ನೆರೆಹೊರೆಯ ರಾಷ್ಟ್ರವಾದ ಶ್ರೀಲಂಕಾದಲ್ಲಿ 90% ಒಳರೋಗಿ ಸೇವೆ ಹಾಗೂ 50% ಹೊರರೋಗಿ ಸೇವೆ ಸಾರ್ವಜನಿಕ ಕ್ಷೇತ್ರದಲ್ಲಿದೆ. ಅಲ್ಲಿ ತಲಾ ಆದಾಯ ಭಾರತಕ್ಕಿಂತ ಕಡಿಮೆ ಇದ್ದರೂ ಅಲ್ಲಿ ಸಾವಿನ ದರ ಭಾರತಕ್ಕಿಂತ ಕಡಿಮೆಯೇ ಆಗಿದೆ. ಆದರೆ ಅಮೇರಿಕಾದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಆರೋಗ್ಯದ ಆಯ್ಕೆ ಸಾಧ್ಯವಿದೆ. ಮುಂದುವರೆಯುತ್ತಿರುವ ದೇಶಗಳಲ್ಲಿ ಅತಿ ಕೆಟ್ಟದಾದ ಆರೋಗ್ಯ ವ್ಯವಸ್ಥೆ ಇದೆ.

12 ನೇ ಯೋಜನಾ ಆಯೋಗದ ಆರೋಗ್ಯ ನೀತಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಅಪಾಯ ಉಂಟುಮಾಡುತ್ತಿದೆ. ಯೋಜನಾ ಆಯೋಗದ ಆರೋಗ್ಯ ಶಿಫಾರಸ್ಸುಗಳು ಜಾರಿಗೆ ಬರದೇ ಇರುವುದು ಒಳ್ಳೆಯದು. ಆರೋಗ್ಯ ಇಲಾಖೆ ಯೋಜನಾ ಆಯೋಗದ ಸಿಫಾರಸ್ಸುಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದೆ. ಆದರೆ ಈಗ ನಾವು ನೋಡ ಬೇಕಾಗಿರುವುದು, ಸಂಸತ್ತಿನಲ್ಲಿ ಜನಪ್ರತಿನಿಧಿಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತಾರೋ ಅಥವಾ ಯೋಜನಾ ಆಯೋಗದ ಜನಹಿತಕ್ಕೆ ಧಕ್ಕೆ ತರುವ ನೀತಿಯನ್ನು ಜಾರಿಗೆ ತರುತ್ತಾರೋ?.

ಸ್ವಾಯತ್ತತೆ ಹಾಳಾಗದಿರಲಿ......

ಪುಟ 3 ರಿಂದ

ತೊಡಗಿದೆ ಎಂದೇ ಹೇಳಬೇಕಾಗುತ್ತದೆ. ಇಲ್ಲಿ ಹಿರಿಯರುಳ್ಳ 'ರಂಗಸಮಾಜ' ದ ಸೂಚನೆಯಂತೆ ಮಾಡಲಾಗಿದೆ ಎಂಬುದೂ ಈ ಅರ್ಥದಲ್ಲಿ ಸಮರ್ಥನೀಯವೂ ಅಲ್ಲ. ಮೇಲಾಗಿ ಈ 'ರಂಗಸಮಾಜ'ದ ಅವಧಿ ನಾಲ್ಕು ವರುಷಗಳದ್ದಾದರೂ ಅದನ್ನು ಪ್ರಜಾಸತ್ತಾತ್ಮಕವಾಗಿ ಪುನರ್ ಸಂಘಟಿಸದೇ ಕಳೆದ ಎಂಟು ವರುಷಗಳಿಂದಲೂ ಅದನ್ನೇ ಮುಂದುವರಿಸಿರುವುದರ ಬಗ್ಗೆ ವ್ಯಾಪಕ ಆಕ್ಷೇಪವಿರುವಾಗ ಸರಕಾರದ ಮಾತಿನ ಅರ್ಥವೇನು? ಈಗಾಗಲೇ ಈ ರಂಗಸಮಾಜವೆಂಬುದೂ ಕೆಲ ಸ್ಥಾಪಿತ ಹಿತಾಸಕ್ತಿ, ವ್ಯಕ್ತಿ ಪ್ರತಿಷ್ಠೆಗಳ ಆಗರವಾಗಿದೆ ಎಂಬ ಪ್ರಬಲ ಆರೋಪ ಕೇಳಿ ಬರುತ್ತಿರುವಾಗ ಭಿನ್ನವಾಗಿ ಸರಕಾರ ಯೋಚಿಸುವುದು ಅಗತ್ಯವಿಲ್ಲವೇ? ಒಂದು ಚೌಕಟ್ಟಿನಲ್ಲಾದರೂ ಸಾಂಸ್ಕೃತಿಕ ರಂಗಕ್ಕೆ, ಅಲ್ಲಿನ ಚಿಂತಕರು, ಕ್ರಿಯಾಶೀಲರಿಗೆ, ಕಲಾವಿದರರಿಗೆ ಒಂದಿಷ್ಟು ಸ್ವಾತಂತ್ರ್ಯ, ಸ್ವಾಯತ್ತತೆ, ಅವಕಾಶಗಳು ಬೇಕೇ ಬೇಕು. ಇಲ್ಲವಾದಲ್ಲಿ ಆ ರಂಗ ಬೆಳೆಯದೇ ಸೊರಗುವ ಅಪಾಯ ಇದ್ದೇ ಇದೆ.

ಹತ್ತಾರು ಹುನ್ನಾರಗಳು

ಈ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲಾಗಾಯ್ತು ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳನ್ನು ಬುಡಮೇಲು ಮಾಡುವ ಪ್ರಯತ್ನಗಳು ನಡೆದೇ ಇವೆ. ತನ್ನ ಕೋಮುವಾದೀ, ಫ್ಯಾಸಿಸ್ಟ್ ಮಾದರಿ ಅಜೆಂಡಾ ಜಾರಿಗಾಗಿ ಇಂತಹ ಪ್ರಮುಖ ಸಂಸ್ಥೆಗಳನ್ನು ಹಣಿಯಲು ವಿಶೇಷವಾಗಿ ಗಮನ ಕೇಂದ್ರೀಕರಿಸಿದ್ದು ಅದಕ್ಕಾಗಿ ಸಂಘ ಪರಿವಾರದ 'ಕಾರ್ಯಪಡೆ'ಗಳನ್ನು ನಿಯೋಜಿಸಿದೆ. ಕರ್ನಾಟಕದ ಸಾಂಸ್ಕೃತಿಕ ಲೋಕ ವಿಶಾಲವಾಗಿ ತನ್ನ ಜಾತ್ಯಾತೀತ (ಸೆಕ್ಯುಲರ್) ಸ್ವರೂಪವನ್ನು ಕಾಯ್ದುಕೊಂಡು ಬಂದಿದೆ. ಇದರೊಳಗೆ ಪ್ರವೇಶಿಸಿ ಮತೀಯವಾದೀ ವಿಷದಿಂದ ಕಲುಷಿತಗೊಳಿಸುವ ಪ್ರಯತ್ನಗಳನ್ನು ಸತತವಾಗಿ ಮಾಡುತ್ತಾ ಬಂದರೂ ಅದಕ್ಕೆ ಅಷ್ಟು ಸಾಧ್ಯವಾಗಿಲ್ಲ. ಹಾಗಂತ ಸರಕಾರ ತನ್ನ ಪ್ರಯತ್ನಗಳನ್ನು ನಿಲ್ಲಿಸಿಲ್ಲ. ಆಡಳಿತ ಬಲದ ಮೂಲಕ ಸಂಘವು ಯತ್ನಿಸುತ್ತಲೇ ಇದೆ. ಈಗಾಗಲೇ ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳನ್ನು, ಅದರ ಸ್ವಾಯತ್ತತೆ, ಸಾರ್ವಭೌಮತ್ವವನ್ನು ಕುಲಪತಿಗಳ ನೇಮಕದಿಂದ ಹಿಡಿದು ಒಂದು ಪ್ರಜಾಸತ್ತಾತ್ಮಕ ವಾತಾವರಣವನ್ನು ನಾಶ ಮಾಡಲಾಗಿದೆ. ಇದರಲ್ಲಿ ಒಂದಿಷ್ಟು ಗಟ್ಟಿ ಧ್ವನಿಯಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯವನ್ನು ಭಯಗ್ರಸ್ತಗೊಳಿಸಲಾಗಿದೆ. ಈ ಮೂಲಕ ಹಲವಾರು ವಿ.ವಿ.ಗಳು ಅತೀ ಭ್ರಷ್ಟತೆಯ ಕೂಪಗಳಾಗಿ, ಶೈಕ್ಷಣಿಕ ವಾತಾವರಣ, ಗುಣ ಮಟ್ಟ ಹಾಳು ಮಾಡುವಲ್ಲಿ ಆ ಕಾರ್ಯಪಡೆ ಯಶಸ್ವಿಯಾಗಿದೆ. ಪ್ರತಿರೋಧ ಹತ್ತಿಕ್ಕಿದ ಇಂತಹ ಅರಾಜಕ ವಾತಾವರಣದಲ್ಲಿ ತನ್ನ ಉದಾರೀಕರಣ, ಖಾಸಗೀಕರಣದ ಮತ್ತು ಕೋಮುವಾದೀ ನೀತಿಗಳನ್ನು ಜಾರಿಗೊಳಿಸುತ್ತಿದೆ. ಹಾಗಾಗಿ ಅದರ ಕಣ್ಣು ಈಗ ರಂಗಾಯಣದ ಮೇಲಿದೆ. ಈ ರಂಗದಲ್ಲಿರಬಹುದಾದ ವ್ಯಕ್ತಿಗತ ಭಿನ್ನಾಭಿಪ್ರಾಯಗಳನ್ನೇ ಬಳಸಿ ಇದನ್ನು ಮಟ್ಟ ಹಾಕುವ ಕಾರ್ಯಾಚರಣೆ ತೀವ್ರವಾಗಿದೆ. ಹೀಗೆ ಇಡೀ ಸಾಂಸ್ಕೃತಿಕ ರಂಗವನ್ನೇ ವಿಧ್ವಂಸಗೊಳಿಸಲಾಗುತ್ತಿದೆ.

ನಿರ್ಧಾರ ಬದಲಾಗಲಿ


ಆದ್ದರಿಂದ ನಾಡಿನ ಪ್ರಜ್ಞಾವಂತರೆಲ್ಲಾ ಸರಕಾರದ ಈ ಹುನ್ನಾರಗಳನ್ನು ಪ್ರತಿಭಟಿಸಿ ಸೋಲಿಸಬೇಕು. ಇದೀಗ ರಾಜ್ಯ ಸಾರ್ವತ್ರಿಕ ಚುನಾವಣೆಗೆ ಹೋಗುತ್ತಿದೆ. ಇಲ್ಲಿರುವುದು ಕೇವಲ ದೈನಂದಿನ ಕೆಲಸ ನಿಭಾಯಿಸುವ ಉಸ್ತುವಾರಿ ಸರಕಾರ. ಆದರೀಗ ಇಂತಹವರು ವರ್ಗಾವಣೆ, ಅಧಿಕಾರ ಮೊಟಕುಗೊಳಿಸುವುದು ನಿಯಮಬಾಹಿರವೂ ಹೌದು. ಈ ಕೂಡಲೇ ಸರಕಾರ ಕಲಾವಿದರ ವರ್ಗಾವಣೆ, ನಿರ್ದೇಶಕರ ಪದ ಮುಕ್ತ ಆದೇಶವನ್ನು ರದ್ದುಗೊಳಿಸಬೇಕು. ಹಿಂದಿದ್ದ ಆರ್ಥಿಕ, ಆಡಳಿತಾತ್ಮಕ ಅಧಿಕಾರಗಳನ್ನು ಮರಳಿಸಿ, ಇಡೀ ರಂಗಾಯಣಕ್ಕೆ ಪೂರ್ಣ ಸ್ವಾಯತ್ತತೆ ನೀಡಬೇಕು, ಬೆಳೆಸಬೇಕು. ಇದು ವ್ಯಕ್ತಿಗತ ಪ್ರಶ್ನೆಯಲ್ಲ ಎಂಬುದನ್ನೂ ಗಣಿಸಬೇಕು.

ಇದಕ್ಕಾಗಿ ಎಲ್ಲರೂ ಒಂದಾಗಿ ಆಗ್ರಹಿಸಬೇಕು. ಮತ್ತು ಸರಕಾರಕ್ಕೆ ಸೂಕ್ತ ಪಾಠವನ್ನು ಚುನಾವಣೆಯಲ್ಲಿ ಕಲಿಸಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೊಡಗು : ಕಾಡಾನೆ ಹಾವಳಿಗೆ ಕೊನೆಯೆಂತು

ಕೊಡಗಿನ ಕಾರ್ಮಿಕರನ್ನು ರೈತರನ್ನು ಡಾನೆ ಧಾಳಿಯಿಂದ ರಕ್ಷಿಸಲು 2008ರ ೋಜನೆಯನ್ನು ಅನುಷ್ಠಾನಕ್ಕೆ ತರಬೇಕು. ಂದು ಕೊಡಗು ಜಿಲ್ಲಾ ಜನರಲ್ ರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.) ತ್ತಾಯಿಸಿದೆ. ಜಿಲ್ಲೆಯ ಬಹುತೇಕ ್ರದೇಶಗಳಲ್ಲಿ ಕಾಡಾನೆಗಳು ನಿತ್ಯ ಹಾವಳಿ ಡೆಸುತ್ತಿದ್ದು ಇದರಿಂದ ರೈತರು ತಮ್ಮ ೆಳೆಗಳನ್ನು ಜೀವವನ್ನು ಕಾರ್ಮಿಕರು ಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಾತ್ರಿ ಹಗಲು ಜನರು ಭಯದಿಂದಲೇ ಂಚರಿಸುತ್ತಿದ್ದಾರೆ. ಇಂದು ಕೊಡಗಿನ ೃತರನ್ನು ಕಾರ್ಮಿಕರನ್ನು ಒಳಗೊಂಡ ನತೆಯನ್ನು ಕಾಡುತ್ತಿರುವ ಮೊದಲ ್ಯೆ ಕಾಡಾನೆಯ ನಿರಂತರ ಧಾಳಿ. ಈ ಾವಳಿಗಳಿಗೆ ಸರಕಾರಗಳ ದೋರಣೆಗಳೇ ಾರಣ. ಸರಕಾರದ ಒಡೆತನದಲ್ಲಿರುವ ಾಡಿನಲ್ಲಿ ಆನೆಗಳನ್ನೊಳಗೊಂಡ ಪ್ರಾಣಿಗಳಿಗೆ ಗತ್ಯವಾದ ನೈಸರ್ಗಿಕ ಮರಗಳನ್ನು ೆಳೆಯುದಕ್ಕೆ ಬದಲಾಗಿ ಕಾಡನ್ನು ಲಾಭ ರುವ ಪ್ರದೇಶವಾಗಿ ಪರಿಗಣಿಸಿ ತೇ-ಗದ ಮರಗಳನ್ನೇ ಸರಕಾರ ನಟ್ಟಿತು ಕೆರೆಗಳ ೂಳೆತ್ತಲಿಲ್ಲ. ಕಾಡಿನ ಅಭಿವೃದ್ಧಿಗೆಂದು ೂಪಗೊಂಡ ಯೋಜನೆಗಳು ಪುಸ್ತಕದಲ್ಲೇ ುಳಿದುವು ಅಥವಾ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಲಿಲ್ಲ. ತನ್ನ ದೋರಣೆಗಳನ್ನು ದಲಾಯಿಸಿ ಜನರ, ಕೃಷಿಯ ರಕ್ಷಣೆ/. ನಡೆಸುದರ ಬದಲು ಸತ್ತನಂತರ ಹೆಚ್ಚು ಪರಿಹಾರ ಕೊಡುವುದರಲ್ಲೆ ತನ್ನ ಸಾಧನೆ ಅಡಗಿದೆ ಎಂದು ಸರಕಾರ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ. ಈ ರೀತಿ ಕಳೆದ ವರ್ಷ ಸರಕಾರ ಒಂದು ಕೋಟಿಯಷ್ಟು ಮೊತ್ತ ರ್ಚ ಮಾಡಿದೆ. ನಿರಂತರ ಆನೆ ಧಾಳಿಯಿಂದ ಕ್ರೋಧ ಗೊಂಡಿರುವ ನಾಡಿನ ಜನತೆಯ ಕಣ್ಣಿಗೆ ಮಣ್ಣೆರೆಚಲು ಸರಕಾರ ಆನೆಗಳನ್ನು ಕಾಡಿಗಟ್ಟುವ ಕಾರ್ಯಚರಣೆಯ ನಾಟಕ ಆಡಿಸಿ ಆ ಬಗ್ಗೆ ಪ್ರಚಾರ ಮಾಡುತ್ತಿದೆ. ಆದರೆ ಬೋಳಾದ ಕಾಡಿಗೆ ಇವುಗಳನ್ನು ಅಟ್ಟುವುದರಿಂದ ಏನು ಪ್ರಯೋಜನವಿಲ್ಲ ಎಂದು ಅನುಭವ ತೋರಿಕೊಟ್ಟಿದೆ. ಆನೆಯಿಂದ ಕೊಲ್ಲಲ್ಪಟ್ಟವರಿಗೆ ಪರಿಹಾರ ಕೊಡುವುದು ಮುಖ್ಯವಲ್ಲ. ಅಗತ್ಯವಿರುವುದು ಅವರ ಜೀವ ಮತ್ತು ರೈತರ ಬೆಳೆಗಳ ರಕ್ಷಣೆ. ಈ ದಿಶೆಯಲ್ಲಿ 2008ರಲ್ಲಿ ನಮ್ಮ ಜಿಲ್ಲೆಯ ಇಬ್ಬರು ಶಾಸಕರುಗಳ ಪ್ರಯತ್ನ ಸರಿಯಾಗಿ-ತ್ತು. 2008 ರ ಜೂನ್ 7ರಂದು ಮಡಿಕೇರಿಯ ಅರಣ್ಯ ಭವನದಲ್ಲಿ ಒಂದು ಸಭೆಯಲ್ಲಿ ಕೊಡಗಿನ ಶಾಸಕರುಗಳಾದ ಮಾನ್ಯ ರಂಜನ್ ಅಪ್ಪಚ್ಚು ಮತ್ತು ಮಾನ್ಯ ಕೆ.ಜಿ. ಬೋಪಯ್ಯ ಭಾಗಿಗಳಾಗಿದ್ದು ಆ ಸಭೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಡಾನೆ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಸ್ತಾವನೆಯೊಂದಲ್ಲಿ ಸಿದ್ಧಪಡಿಸಿ ಶೀಘ್ರ ಸರಕಾರಕ್ಕೆ ಸಲ್ಲಿಸುವ ಮೂಲಕ ಉದೇಶಿತ ಯೋಜನೆಗಳ ಅನುಷ್ಠಾನಕ್ಕೆ ಬಜೆಟ್ಟಿನಲ್ಲಿ ಅಗತ್ಯ ನೆರವು ಒದಗಿಸುವಂತೆ ಹಣಕಾಸು ಸಚಿವರು ಆಗಿದ್ದ ಮುಖ್ಯ ಮಂತ್ರಿ ಯಡಿಯೂರಪ್ಪನವರನ್ನು ಕೋರಲು ತೀರ್ಮಾನಿಸಲಾಗಿತ್ತು. ಅರಣ್ಯ ಇಲಾಖೆಯು ಸರಕಾರದ ಮುಂದೆ ಮಂಡಿಸಲಿರುವ ಪ್ರಸ್ತಾವನೆಗೆ ಪೂರಕವಾಗಿ ಬಜೆಟ್ಟಿನಲ್ಲಿ ಅನುದಾನ ವದಗಿಸಿ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಸಹಕಾರ ನೀಡುವಂತೆ ಮುಖ್ಯಮಂತ್ರಿಗಳನ್ನು ಕೋರಲಾಗುವುದು ಎಂದು ರಂಜನ್ ಅಂ-ದು ತಿಳಿಸಿದ್ದರು. ಕಾಡಿನಿಂದ ನಾಡಿಗೆ ನಗ್ಗುವ ಕಾಡಾನೆಗಳ ಹಾವಳಿಯನ್ನು ತಡೆಯಲು ನಾಗರಹೊಳೆ ಅರಣ್ಯ ಪ್ರದೇಶದಲ್ಲಿನ 11 ಸಾವಿರ ತೇ-ಗದ ಮರಗಳ ಪೈಕಿ ಕೆಲವು ಮರಗಳನ್ನು ಆ ಕಡಿದು ಜಾಗದಲ್ಲಿ ಆನೆಗಳಿಗೆಆಹಾರ ಒದಗಿಸುವ ಹಲಸು ಬಿದಿರು ಮತ್ತಿತರ ಹಣ್ಣು ಹಂಪಲಿನ ಮರಗಳನ್ನು ಬೆಳೆಸುವುದು. ತೋಟಗಳಿಗೆ ಆನೆಗಳು ನುಗ್ಗಿ ಫಸಲು ನಾಶ ಪಡಿಸುವುದನ್ನು ತಡೆಯಲು ಅಗತ್ಯವಿರುವ ಕಡೆ ಸೋಲಾರ್ ತಂತಿಬೇಲಿ ನಿರ್ಮಿಸುವುದು, ಅರಣ್ಯದ ಮಧ್ಯದೊಳ ಗಿರುವ ಕೆರೆಗಳ ಹೊಳೆತ್ತಿ ಆನೆಗಳಿಗೆ ಕುಡಿಯಲು ನೀರೊದಗಿಸುವದು ಸೇರಿದಂತೆ ಮತ್ತಿತರ ಕಾರ್ಯಕ್ರಮಗಳಿಗೆ ಹಣ ಒದಗಿಸುವಂತೆ ಸರಕಾರವನ್ನುಕೋರಲಾಗುವುದು." ಕೊಡಗಿನ 22ಸಾವಿರ ಎಕರೆ ಅರಣ್ಯ ಪ್ರದೇಶದಲ್ಲಿ ತೇ-ಗದ ಮರಗಳನ್ನು ಬೆಳೆಸಲಾಗಿದ್ದು ಈ ಪೈಕಿ ಕನಿಷ್ಟ 2-3 ಸಾವಿರ ಎಕರೆ ಪ್ರದೇಶದಲ್ಲಿನ ತೇಗದ ಮರಗಳನ್ನು ತೆಗೆದು ಈ ಸ್ಥಳದಲ್ಲಿ ಕಾಡಾನೆಗಳಿಗೆ ಆಹಾರ ನೀಡುವಂತಹ ಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳುವಂತೆ ಅರಣ್ಯಾಧಿಕಾರಿಗಳಿಗೆ ಸಲಹೆ ಮಾಡಲಾಗಿದೆ "ಎಂದು ಅವರು ತಿಳಿಸಿದ್ದರು. ಈ ಮೇಲಿನ ತೀರ್ಮಾನದಂತೆ" ಜಿಲ್ಲೆಯಲ್ಲಿ ಕಾಡಾನೆ ಹಾವಳಿ ನಿಯಂತ್ರಿಸಲು 2008-09 ರಿಂದ 5 ವರ್ಷಗಳ ಕಾಲದ 2012-13ರ ಅವಧಿಯಲ್ಲಿ ಅನುಷ್ಠಾನ ಮಾಡಬೇಕಾದ 350 ಕೋಟಿ ರೂ.ಗಳ 'ಬೃಹತ್' ಯೋಜನೆಯೊಂದನ್ನು ಅರಣ್ಯ ಇಲಾಖೆ ರೂಪಿಸಿ ಸರಕಾರ-ಕ್ಕೆ ಸಮರ್ಪಿಸಿದೆ" ಎಂದು 2008ರ ಜುಲೈಯಲ್ಲಿ ಅಂದಿನ ಕೊಡಗು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಗಾ.ನಂ. ಶ್ರೀಕಂಠಯ್ಯ ತಿಳಿಸಿದ್ದರು. ಜುಲೈಯಲ್ಲೇ ನಡೆಯುವ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಗುವ ಬಜೆಟ್‌ನಲ್ಲಿ ಈ ಮೊತ್ತವನ್ನು ಸೇರಿಸುವ ಬಗ್ಗೆ ತಾವು ಮುಖ್ಯಮಂತ್ರಿಗಳೊಂದಿಗೆ ಮಾತನಾಡುವುದಾಗಿಯೂ, ತಾವು ಸಫಲರಾಗುವುವೆಂಬ ವಿಶ್ವಾಸ ತಮಗಿರುವುದಾಗಿ ಯೂ ಹೇಳಿದರು ಆದರೆ ಅವರ ವಿಶ್ವಾಸ ಹುಸಿಯಾ ಯಿತು. ಅನಂತರ ಜರ್ನಲಿಸ್ಟ್ ಅಸೋಸಿ ಯೇಶನ್ ಆಫ್ ಕರ್ನಾಟಕದ ಕೊಡಗು ಶಾಖೆಯ ವತಿಯಿಂದ 12-8-08 ರಂದು ಮಡಿಕೇರಿಯ ಪತ್ರಿಕಾ ಭವನದಲ್ಲಿ ಏರ್ಪಡಿಸಿದ್ದ ಕೊಡಗು ಅಭಿವೃದ್ಧಿಯ ಮುನ್ನೋಟ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲೆಯ ಶಾಸಕದ್ವಯರು "ಆನೆ ಹಾವಳಿಗೆ ಸಂಬಂಧಿಸಿದಂತೆ ಈ ಹಿಂದೆ ಅರಣ್ಯ ಭವನದಲ್ಲಿ ನಡೆದ ಸಭೆಯಲ್ಲಿ ರೂ. 350 ಕೋಟಿ ವೆಚ್ಚದ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಆದರೆ ಪ್ರಸ್ತಾವನೆ ತಡವಾಗಿ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಬಜೆಟ್‌ನಲ್ಲಿ ಅನುದಾನ ಒದಗಿಸಲು ಸಾಧ್ಯವಾಗಲಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಗಳೊಂದಿಗೆ ಇಬ್ಬರೂ ಪ್ರಸ್ತಾಪಿಸಿದ್ದು ಸಧ್ಯದಲ್ಲೇ ಹಣ ಬಿಡುಗಡೆಯಾಗಲಿದೆ ಎಂದಿದ್ದರು." ಪ್ರಸ್ತಾವನೆಯನ್ನು ತಮ್ಮ ಶಾಸಕರುಗಳು ತಮ್ಮದೆ ಸರಕಾಕ್ಕೆ ಸಲ್ಲಿಸಿ, ಅಂದು ಅಂಗೀಕರಿಸಲ್ಪಡು ವುದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿ 4 ವರ್ಷಗಳೇ ಕಳೆದರು ಅವರ ವಿಶ್ವಾಸ ಸಾಕಾರವಾಗಲಿಲ್ಲ.



ದಿನದಿಂದ ದಿನಕ್ಕೆ ಆನೆಗಳ ರಾದ್ಧಾಂತ ಹೆಚ್ಚುತ್ತಿರುವ ಇಂದಿನ ಈ ಸಂದರ್ಭದಲ್ಲಿ 2008ರ ಮೇಲುದ್ಧರಿಸಿವ ಯೋಜನೆಯನ್ನು ಅನುಷ್ಠಾನಕ್ಕೆ ತರುವುದೇ ಸೂಕ್ತ. ಕಳೆದ ನಾಲ್ಕು ವರ್ಷಗಳ ಕಾಲ ರಾಜ್ಯದಲ್ಲಿದ್ದ ಭಾ.ಜ.ಪ.ಸರಕಾರ ತನ್ನದೆ ಪಕ್ಷದ ಶಾಸಕರುಗಳ ನೇತೃತ್ವದಲ್ಲಿ ರೂಪಗೊಂಡ ಒಂದು ಜನಪರ ಯೋಜನೆಯನ್ನು ಅಂಗೀಕರಿಸಿ ಅನುಷ್ಠಾನಕ್ಕೆ ತರಲಿಲ್ಲ. ಆದರೆ ಈಗ ಈ ಯೋಜನೆಯ ರುವಾರಿಗಳಲ್ಲೊಬ್ಬರಾದ ರಂಜನ್ ಅಪ್ಪಚ್ಚುರವರು ಮಂತ್ರಿಯಾಗಿದ್ದಾರೆ ಆದ್ದರಿಂದ ಅವರು ಇಂದಿನ ಸರಕಾರ-ಕ್ಕೆ ಕೊಡಗಿನಲ್ಲಿ ಆನೆ ಧಾಳಿಯ ಸಮಸ್ಯೆಯ ಗಂಭೀರತೆಯನ್ನು ಮನದಟ್ಟು ಮಾಡಿಕೊಟ್ಟು ಈ ಯೋಜನೆಯ ಬಗ್ಗೆ ತಿಳಿಯಹೇಳಿ ಅದ-ಕ್ಕೆ ಬೇಕಾದ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯುನಿಯನ್ (ಸಿ.ಐ.ಟಿ.ಯು.) ಒತ್ತಾಯಿಸುತ್ತದೆ. ಈ ಯೋಜನೆಯನ್ನು ತಕ್ಷಣವೇ ಅಂಗೀಕರಿಸಿ ಅನುಷ್ಠಾನಕ್ಕೆ ತರಬೇಕೆಂದು ಕೊಡಗಿನ ಜನ ಸಾಮಾನ್ಯರು ಸರಕಾರ

ಇತರೆ ಬೇಡಿಕೆಗಳು

1. ಕಾಡಾನೆ ಧಾಳಿಯಿಂದ ಮರಣಹೊಂದಿರುವ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ಕೊಡಬೇಕು ಮತ್ತು ಅಂತಹವರ ಕುಟುಂಬದವರಿಗೆ ಸರಕಾರಿ ನೌಕರಿ ಕೊಡಬೇಕು.
2. ಆನೆ ಧಾಳಿಯಿಂದ ಅಂಗವಿಕಲರಾಗುವರಿಗೆ 5 ಲಕ್ಷ ರೂ. ಪರಿಹಾರ ಕೊಡಬೇಕು.
3. ತೋಟಗಳಲ್ಲಿ ಕಾರ್ಮಿಕರು ಕೆಲಸ ಮಾಡುವ ಸಂದರ್ಭದಲ್ಲಿ ಅವರ ರಕ್ಷಣೆಗೆ ಅರಣ್ಯ ಇಲಾಖೆ ಗನ್ ಮ್ಯಾನ್ ನೇಮಕ ಮಾಡಬೇಕು.
4. ಆನೆ ಹಾವಳಿಯಿಂದ ಬಾಧಿತ ಪ್ರದೇಶಗಳಲ್ಲಿ ಶಾಲಾ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಮತ್ತು ಹಿಂದಕ್ಕೆ ಕರೆತರಲು ಅರಣ್ಯ ಇಲಾಖೆ ವಾಹನ ವ್ಯವಸ್ಥೆ ಮಾಡಬೇಕು.
5. ಆನೆ ಧಾಳಿಯಿಂದ ತೋಟಗಳಲ್ಲಿ ಕಾಫಿಗಿಡ ಹಾಳಾದರೆ ಸರಕಾರ ಒಂದು ಗಿಡಕ್ಕೆ 10 ಸಾವಿರ ರೂ. ಪರಿಹಾರ ಕೊಡಬೇಕು. ಭತ್ತದ ಬೇಳೆ ಹಾಳಾದರೆ ಒಂದು ಎಕ-ರೆಗೆ 35 ಸಾವಿರ ರೂ. ಕೊಡಬೇಕು, ಬಾಳೆಯನ್ನು ನಾಶ ಮಾಡಿದರೆ ಒಂದು ಎಕರೆಗೆ 30 ಸಾವಿರ ರೂ. ಕೊಡಬೇಕು, ಸಿಲ್ವರ್ ಮರ ಹಾಳಾದರೆ ಒಂದು ಮರಕ್ಕೆ 6 ಸಾವಿರ ರೂ. ಕೊಡಬೇಕು, ಒಂದು ತೆಂಗಿನ ಮರಕ್ಕೆ 10 ಸಾವಿರ ರೂ. ಒಂದು ಅಡಿಕೆ ಮರಕ್ಕೆ 5 ಸಾವಿರ ರೂ. ಪರಿಹಾರ ಕೊಡಬೇಕು..

ರಾಜಕೀಯ ಸಮಯಸಾಧಕತನ ತ್ಯಜಿಸಿದ ಪರ್ಯಾಯ ಧೋರಣೆಗಳ ರಂಗ

ಕೇಂದ್ರದಲ್ಲಿ 'ಮೂರನೇ ರಂಗ'ದ ಬಗ್ಗೆ ಮಾತು ಮತ್ತೆ ಬಂದಿದೆ. ತಕ್ಷಣವೇ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಇದು ಅಸಂಬದ್ಧ ಪ್ರಲಾಪ ಎಂದಿವೆ. ಅದೇನೇ ಇರಲಿ, ಕೇವಲ ಒಂದು ಕಾಂಗ್ರೆಸೇತರ, ಬಿಜೆಪಿಯೇತರ ಸರಕಾರದಿಂದ ಜನತೆ ನಿರೀಕ್ಷಿಸುವ ಅತ್ಯಗತ್ಯ ಪರಿಹಾರ ಸಿಗಬಲ್ಲುದೇ ಎಂಬ ಪ್ರಶ್ನೆಯಂತೂ ಇದೆ. ಇಂತಹ ಪರಿಹಾರ ಕೇವಲ ಪರ್ಯಾಯ ಧೋರಣೆಗಳಿಂದಷ್ಟೇ
ಸಾಧ್ಯ. ಆದ್ದರಿಂದ ಜನಗಳಿಗೆ ಬೇಕಾಗಿರುವುದು ಸಧ್ಯದ ಧೋರಣೆಗಳ ದಿಕ್ಕನ್ನು ಬದಲಿಸಿ ಪರ್ಯಾಯ ಜನಪರ ಧೋರಣೆಗಳ ದಿಕ್ಕಿನಲ್ಲಿ ಸಾಗಬಲ್ಲ ಒಂದು ಪರ್ಯಾಯ ಸರಕಾರ. ಇಂತಹ ಬದಲಾವಣೆ ತರುವುದು ಜನತೆಯ ಹೋರಾಟಗಳನ್ನು ತೀವ್ರಗೊಳಿಸುವ ಮೂಲಕವೇ ಸಾಧ್ಯ. ಇಂತಹ ತೀವ್ರಗೊಂಡ ಹೋರಾಟಗಳು ಕೇವಲ ಅಧಿಕಾರ ಹಂಚಿಕೊಳ್ಳಲಿಕ್ಕಾಗಿಯೇ ಒಂದು ರಂಗವನ್ನು ರಚಿಸುವ ರಾಜಕೀಯ ಸಮಯಸಾಧಕತನವನ್ನು ತ್ಯಜಿಸಿ, ಪರ್ಯಾಯ ಧೋರಣೆಗಳನ್ನು ಜಾರಿ ಮಾಡುವ ಒಂದು ಸರಕಾರಕ್ಕಾಗಿ ಒಂದು ರಂಗವನ್ನು ರಚಿಸುವಂತೆಯೂ ಮಾಡಬೇಕು.

ಸೀತಾರಾಮ್ ಯೆಚೂರಿ

ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವಂತೆ ರಾಜಕೀಯ ಪಕ್ಷಗಳ ನಡುವೆ ಹೊಸ ಮೈತ್ರಿಗಳ ಮಾತುಗಳು, ಮೈತ್ರಿಕೂಟಗಳ ಬಗ್ಗೆ ಉತ್ಸುಕತೆ ಹುಟ್ಟಿಸುವುದು ಅಸಾಮಾನ್ಯ ಸಂಗತಿಯೇನಲ್ಲ. ಆದರೆ 2014ರ ಸಾರ್ವತ್ರಿಕ ಚುನಾವಣೆಗಳಿಗೆ ಇನ್ನೂ ಒಂದು ವರ್ಷವಿರುವಾಗಲೇ ಇಂತಹ ಉತ್ಸುಕತೆಗೆ ಬಹು ಮುಖ್ಯ ಕಾರಣ ಬಹುಶಃ ಯುಪಿಎ-2 ಮೈತ್ರಿಕೂಟದ ಹೆಚ್ಚುತ್ತಿರುವ ಅನಿಶ್ಚಿತತೆ. ಈ ಸರಕಾರ ತೃಣಮೂಲ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡಾಗಲೇ ಅಲ್ಪಮತಕ್ಕೆ ಇಳಿದಿತ್ತು. ಈಗ ಡಿಎಂಕೆ ಕೂಡ ಹಾಗೇ ಮಾಡಿರುವುದರಿಂದ ಅದು ಇನ್ನಷ್ಟು ಅಲ್ಪಮತಕ್ಕೆ ಇಳಿದಿದೆ. ಇನ್ನು ಮುಂದೆ ಅದರ ಉಳಿವು ಹೆಚ್ಚೆಚ್ಚಾಗಿ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷದ ಹೊರಗಣ ಬೆಂಬಲವನ್ನು ಅವಲಂಬಿಸಿರುತ್ತದೆ.

ಸರಕಾರದ ಉಳಿವಿಗೆ ಇಂತಹ ಹೊರಗಣ ಬೆಂಬಲವನ್ನು ಆಮಿಷಗಳು ಅಥವ ಬೆದರಿಕೆಗಳಿಂದ ನಿರ್ವಹಿಸಲಾಗುತ್ತಿದೆ ಎಂದು ಈಗಂತೂ ಬಹಳ ಸ್ಪಷ್ಟ. ಆಮಿಷಗಳ ಬಗ್ಗೆ ಹೇಳುವುದಾದರೆ, ದೇಶದಲ್ಲಿ ಎಲ್ಲ ಸರಕುಗಳ ಬೆಲೆಗಳ ಏರಿಕೆಗೆ ಅನುಗುಣವಾಗಿ ಸಂಸತ್ತಿನಲ್ಲಿ ಯಾವುದೇ ಮತದಾನಕ್ಕೆ ಬೆಂಬಲ ಗಿಟ್ಟಿಸಲು ಇಂತಹ ಆಮಿಷಗಳ ಬೆಲೆಗಳೂ ಏರುತ್ತವೆ. ಇನ್ನೊಂದೆಡೆ, ಬೆದರಿಕೆಯ ಬಗ್ಗೆ ಹೇಳುವುದಾದರೆ, ಡಿಎಂಕೆ ಬೆಂಬಲ ಹಿಂತೆಗೆದುಕೊಂಡ 24 ಗಂಟೆಗಳೊಳಗೆ ಸಿಬಿಐ ಆ ಪಕ್ಷದ ಉತ್ತರಾಧಿಕಾರಿಯೆಂದು ಬಿಂಬಿಸಿರುವ ಸ್ಟಾಲಿನ್ ನಿವಾಸದ ಮೇಲೆ ಸಿಬಿಐ ದಾಳಿ, ಎಸ್‌ಪಿ ಅಥವ ಬಿಎಸ್‌ಪಿ ಹೊರಗಣ ಬೆಂಬಲ ಕೊಡಬಾರದು ಎಂದು ಯೋಚಿಸಿದರೂ ಕೂಡ ಏನಾಗಬಹುದು ಎಂಬುದರ ಒಂದು ಸ್ಪಷ್ಟ ಸಂಕೇತ(ಬೆದರಿಕೆ ಎಂದೇ ಓದಿಕೊಳ್ಳಬಹುದು) ನೀಡಿದೆ.

ಶೋಚನೀಯ ಸನ್ನಿವೇಶ

ಇದಲ್ಲದೆ, ಕೇಂದ್ರದಲ್ಲಿನ ಈ ಹೆಚ್ಚುತ್ತಿರುವ ರಾಜಕೀಯ ಅಸ್ಥಿರತೆಯ ಜತೆಗೆ ಕಾಂಗ್ರೆಸಿನ ಭದ್ರನೆಲೆಗಳು ಎನಿಸಿಕೊಂಡ ರಾಜ್ಯಗಳಲ್ಲೇ ಶೋಚನೀಯ ಎಂದೇ ಹೇಳಬಹುದಾದ ಸನ್ನಿವೇಶ ಅದರದು. ಆಂಧ್ರಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣದ ಪ್ರಶ್ನೆಯ ಮೇಲೆ ಕಾಂಗ್ರೆಸಿನ ಮುಂದುವರೆಯುತ್ತಿರುವ ಡೋಲಾಯಮಾನ ನಿಲುವು ಮತ್ತು ಹಿಂದಿನ ದಿವಂಗತ ಮುಖ್ಯಮಂತ್ರಿಯ ಮಗ ಉಂಟುಮಾಡಿದ ಒಡಕು ಅದರ ಚುನಾವಣಾ ಭವಿಷ್ಯಕ್ಕೆ ಗಂಭೀರ ಸಂಚಕಾರ ತಂದಿದೆ. ತಮಿಳುನಾಡಿನಲ್ಲಿ ಇದುವರೆಗೆ ಎಐ-ಡಿಎಂಕೆ ಅಥವ ಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಂಡು ಆ ರಾಜ್ಯದ ಗಣನೀಯ ಸಂಖ್ಯೆಯ ಸಂಸತ್ ಸದಸ್ಯರ ಬೆಂಬಲ ಗಿಟ್ಟಿಸುತ್ತ ಬಂದಿದೆ. ಆದರೆ ಇನ್ನು ಮುಂದೆ ಅಂತಹ ಸನ್ನಿವೇಶ ಉಳಿಯುವಂತೆ ಕಾಣುತ್ತಿಲ್ಲ. ಶ್ರೀಲಂಕಾದಲ್ಲಿ ತಮಿಳರ ಶೋಚನೀಯ ಸ್ಥಿತಿ ಕುರಿತಂತೆ ಡಿಎಂಕೆ ಮತ್ತು ಎಐಎಡಿಎಂಕೆ ಎರಡೂ ಅದ-ರಿಂದ ಸಂಪೂರ್ಣವಾಗಿ ದೂರ ಸರಿದಿವೆ. ಈ ವರ್ಷ ವಿಧಾನಸಭಾ ಚುನಾವಣೆಗಳು ನಡೆಯಬೇಕಾದ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳನ್ನು ಉಳಿಸಿಕೊಳ್ಳುವ ಸಾಧ್ಯತೆ ಅಷ್ಟಾಗಿ ಕಾಣುತ್ತಿಲ್ಲ. ಅದೇ ರೀತಿ ಈ ವರ್ಷದ ಕೊನೆಯ ವೇಳೆಗೆ ಚುನಾವಣೆಗಳು ನಡೆಯಬೇಕಾದ ಪ್ರತಿಪಕ್ಷಗಳ ಸರಕಾರಗಳಿರುವ ರಾಜ್ಯಗಳಲ್ಲಿ ಅದು ತನ್ನ ಸ್ಥಾನಗಳನ್ನು ಉಳಿಸಿಕೊಳ್ಳುವ ಸಾಧ್ಯತೆಗಳೂ ಇದ್ದಂತಿಲ್ಲ.

ಇಂತಹ ಸಂದರ್ಭದಲ್ಲಿ ಎಸ್‌ಪಿ ಮುಖ್ಯಸ್ಥ ಮುಲಾಯಂ ಸಿಂಗ್ ಯಾದವ್ ಇದ್ದಕ್ಕಿದ್ದಂತೆ ಕೇಂದ್ರದಲ್ಲಿ ಕಾಂಗ್ರೆಸೇತರ, ಬಿಜೆಪಿಯೇತರ 'ಮೂರನೇ ರಂಗ'ದ ಬಗ್ಗೆ ಮಾತಾಡಲಾರಂಭಿಸಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಮಾರ್ಚ್ 24ರಂದು ಮಹಾರಾಷ್ಟ್ರದಲ್ಲಿ ಅವರು ಸಾಮಾಜಿಕ ಬದಲಾವಣೆಗೆ ಬದ್ಧವಾದ ಪಕ್ಷಗಳು ಬಿಹಾರದಲ್ಲಿ(ಜೆಡಿ-ಯು ಎಂದು ಓದಿಕೊಳ್ಳಿ) ಮತ್ತು ಮಹಾರಾಷ್ಟ್ರದಲ್ಲಿ(ಎನ್‌ಸಿಪಿ ಎಂದು ಓದಿಕೊಳ್ಳಿ) ಒಟ್ಟುಗೂಡಬೇಕು ಎಂದು ಸೂಚಿಸಿದರು. ಸಹಜವಾಗಿಯೇ, ಇದು ಯುಪಿಎಯಲ್ಲಿ ಭೀತಿಯ ಅಲೆ ಎಬ್ಬಿಸಿತು. ಏಕೆಂದರೆ ಮಹಾರಾಷ್ಟ್ರದ ಬಲಿಷ್ಟ ವ್ಯಕ್ತಿ ಶರದ್ ಪವಾರ್‌ರವರ ಎನ್‌ಸಿಪಿ ಕೇಂದ್ರದ ಮೈತ್ರಿಕೂಟ ಸರಕಾರದ ಒಂದು ಮಹತ್ವದ ಅಂಗಪಕ್ಷ.

ಸಮ್ಮಿಶ್ರ ಸರಕಾರಗಳ ಕಾಲ

ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಇಂತಹ ಒಂದು ಸಾಧ್ಯತೆ ಅಸಂಬದ್ಧ ಪ್ರಲಾಪ



ಎಂದು ಹೇಳಲು ಧಾವಿಸಿರುವುದು ಕೂಡ ಸ್ವಾಭಾವಿಕವೇ. ಕಾಂಗ್ರೆಸ್ ವಕ್ತಾರ ಮತ್ತು ಕೇಂದ್ರ ಮಂತ್ರಿ ಶ್ರೀಯುತ ಯಾದವ್‌ರ ಟಿಪ್ಪಣಿಗಳು "ಭಾರತೀಯ ರಾಜಕಾರಣದ ಬಹುಕಾಲ ಬಾಳಿಕೆಯ ಬಿಸಿಲ್ಗುದುರೆ"ಯ ಅನುಸರಣೆ ಎಂದು ವರ್ಣಿಸಿದ್ದಾರೆ. ಅದೇ ರೀತಿ, ಬಿಜೆಪಿ ಕೂಡ ಇಂತಹ ಪ್ರಯತ್ನಗಳು "ಆರಂಭದಲ್ಲೇ ನಿಂತುಬಿಡುವಂತವು". "ಮೂರನೇ ರಂಗಕ್ಕೆ ಅವಕಾಶವೇ ಇಲ್ಲ" ಎಂದು ಹೇಳಿಕೊಂಡಿದೆ. ಆದರೂ, ಇಬ್ಬರೂ ಕೂಡ ಸಮ್ಮಿಶ್ರ ಸರಕಾರಗಳು ಈಗ ಅನಿವಾರ್ಯ ಎಂಬುದನ್ನು ಒಪ್ಪಿಕೊಂಡಿವೆ.

ಈ ರೀತಿ ಸಮ್ಮಿಶ್ರ ಸರಕಾರವನ್ನು ಒಪ್ಪಿಕೊಂಡಿರುವುದು ಒಂದು ಭಾರತೀಯ ವಾಸ್ತವತೆಯನ್ನು ಗುರುತಿಸಿರುವಂತದ್ದಷ್ಟೇ. ಈ ಹಿಂದೆ 1996ರಲ್ಲಿ, ಸಾರ್ವತ್ರಿಕ ಚುನಾವಣೆಗಳಲ್ಲಿ ಒಂದು ಒಡೆದ ಜನಾದೇಶ ಬಂದಾಗ ಹಲವರು ಇದು ನಮ್ಮ ಪ್ರಜಾಪ್ರಭುತ್ವಕ್ಕೆ ಒಂದು ಹಿನ್ನಡೆ ಎಂದು ಅಳಲು ತೋಡಿಕೊಂಡಿದ್ದರು. ಇದಕ್ಕೆ ಕೆಲವೇ ಗೌರವಪೂರ್ಣ ಅಪವಾದಗಳಿದ್ದವು. ಅವುಗಳಲ್ಲಿ ಈ ಅಂಕಣವೂ ಒಂದು. 1996ರ ಜನಾದೇಶ ಹಿನ್ನಡೆಯಂತೂ ಖಂಡಿತಾ ಅಲ್ಲ, ವಾಸ್ತವವಾಗಿ ಅದು ಭಾರತೀಯ ಪ್ರಜಾಪ್ರಭುತ್ವ ಪ್ರೌಢಾವಸ್ಥೆಗೆ ಬರುತ್ತಿರುವ ಪ್ರಕ್ರಿಯೆಯನ್ನು ಬಿಂಬಿಸುತ್ತದೆ ಎಂದು ನಾವು ಹೇಳಿದ್ದೆವು. ಭಾರತದ ವಿಶಾಲ ಸಾಮಾಜಿಕ ಬಹುಳತೆ ಅದರ ರಾಜಕೀಯದಲ್ಲೂ ಬಿಂಬಿತವಾಗಲೇ ಬೇಕಿತ್ತು. ಏಕಪಕ್ಷ ಆಳ್ವಿಕೆಯಂತಹ ಒಂದು ರಾಜಕೀಯ ಏಕಶಿಲಾ ರಚನೆ ಈ ಸಾಮಾಜಿಕ ವೈವಿಧ್ಯತೆ ಮತ್ತು ಬಹುಳತೆಯನ್ನು ಸರಿಯಾಗಿ ಬಿಂಬಿಸಲಾರದು. ಇನ್ನೂ ಹಲವು ದಶಕಗಳ ವರೆಗೆ ಸಮ್ಮಿಶ್ರ ಸರಕಾರಗಳು ಅನಿವಾರ್ಯ ಎಂದು ನಾವಾಗ ಹೇಳಿದ್ದೆವು.

ಇಂತಹ ಒಂದು ತಿಳುವಳಿಕೆಯನ್ನು ಅನುಮೋದಿಸಿದವರಲ್ಲಿ ದಿವಂಗತ ಶ್ರೀ ವಿ.ಪಿ.ಸಿಂಗ್ ಅವರೂ ಒಬ್ಬರು. ಅವರು ಸ್ವತಃ ಭಾರತವೇ ಒಂದು "ಮಹಾ ಮೈತ್ರಿಕೂಟ" ಎಂದು ಕ-ರೆದರು.

ಈ ತಿಳಿವು ಕಳೆದೆರಡು ದಶಕಗಳಲ್ಲಿ ಸಂಪೂರ್ಣವಾಗಿ ರುಜುವಾತುಗೊಂಡಿದೆ. 2014 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಮೂಡಿ ಬರುವ ಯಾವುದೇ ಸರಕಾರ ಕೂಡ ಸಮ್ಮಿಶ್ರ ಸರಕಾರವಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ ಎಂಬುದು ಸಾಕಷ್ಟು ಖಂಡಿತ. ಆದರೆ, ಇಂತಹ ಒಂದು ಸಮ್ಮಿಶ್ರ ಸರಕಾರದ ನೇತೃತ್ವ ವಹಿಸುವವರು ಯಾರು ಎಂಬ ಪ್ರಶ್ನೆಯಂತೂ ಇದೆ.

ಎರಡು ಧ್ರುವಗಳ ರಾಜಕೀಯ, ಅಂದರೆ ಕಾಂಗ್ರೆಸ್ ಅಥವ ಬಿಜೆಪಿ ನೇತೃತ್ವವೇ ಈ ಪ್ರಶ್ನೆಗೆ ಅತ್ಯಂತ ಸಮಾಧಾನಕರ ಪರಿಹಾರ ಎಂಬ ನಿರೀಕ್ಷೆ ಹಲವರದ್ದು. ಸಾಮ್ರಾಜ್ಯಶಾಹಿಗಂತೂ ಇದ-ರಿಂದ ಬಹಳ ಸಂತೋಷವಾಗುತ್ತದೆ. ಏಕೆಂದರೆ ಇವರಿಬ್ಬರೂ ಅದರ ಅಡಿಯಾಳು ಪಾಲುದಾರನ ಪಾತ್ರ ವಹಿಸುವ ಬಲವಾದ ಒಲವನ್ನು ಪ್ರದರ್ಶಿಸುತ್ತಾರೆ. ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಪಂಡಿತರಿಗೆ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ



ಸೈಪ್ರಸ್: ನವ ಉದಾರವಾದಿ ನೀತಿಗಳಿಗೆ ಮತ್ತೊಂದು ಬಲಿಪಶು

ಉದಾರೀಕರಣ ಜಾಗತಿಕರಣಗಳ ಬಿರುಗಾಳಿಗೆ ಸಿಲುಕಿ ಇಡೀ ಜಗತ್ತಿನ ಅರ್ಥಿಕತೆ ನಲುಗಿ ಹೋಗಿರುವ ಹೊತ್ತಲ್ಲಿ ಮತ್ತೊಂದು ಕೆಟ್ಟ ಸುದ್ಧಿ-ಯೂರೋಪಿಯನ್ ಒಕ್ಕೂಟದ ಸೈಪ್ರಸ್ ದೇಶವು ದಿವಾಳಿಯ ಅಂಚಿಗೆ ಬಂದು ನಿಂತಿದೆ.

ರತ್ನಾಕರ ಶೆಣೈ

ಸೈಪ್ರಸ್ ಯೂರೋಪಿಯನ್ ಸಮುದಾಯದ ಒಂದು ಪುಟ್ಟ ದೇಶ. ಜನಸಂಖ್ಯೆ 10 ಲಕ್ಷಕ್ಕಿಂತಲೂ ತುಸು ಹೆಚ್ಚು. ನಮ್ಮ ಬೆಂಗಳೂರಿನ ಜನಸಂಖ್ಯೆಗಿಂತಲೂ ಸುಮಾರು ಹತ್ತನೇ ಒಂದು ಭಾಗದಷ್ಟು ಮಾತ್ರ.


ಆದರೆ ಅದರ ಚರಿತ್ರೆ ತುಂಬಾ ಸಂಕೀರ್ಣವಾದದ್ದು. ಗ್ರೀಸ್ ಮತ್ತು ಟರ್ಕಿ ದೇಶಗಳ ನಡುವೆ ಇರುವ ಈ ಸಣ್ಣ ಸಮುದಾಯ ಮೊದಲು ಬ್ರಿಟಿಷರ ಅಧಿಪತ್ಯದಲ್ಲಿತ್ತು. ಪರಕೀಯರಾದ ಬ್ರಿಟಿಷರ ದಾಸ್ಯ ಸಂಕೋಲೆಯಿಂದ ಪಾರಾಗಲು ನಡೆದ ವಿಮೋಚನಾ ಚಳುವಳಿಯಲ್ಲಿ ಗ್ರೀಸ್ ಮತ್ತು ಟರ್ಕಿ ದೇಶಗಳೆರಡೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಪ್ರಭಾವ ಬೀರಲು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದವು. ಎರಡೂ ದೇಶಗಳ ಉದ್ದೇಶವೂ ಒಂದೇ ಆಗಿತ್ತು. ಈ ಪುಟ್ಟದೇಶವನ್ನು ತಮ್ಮ ತೆಕ್ಕೆಗೆ ಹಾಕಿಕೊಳ್ಳುವುದು. ಅವೆರಡರ ಕಿತ್ತಾಟದಲ್ಲಿ ಈ ಬಡ ಸಮುದಾಯ ಸಂಪೂರ್ಣ ನಲುಗಿ ಹೋಗಿದೆ. ದೇಶದ ಜನ ಗ್ರೀಕ್ ಸೈಪ್ರಿಸ್ಸಿಗರು ಮತ್ತು ಟರ್ಕಿ ಸೈಪ್ರಿಸ್ಸಿಗರು ಎಂದು ಇಬ್ಭಾಗವಾಗಿದ್ದಾರೆ. 1970 ರ ದಶಕದ ಮೊದಲ ಭಾಗದಲ್ಲಿ ಗ್ರೀಸ್‌ನ ಸೈನ್ಯದ (ಆಗ ಗ್ರೀಸ್ ಮಿಲಿಟರಿ ಸರ್ವಾಧಿಕಾರದ ಆಡಳಿತೆಯಲ್ಲಿತ್ತು) ಕುಮ್ಮಕ್ಕಿನೊಂದಿಗೆ ಸೈಪ್ರಸ್‌ನ ರಾಷ್ಟ್ರೀಯ ಭದ್ರತಾದಳ ಕ್ಷಿಪ್ರಕ್ರಾಂತಿ ನಡೆಸಿ, ಆಗಿನ ಅಧ್ಯಕ್ಷರಾಗಿದ್ದ ಆರ್ಚ್ ಬಿಷಪ್ ಮಕಾರಿಯೋಸ್‌ರವರನ್ನು ಪದಚ್ಯುತಗೊಳಿಸಿ, ನಿಕೋಸ್ ಸಾಂಪ್ಸನ್ ಎಂಬಾತನನ್ನು ಅಧ್ಯಕ್ಷ ಪಟ್ಟಕ್ಕೇರಿಸಿತು.



ಗ್ರೀಸ್‌ನ ಈ ಕ್ರಮದಿಂದ ಉರಿದು ಹೋದ ಟರ್ಕಿ 20.7.1974 ರಂದು ಸೈಪ್ರಸ್‌ನ ಮೇಲೆ ಆಕ್ರಮಣ ನಡೆಸಿ ದೇಶದ ಉತ್ತರ ಭಾಗವನ್ನು ವಶಪಡಿಸಿಕೊಂಡಿತು. ಆ ಪ್ರದೇಶದಲ್ಲಿ ಗ್ರೀಕ್ ಸೈಪ್ರಿಸ್ಸಿಗರು ಸುಮಾರು 80% ರಷ್ಟಿದ್ದರು. ಇಡೀ ಪ್ರದೇಶದ ಸುಮಾರು ಶೇ.25 ರಷ್ಟು ನಾಗರೀಕರನ್ನು ಹೊರದಬ್ಬಲಾಯಿತು. ಅಷ್ಟೇ ಅಲ್ಲ, ದಕ್ಷಿಣ ಭಾಗದಿಂದಲೂ ಸುಮಾರು 60,000 ಟರ್ಕಿ ಸೈಪ್ರಸ್ಸಿಗರು 1975 ರಲ್ಲಿ ಉತ್ತರಕ್ಕೆ ವಲಸೆ ಹೋದರು. ಸೈಪ್ರಸ್ಸನ್ನು ಈ ಮೂಲಕ ಇಬ್ಭಾಗ ಮಾಡಿ ಟರ್ಕಿ ತನ್ನ ವಶದಲ್ಲಿದ್ದ ನೆಲೆಗಳನ್ನು ಭದ್ರಪಡಿಸಿಕೊಂಡಿತು.

1983 ರಲ್ಲಿ ಟರ್ಕಿಯ ಹಿಡಿತದಲ್ಲಿದ್ದ ಉತ್ತರ ಭಾಗವು ಪ್ರತ್ಯೇಕಗೊಂಡು ಉತ್ತರ ಸೈಪ್ರಸ್‌ನ ಟರ್ಕಿ ಗಣರಾಜ್ಯ ಎಂದು ತನ್ನನ್ನು ತಾನೇ ಘೋಷಿಸಿಕೊಂಡಿತು. ಇದಕ್ಕೆ ಇಡೀ ಜಗತ್ತಿನಲ್ಲಿ ಟರ್ಕಿ ಬಿಟ್ಟರೆ ಇನ್ನಾವ ದೇಶಗಳೂ ಮಾನ್ಯತೆ ನೀಡಿಲ್ಲ. ಗ್ರೀಸ್ ಮತ್ತು ಟರ್ಕಿಗಳ ಮಧ್ಯಪ್ರವೇಶ, ಒತ್ತಡಗಳು ಹಾಗೂ ತಂತ್ರ ಕುತಂತ್ರಗಳಿಂದ ಹೈರಾಣಾಗಿದ್ದ ಸೈಪ್ರಸ್‌ನ ಜನತೆ ಮಿಲಿಟರಿ ಸರ್ವಾಧಿಕಾರದ ತೀವ್ರ ದಬ್ಬಾಳಿಕೆಯನ್ನೂ ಎದುರಿಸಬೇಕಾಯಿತು. ಕಡೆಗೂ ಅಲ್ಲಿ ಚುನಾವಣೆಗಳು ನಡೆದು ಸರ್ಕಾರವೊಂದು ಅಸ್ತಿತ್ವಕ್ಕೆ ಬಂತು.


1974 ರಿಂದ ದೇಶದ ಒಂದು ಭಾಗವನ್ನು ಟರ್ಕಿಯ ಸೈನ್ಯ ಆಕ್ರಮಿಸಿಕೊಂಡಿದ್ದರೂ ಯುರೋಪಿಯನ್ ಒಕ್ಕೂಟ**(European Union)**ವನ್ನು 2004 ರಲ್ಲಿ ಸೇರಿಕೊಂಡ 12 ದೇಶಗಳಲ್ಲಿ ಸೈಪ್ರಸ್ ಕೂಡಾ ಒಂದು. ಸೈಪ್ರಸ್‌ನ ಆದಾಯದ ಮೂಲ ಪ್ರಧಾನವಾಗಿ ಪ್ರವಾಸೋದ್ಯಮ, ನೌಕಾ ನಿರ್ಮಾಣ. ಅಲ್ಲದೆ, ನೆರೆ ಹೊರೆಯ ಹಾಗೂ ಸನಿಹದ ರಾಷ್ಟ್ರಗಳ ಶ್ರೀಮಂತ ಜನ ತಮ್ಮ ಅಪಾರಗಳಿಕೆಯ ಸಂಪತ್ತನ್ನು ಸೈಪ್ರಸ್ಸಿನ ಬ್ಯಾಂಕುಗಳಲ್ಲಿ ಠೇವಣಿಯಾಗಿಡುವ ಒಂದು ತಾಣವಾಗಿಯೂ ಅದು ಬೆಳೆದು ಬಂತು. ಯೂರೋಪಿಯನ್ ಒಕ್ಕೂಟವನ್ನು ಸೇರುವ ಸಂದರ್ಭದಲ್ಲಿ ಸೈಪ್ರಸ್ ಶ್ರೀಮಂತ ದೇಶವಾಗಿತ್ತು. ತಲಾ ಆದಾಯದಲ್ಲಿ ಒಕ್ಕೂಟದ ಮೊದಲ ಸ್ಥಾನಗಳಲ್ಲಿ ಒಂದಾಗಿದ್ದ ನಾಡಾಗಿತ್ತು.



ದೇಶದ ಶ್ರೀಮಂತಿಕೆ ಹಾಗೂ ಇತರ ದೇಶಗಳಿಂದ ಹರಿದು ಬಂದ ಠೇವಣಿ ಹಣದ ಮೂಲಕ ಸೈಪ್ರಸ್ಸಿನ ಖಾಸಗಿ ಬ್ಯಾಂಕುಗಳು ವಿಪರೀತವಾಗಿ ಬೆಳೆದವು. ಎಲ್ಲಿಯವರೆಗೆಂದರೆ, ತೀರಾ ಇತ್ತೀಚಿನವರೆಗೂ ಅವುಗಳಲ್ಲಿದ್ದ ಠೇವಣಿಗಳ ಮೊತ್ತ ದೇಶದ ಒಟ್ಟು ವಾರ್ಷಿಕ ಉತ್ಪನ್ನದ (ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳು) ಎಂಟು ಪಾಲಷ್ಟು ಇತ್ತು. ಇಷ್ಟೊಂದು ಅಪಾರ ಪ್ರಮಾಣದ ಠೇವಣಿ ಹಣವನ್ನು ಬಳಸಿಕೊಂಡು ಉದಾರವಾದ ಸಾಲಗಳನ್ನು ನೀಡಿ ಅಲ್ಲಿನ ಬ್ಯಾಂಕುಗಳು ಹೇರಳ ಲಾಭವನ್ನೇ ದೋಚಿಕೊಂಡವು. ಆದರೆ ಈ ಸುಸಮಯ ಬಹಳ ದಿನ ಮುಂದುವರಿಯಲಿಲ್ಲ. 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟು ಅಮೇರಿಕಾ ಮತ್ತು ಯೂರೋಪಿನ ಆರ್ಥಿಕತೆಯನ್ನು ಸಂಪೂರ್ಣ ಕುಸಿತಕ್ಕೆ ಕೊಂಡೊಯ್ದಾಗ, ಪುಟ್ಟ ದೇಶ ಸೈಪ್ರಸ್ಸಿನ ಆರ್ಥಿಕತೆ ಭದ್ರವಾಗಿರಲು ಆಸ್ಪದವೇ ಇರಲಿಲ್ಲ. ಬಿಕ್ಕಟ್ಟಿನ ಆರಂಭದ ಹಂತದಲ್ಲಿ ಯುರೋಪಿಯನ್ ಸಮುದಾಯದ ಐರ್‌ಲ್ಯಾಂಡ್, ಐಸ್‌ಲ್ಯಾಂಡ್, ಗ್ರೀಸ್, ಪೋರ್ಚುಗಲ್, ಇಟಲಿ ಹಾಗೂ ಸ್ಪೇನ್ ದೇಶಗಳು ತತ್ತರಿಸಿ ಹೋಗುತ್ತಿದ್ದ ಸಮಯದಲ್ಲೇ, ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಜರ್ಮನಿ, ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಮುಂತಾದ ದೇಶಗಳ ಬಲಾಢ್ಯ ಬ್ಯಾಂಕುಗಳು ಹವಣಿಕೆಯಲ್ಲಿ ತೊಡಗಿದ್ದವು. ಅದರಲ್ಲಿ ಸೈಪ್ರಸ್‌ನ ಬ್ಯಾಂಕುಗಳೂ ಹಿಂದೆ ಬೀಳಲಿಲ್ಲ.

ಈ ನಡುವೆ ಬಿಕ್ಕಟ್ಟಿಗೆ ಒಳಗಾದ ದೇಶಗಳ ಬೊಕ್ಕಸದಿಂದ ಅಪಾರ ಪ್ರಮಾಣದ ಹಣವನ್ನು ಸುರಿದು, ಬಿಕ್ಕಟ್ಟಿನಿಂದ ಪಾರಾಗುವ ಪ್ರಯತ್ನ ನಡೆಯಿತು. ಆದರೆ ಬಿಕ್ಕಟ್ಟು ಶಮನವಾಗುವುದರ ಬದಲು ಇನ್ನಷ್ಟು ಉಲ್ಬಣಗೊಂಡಿತು. ಬಲಾಢ್ಯ ಬ್ಯಾಂಕುಗಳೆಲ್ಲಾ ಮುಗ್ಗರಿಸಿದವು. ಬಹಳಷ್ಟನ್ನು ಸರ್ಕಾರಗಳು ತಮ್ಮ ವಶಕ್ಕೆ ತೆಗೆದುಕೊಂಡವು. ಬಿಕ್ಕಟ್ಟಿನ ಮೂಲ ಇರುವುದು ಬ್ಯಾಂಕುಗಳು ಲಾಭಕ್ಕಾಗಿ ನಡೆಸಿದ ಕುವ್ಯವಹಾರದಲ್ಲಲ್ಲ. ಬದಲಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲೇ ಎಂಬ ಕಟು ಸತ್ಯವನ್ನು ಸರ್ಕಾರಗಳು, ಅವರ ಭಟ್ಟಂಗಿಗಳು ಒಪ್ಪಿಕೊಳ್ಳಲೇ ಇಲ್ಲ.

ಪುಟ 14 ಕ್ಕೆ



ದೌರ್ಜನ್ಯಗಳು ಮತ್ತು ಮಹಿಳೆಯರ ತುಚ್ಛೀಕರಣ: ಕುಪ್ರಸಿದ್ಧ ಮನುಸ್ಮೃತಿಯ ಕುಖ್ಯಾತ ಕೊಡುಗೆ

'ಮನುಸ್ಮೃತಿ'........

ನಮ್ಮ ದೇಶದ ಪುರಾಣ, ಮಹಾಕಾವ್ಯಗಳಲ್ಲಿ, ಪತಿವ್ರತೆಯರ ಕಥೆ, ಹರಿಕಥೆ, ಯಕ್ಷಗಾನ-ಬಯಲಾಟಗಳಲ್ಲಿ, ಆಚರಣೆ, ವ್ರತಗಳಲ್ಲಿ ಗಂಡಿನ ಮೇಲ್ಮೆ, ಹೆಣ್ಣಿನ ಅಧೀನತೆ, ಹೆಣ್ಣು ಮಾಯೆ, ಭೋಗ ವಸ್ತು, ಮನೆಗೆಲಸ, ಮಕ್ಕಳನ್ನು ಪಡೆಯುವುದು, ಸಾಕುವುದು, ಪುರುಷರ ಸೇವೆ ಮಾಡುವುದು ಮೊದಲಾದ ಮೌಲ್ಯಗಳೇ ಮಹಿಳೆಗೆ ಅತ್ಯುನ್ನತ ಮೌಲ್ಯಗಳು ಎಂದು ಪ್ರತಿಪಾದಿತವಾಗಿರುವುದನ್ನು ಕಾಣುತ್ತೇವೆ. 'ಮನುಸ್ಮೃತಿ' ಈ ಎಲ್ಲ ಪುರಾಣ, ಮಹಾಕಾವ್ಯಗಳಿಗಿಂತ ಸ್ವಲ್ಪ ಮೊದಲೇ ಹುಟ್ಟಿದ ಕೃತಿಯಾಗಿ, ಇಂತಹ ಹಲವು ಸ್ಮೃತಿಗಳಿಗಿಂತ ಹೆಚ್ಚು ಪ್ರಚಲಿತವಾಗಿ ಮಹಿಳೆಯರ ಬಗೆಗಿನ ಭಾರತೀಯ ಸಮಾಜದ ಭಾವನೆಯನ್ನು ರೂಪಿಸಿದ ಗ್ರಂಥಗಳಲ್ಲಿ ಒಂದು ಪ್ರಧಾನ ಕೃತಿ. ಅದರಲ್ಲಿ ಏನು ಹೇಳಲಾಗಿದೆ ಎಂದು ತಿಳಿದುಕೊಳ್ಳುವುದು ನಾವು ಎದುರಿಸುತ್ತಿರುವ ಸಮಸ್ಯೆಯನ್ನು ಅದರ ಎಲ್ಲ ಆಯಾಮಗಳಲ್ಲಿ ಅರ್ಥ ಮಾಡಿಕೊಳ್ಳಲು ಅವಶ್ಯಕ.

ಕೆಲವೇ ಶ್ಲೋಕಗಳ ಮೂಲಕ ಮನುಸ್ಮೃತಿಯ ಭಾವವನ್ನು ಇಲ್ಲಿ ಪರಿಚಯಿಸಲು ಪ್ರಯತ್ನಿಸಲಾಗಿದೆ. ಈ ಶ್ಲೋಕಗಳು ಹೆಣ್ಣು ಗಂಡನ ಆಸ್ತಿ, ಪತಿ ಸೇವೆಯೇ ಪರಮ ಕರ್ತವ್ಯ, ಹೆಣ್ಣೇ ಗಂಡಸರು ಕೆಡುವುದಕ್ಕೆ ಕಾರಣ, ಮಹಿಳೆಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಇತ್ಯಾದಿ ಇಂದು ಜನಜನಿತವಾಗಿರುವ ಮಹಿಳಾ ವಿರೋಧಿ ವಿಚಾರಗಳನ್ನು ಪ್ರತಿಬಿಂಬಿಸುತ್ತವೆ. ಮನುಸ್ಮೃತಿಯ ಶ್ಲೋಕಗಳು ಮತ್ತು ಅದ-ಕ್ಕೆ ಪಂಡಿತರು ನೀಡಿದ ವಿವರಣೆಯನ್ನು ಇದ್ದ ಹಾಗೇ ಇಲ್ಲಿ ನೀಡಲಾಗಿದೆ. ಸಮಾಜ ಪುಸ್ತಕಾಲಯ, ಧಾರವಾಡ ಪ್ರಕಟಿಸಿರುವ ಶೇಷ ನವರತ್ನರವರ ಹಾಗೂ ಅವರೇ ಪ್ರಕಟಿಸಿರುವ ವಿದ್ವಾನ್ ಚಕ್ರಕೋಡಿ ಈಶ್ವರ ಶಾಸ್ತ್ರಿಯವರ ಅನುವಾದಗಳಿಂದ ಈ ಶ್ಲೋಕಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅನುವಾದಕರು / ಪ್ರಕಾಶಕರು ಮನು ಸ್ಮೃತಿಯನ್ನು ಹಿಂದೂ ಧರ್ಮ ಶಾಸ್ತ್ರಕ್ಕೆ ಬುನಾದಿಯಾಗಿರುವ ಗ್ರಂಥ ಎಂದು ವರ್ಣಿಸಿದ್ದಾರೆ.

ಶಯ್ಯಾಸನಮಲಂಕಾರಂ ಕಾಮಂ ಕ್ರೋಧಂ ಅನಾರ್ಜವಂ/

ದ್ರೋಹ ಭಾವಂ ಕುಚರ್ಯಾಂ ಚ ಸ್ತ್ರೀಭ್ಯೋ ಮನುರಕಲ್ಪಯತ್ ? (9-17)

ಮಲಗುವುದು, ಕುಳಿತುಕೊಂಡಿರುವುದು, ಅಲಂಕಾರ, ಕಾಮ, ಕ್ರೋಧ, ಅಪ್ರಾಮಾಣಿಕತೆ, ಪತಿ ದ್ರೋಹ ಮತ್ತು ದುರ್ನಡತೆ ಇವು ಸ್ತ್ರೀಯರಿಗೆ ಸ್ವಾಭಾವಿಕ ಗುಣಗಳೆಂದು ಮನು ಹೇಳುತ್ತಾನೆ.

ತಥಾ ಚ ಶ್ರುತಯೋ ಬಹ್ವೋ ನಗೀತಾ ನಿಗಮೇಷ್ವಪಿ/-(9-19)

ಸ್ತ್ರೀಯರು ಹೀಗೆಂದು ವೇದಗಳಲ್ಲಿಯೇ ಪ್ರಮಾಣಗಳಿವೆ.



ಸತಿ ಆಚರಣೆ ಶತ ಶತ ಮಾನಗಳಲ್ಲಿ

ಸ್ವಭಾವ ಏಷ ನಾರಿಣಾಂ ನರಾಣಾಮಿಹ ದೂಷಣಂ/-(2-213)

ಪುರುಷರ ಮನಸ್ಸು ಕೆಡಿಸುವುದೇ ನಾರಿಯರ ಸ್ವಭಾವವಾಗಿದೆ.

ಅವಿದ್ವಾಂಸಮಲ ಲೋಕೇ ವಿದ್ವಾಂಸಮಪಿ ವಾ ಪುನಃ/

ಪ್ರಮದಾ ಹ್ಯುತ್ಪಥಂ ನೇತುಂ ಕಾಮಕ್ರೋಧವಶಾನುಗಂ-(2-214)

ಅವನು ಪಂಡಿತನೇ ಇರಲಿ, ಪಾಮರನೇ ಆಗಿರಲಿ ಕಾಮ ಕ್ರೋಧ ವಶನಾದ ಮನುಷ್ಯನನ್ನು ಮಾರ್ಗ ಭ್ರಷ್ಟನನ್ನಾಗಿ ಮಾಡಲು ಸ್ತ್ರೀ ಸಮರ್ಥಳು.

ನೈತಾ ರೂಪಂ ಪರೀಕ್ಷಂತೇ ನಾಸಾಂ ವಯಸಿ ಸಂಸ್ಥಿತಿಃ/

ಸುರೂಪಂ ವಾ ವಿರೂಪಂ ವಾ ಪುಮಾನತ್ಯೇವ ಭುಂಜತೇ//-(9-14)

ಸ್ತ್ರೀಯರು ಪುರುಷರ ರೂಪ ಹಾಗೂ ವಯಸ್ಸುಗಳನ್ನು ಕುರಿತು ಹೆಚ್ಚು ವಿಚಾರಿಸಲು ಹೋಗುವುದಿಲ್ಲ. ಕುರೂಪಿಯಾಗಿರಲಿ, ಸುರೂಪಿಯಾಗಿರಲಿ ಪುರುಷನನ್ನು ಭೋಗಿಸುವರು.

ಪಿತ್ರಾ ಭರ್ತಾ ಸುತೈರ್ವಾಪಿ ನೇಚ್ಛೇದ್ವಿರಹಮಾತ್ಮನಂ/

ಏಷಾಂ ಹಿ ವಿರಹೇಣ ಸ್ತ್ರೀ ಗರ್ಹ್ಯೇ ಕುರ್ಯಾಭೇ ಕುಲೇ//-(5-149)

ಸ್ತ್ರೀಯರು ತಂದೆ, ಗಂಡ, ಮಕ್ಕಳನ್ನು ಬಿಟ್ಟು ಒಬ್ಬಳೇ ಇರಬಾರದು. ಹಾಗೆ ಒಬ್ಬಳೇ

ಜಿ.ಎನ್. ನಾಗರಾಜು

ಇದ್ದರೆ ಉಭಯ ಕುಲಗಳಿಗೂ ಕೆಟ್ಟ ಹೆಸರು ತರುತ್ತಾಳೆ.

ಅಸ್ವತಂತ್ರಾಃ ಸ್ತ್ರೀಯಃ ಕಾರ್ಯಾಃ ಪುರುಷೈಃ ಸ್ವೈರ್ ದಿವಾನಶಂ/

ವಿಷಯೇಷು ಚ ಸಜ್ಜಂತ್ಯಃ ಸಂಸ್ಥಾಪ್ಯಾ ಆತ್ಮನೋ ವಶೇ//-(9-2)

ಹಗಲೂ ಇರುಳೂ ಪುರುಷರು ಸ್ತ್ರೀಯರನ್ನು ಅಧೀನದಲ್ಲಿ ಇಟ್ಟುಕೊಳ್ಳಬೇಕು. ಸಾಮಾನ್ಯವಾಗಿ ಸುಖ-ಭೋಗಾದಿ ವಿಷಯಾಭಿಲಾಷೆಗಳಲ್ಲಿ ಪ್ರವರ್ತಿಸುವ . ಸ್ತ್ರೀಯರನ್ನು ಅಂಕೆಯಲ್ಲಿ ಇರಿಸಿಕೊಳ್ಳಬೇಕು.

ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವನೇ/

ಪುತ್ರಾಣಾಂ ಭರ್ತರಿ ಪ್ರೇತೇ ಭಜೇತ್ ಸ್ತ್ರೀ ಸ್ವತಂತ್ರತಾಂ//-(5-148)

ಬಾಲ್ಯದಲ್ಲಿ ತಂದೆಯ ವಶದಲ್ಲಿ ಯೌವ್ವನದಲ್ಲಿ ಗಂಡನ ವಶದಲ್ಲಿ ಗಂಡ ಸತ್ತ ನಂತರ ಪುತ್ರರ ಅಧೀನದಲ್ಲಿ ಬಾಳಬೇಕಲ್ಲದೇ ತಾನೇ ಸ್ವತಂತ್ರವಾಗಿ ವ್ಯವಹರಿಸಬಾರದು.

(ಮನುಸ್ಮೃತಿಯ ಬಹಳ ಪ್ರಸಿದ್ಧವಾದ ಶ್ಲೋಕ-

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ/

ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ//-(9-3)

ಇದಕ್ಕೆ ಸಮಾನಾರ್ಥಕವಾದ (5-148)ರ ಮೇಲಿನ ಶ್ಲೋಕ ಹೇಗೆ ಮತ್ತೆ ಮತ್ತೆ ಮನು

ಮಹಿಳೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ವೆಂದು ಪ್ರತಿಪಾದಿಸುತ್ತಾನೆ ಎಂಬುದಕ್ಕೆ ಉದಾಹರಣೆಯಾಗಿದೆ.

ಅದಕ್ಕೆ ಅವನು ಕೊಡುವ ಕಾರಣ ಪುರುಷರು ಮಹಿಳೆಯರನ್ನು ಬಲಾತ್ಕರಿಸಿ "ಕೆಡಿಸುತ್ತಾರೆ" ಎಂದಲ್ಲ. ಬದಲಾಗಿ ಮಹಿಳೆಯರನ್ನು ನಂಬುವುದಕ್ಕೆ ಆಗುವುದಿಲ್ಲ. ಅವರು ಕಾಮಾಸಕ್ತರಾಗಿ ತಾವೇ ಯಾರೊಂದಿಗಾದರೂ ಭೋಗಕ್ಕೆ ಎಳಸುತ್ತಾರೆ ಎಂದು. ಎಂಥಹಾ ವಿಚಿತ್ರ ! ವಾಸ್ತವಕ್ಕೆ ಪೂರ್ಣ ವಿರುದ್ಧವಾದ ಈ ಕಲ್ಪನೆಯನ್ನು ಹಲವಾರು ಬಾರಿ ಗಟ್ಟಿಯಾಗಿ ಹೇಳಿ ಅದನ್ನೇ ಸತ್ಯ ಎಂದು ಸಮಾಜ ಒಪ್ಪಿಕೊಳ್ಳುವಂತೆ ಮಾಡುವ ಈ ಪ್ರಯತ್ನ !! ಇನ್ನು ಮುಂದೆ ಕೆಲ ಅಂಶಗಳನ್ನು ನೋಡೋಣ.)

ಪ್ರಯುಜ್ಯತೇ ವಿವಾಹೇಷು ಪ್ರದಾನಂ ಸ್ವಾಮ್ಯ ಕಾರಣಂ/-(5-152)

ವಿವಾಹದಲ್ಲಿ ಕನ್ಯಾದಾನ ಮಾಡುವುದೆಂದರೆ ಅವಳ ಮೇಲೆ ಒಡೆತನವನ್ನು, ಅಧಿಕಾರವನ್ನು ನೀಡುವುದಾಗಿದೆ.

ಬೀಜಸ್ಯ ಚೈವ ಯೋನಾಸ್ಚ ಬೀಜಮುತ್ಕೃಷ್ಟಮುಚ್ಯತೇ/


ಸರ್ವ ಭೂತ ಪ್ರಸೂತಿರ್ಹಿ ಬೀಜ ಲಕ್ಷಣ ಸಂಹಿತಾ // -(9-35)

ಬೀಜದ ಹಾಗೂ ಕ್ಷೇತ್ರದ ತುಲನೆಯಲ್ಲಿ ಬೀಜಕ್ಕೇನೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ಸರ್ವ ಪ್ರಾಣಿಗಳ ಉತ್ಪತ್ತಿಯಲ್ಲಿ ಆ ಬೀಜದ ಲಕ್ಷಣಗಳೇ ಪ್ರಧಾನ ಪಾತ್ರ ವಹಿಸುತ್ತವೆ.

(ಆದ್ದರಿಂದ ಪುರುಷನೇ ಶ್ರೇಷ್ಠ, ಮಹಿಳೇ ಅವನಿಗೆ ಅಧೀನಳಾಗಿರಬೇಕು. ಅನೇಕ ಅಮ್ಮಗಳ ಪೂಜೆಯಿಂದ ಶ್ರೀಮಂತವಾಗಿರುವ ಜಾನಪದ ಮೌಲ್ಯಗಳನ್ನು ತುಳಿದು ಪುರುಷಾಧಿಕಾರವನ್ನು ಸ್ಥಾಪಿಸಲು ಏನೆಲ್ಲ ಕಸರತ್ತು ಮಾಡಿದ್ದಾರೆ ಎನ್ನುವುದಕ್ಕೆ ಬೇರೆ ಉದಾಹರಣೆ ಬೇಕೇ. ಈ "ತತ್ವ"ದಿಂದ ಉದ್ಭವಿಸುತ್ತವೆ ಮುಂದಿನ ಸ್ತ್ರೀ ನಿಬಂಧನೆಗಳು.)

ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋ ನವ್ರತಂ ನಾಪ್ಯ ಪೋಷಿತಂ/

ಪತಿಂ ಶುಶ್ರೂಷತೇ ಯೇನ ತೇನ ಸ್ವರ್ಗೇ ಮಹಿಯತೇ// (5-155)



ಪತಿಯನ್ನು ಬಿಟ್ಟು ಸ್ತ್ರೀಗೆ ಬೇರೇ ಯಜ್ಞವೇ ಇಲ್ಲ. ವ್ರತವೂ ಇಲ್ಲ. ಉಪವಾಸವೂ ಇಲ್ಲ. ಪತಿ ಸೇವೆ ಮಾಡುವುದರಿಂದಲೇ ಸ್ತ್ರೀಯು ಸ್ವರ್ಗದಲ್ಲಿ ಗೌರವ ಪಡೆಯುತ್ತಾಳೆ.

ವಿಶೀಲಂ ಕಾಮವೃತ್ತೋ ವಾಗುಣೈರ್ವಾ ಪರಿವರ್ಜಿತಃ/

ಉಪಚರ್ಯಃ ಸ್ತ್ರೀಯಾ ಸಾಧ್ವಾ ಸತತಂ ದೇವತ್ಪತಿಃ//-(95-154)

ಪತಿಯ ನಡತೆಯು ಚೆನ್ನಾಗಿರದಿದ್ದರೂ, ಕಾಮಾತುರನಾಗಿ ಅವನು ಬೇರೆ ಹೆಣ್ಣನ್ನು ಮೋಹಿಸಿದರೂ, ದುರ್ಗುಣಿಯಾಗಿದ್ದರೂ ಸಹ ಸಾಧ್ವಿಯಾದ ಹೆಂಡತಿಯು ತನ್ನ ಪತಿಯನ್ನು ದೇವರೆಂದೇ ಭಾವಿಸಿ ಸೇವೆ ಮಾಡಬೇಕು.

ಪ್ರಜನಾರ್ಥಂ ಮಹಾಭಾಗಾಃ ಪೂಜಾರ್ಹಾ ಗೃಹದೀಪ್ತಯಃ

ಸ್ತ್ರಿಯಃ ಶ್ರೀಯಸ್ಚ ಗೇಹೇಷು ನ ವಿಶೇಷೋಸ್ತಿ ಕಶ್ಚನ//–(9–26)

ಮನೆಯ ದೀಪಗಳಾದ ಈ ಸ್ತ್ರೀಯರು ಸಂತಾನವನ್ನು ಉತ್ಪಾದಿಸಲಿಕ್ಕೆಂದೇ ಇದ್ದಾರೆ. ಸ್ತ್ರೀ ಹಾಗೂ ಐಶ್ವರ್ಯಗಳಲ್ಲಿ ಭೇದವಿಲ್ಲ.

ಉತ್ಪಾದನಮಪತ್ಯಸ್ಯ ಜಾತ್ಯಸ್ಯ ಪರಿಪಾಲನಂ/

ಪ್ರತ್ಯಹಂ ಲೋಕಯಾತ್ರಾ ಯಾಃ ಪ್ರತ್ಯಕ್ಷ ಸ್ತ್ರೀ ನಿಬಂಧನಂ// –(9–27)

ಮಕ್ಕಳನ್ನ ಹಡೆಯುವುದು, ಸಾಕುವುದು, ಸಂಸಾರವನ್ನ ನಿರ್ವಹಿಸುವುದು ಇವು ಸ್ತ್ರೀಯರ ಕರ್ತವ್ಯಗಳಾಗಿವೆ.

ಈ ಮೇಲಿನ ಶ್ಲೋಕಗಳ ಜೊತೆಗೆ ಮತ್ತೊಂದು ಪ್ರಸಿದ್ಧ ಶ್ಲೋಕ ಇದೆ.

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ/

ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ// (3–56)

ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಪೂಜಿಸಲ್ಪಡುವುದಿಲ್ಲವೋ ಅಲ್ಲಿ ಎಲ್ಲ ಯಜ್ಞ ಪೂಜೆಗಳು ನಿಷ್ಫಲವಾಗುತ್ತವೆ.

ಇದು ದೇವರೇ ರೂಪಿಸಿದ್ದು, ಅನುಲ್ಲಂಘನೀಯ

ಮಹಿಳೆಯರ ಬಗ್ಗೆ ಸಮಾಜದ ಅಭಿಪ್ರಾಯವನ್ನು ರೂಪಿಸಿದ ಮನುಸ್ಮೃತಿಯಲ್ಲಿರುವ ಶ್ಲೋಕಗಳಲ್ಲಿ ಕೆಲವನ್ನು ಇಲ್ಲಿ ನೀಡಿರುವಾಗಲೇ ಮಹಾಭಾರತ, ರಾಮಾಯಣಗಳಲ್ಲಿ ಅಲ್ಲಲ್ಲಿ ಬರುವ ವಿದುರ ನೀತಿ, ಸನತ್ಸುಜಾತ ನೀತಿ ಇತ್ಯಾದಿ ಉಪದೇಶಗಳು, ಅನೇಕ ದೃಷ್ಟಾಂತ ಕಥೆಗಳು, ಉಪಕಥೆಗಳು ಇಂತಹದೇ ವಿಚಾರಗಳನ್ನು ಬೇರೆ ಬೇರೆ ರೀತಿಯಲ್ಲಿ ಪ್ರತಿಪಾದಿಸುತ್ತವೆ. ಈ ಗ್ರಂಥಗಳು ಕೇವಲ ಒಂದು ಗ್ರಂಥ ಎಂದಷ್ಟೇ ಪರಿಗಣಿತವಾಗದೇ ಶಾಸ್ತ್ರ, ಎಲ್ಲರೂ ಪಾಲಿಸಬೇಕಾದ ಕಟ್ಟಳೆ, ಸ್ವತಃ ದೇವರೇ ರೂಪಿಸಿದ್ದು. ಆದ್ದರಿಂದ ಅನುಲ್ಲಂಘನೀಯ ಎಂಬ ಪರಿವೇಷದೊಂದಿಗೆ ಭಾರತದ ಜನಮಾನಸದಲ್ಲಿ ಪ್ರವಹಿಸುತ್ತಿರುವುದರಿಂದ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಆದ್ದರಿಂದ ಮಹಿಳೆಯರ ಬಗೆಗೆ ಭಾರತೀಯ ಸಂಸ್ಕೃತಿಯಲ್ಲಿ ರೂಪುಗೊಂಡ ದೃಷ್ಟಿಕೋನವನ್ನು ಆಳವಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಆದ್ದರಿಮದ ಎಲ್ಲ ಮಹಿಳಾ ಪರ ಚಿಂತಕರೂ ಮೂಲ ಕೃತಿಯನ್ನು ಓದಬೇಕೆಂದು ವಿನಂತಿಸುತ್ತೇನೆ.

'ಮನು ಸ್ಮೃತಿ'ಯ ಹೆಸರು ಎತ್ತಿದಾಕ್ಷಣವೇ ಕೆಲವರಿಗೆ ವಿಪರೀತ ಬಾಧೆಯುಂಟಾಗುವುದನ್ನು ಹಲವು ಅಂತರ್ಜಾಲ ಚರ್ಚೆಗಳಲ್ಲಿ ಕಂಡಿದ್ದೇನೆ. ಅವರೆಲ್ಲರಲ್ಲಿಯೂ ನನ್ನ ವಿನಂತಿಯಿಷ್ಟೇ : ದಯವಿಟ್ಟು ಮೂಲವನ್ನು ಅಭ್ಯಾಸ ಮಾಡಿ. ಅದರಲ್ಲಿಯ ವಿಚಾರಗಳಿಗೂ ಇಂದಿಗೂ ಸಮಾಜದಲ್ಲಿ ಪ್ರಚಲಿತವಾಗಿರುವ ಅಭಿಪ್ರಾಯಗಳಿಗೂ ತಾಳೆ ಹಾಕಿ ನೋಡಿ, ಮಹಿಳೆಯರ ಮೇಲಿನ ದೌರ್ಜನ್ಯಗಳ ಮೇಲೆ ಇಂತಹ ವಿಚಾರಗಳ ಪ್ರಭಾವವಿಲ್ಲವೇ ಎಂಬುದನ್ನು ವಸ್ತು ನಿಷ್ಠ ದೃಷ್ಟಿಯಿಂದ ವಿಶ್ಲೇಷಿಸಿ ತೀರ್ಮಾನ ಮಾಡಿ. ನಂತರ ವಿಷಯಾಧಾರಿತವಾಗಿ ಚರ್ಚಿಸೋಣ.

ಅಪ್ರತಿಮ ಹೋರಾಟಗಾರ ಎ.ಕೆ.ಜಿ ......

ಪುಟ 5 ರಿಂದ

ವಿದೇಶ ಪ್ರವಾಸಕ್ಕೆ ತೆರಳಿದರು.

ಭಾಷಾವಾರು ರಾಜ್ಯಗಳ ರಚನೆಗಾಗಿ :

1956 ರಲ್ಲಿ ಭಾಷಾವಾರು ರಾಜ್ಯಗಳ ರಚನೆಗೆ ಒತ್ತಾಯಿಸಿ ನಡೆದ ಚಳುವಳಿ ಪ್ರಯುಕ್ತ ಗುಜರಾತ್‌ನಲ್ಲಿ ನಡೆದ ಬೃಹತ್ ಹೋರಾಟದಲ್ಲಿ ಭಾಗವಹಿಸಿದ್ದರು. 1957 ರಲ್ಲಿ ಕಾಸರಗೋಡು ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದರು. 1957–58 ರಲ್ಲಿ ಈಜಿಪ್ಟ್, ಇಟಲಿ, ಪೋಲೆಂಡ್, ಬಲ್ಗೇರಿಯಾ, ಫ್ರಾನ್ಸ್, ಹಂಗೇರಿ, ರಾಷ್ಟ್ರಗಳಿಗೆ ಭೇಟಿ ನೀಡಿದ್ದರು. 1958 ರಲ್ಲಿ ಪಂಜಾಬ್‌ನಲ್ಲಿ "ಅಭಿವೃದ್ಧಿ ತೆರಿಗೆ" ವಿರೋಧಿಸಿ ನಡೆದ ಚಳುವಳಿಗೆ ಮುಖಂಡತ್ವ ನೀಡಿದ್ದರು. ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಆಡಳಿತದಲ್ಲಿದ್ದಾಗ ಜಾರಿಗೆ ತಂದ ರೈತ ಮಸೂದೆಗೆ ರಾಷ್ಟ್ರಪತಿಯವರು ಅಂಗೀಕಾರ ನೀಡದಿರುವುದನ್ನು ಪ್ರತಿಭಟಿಸಿ 1960 ರಲ್ಲಿ ಕಾಸರಗೋಡಿನಿಂದ ಕೇರಳದ ರಾಜಧಾನಿ ತಿರುವನಂತಪುರಂಗೆ ಕಾಲ್ನಡಿಗೆ ಜಾಥಾ ನಡೆಸಿದರು. ಕೇರಳದ ಇಡುಕ್ಕಿ ಜಿಲ್ಲೆಯಲ್ಲಿ 8 ಸಾವಿರ ಎಕರೆ ಜಮೀನಿನಿಂದ 17 ಸಾವಿರ ರೈತ ಕುಟುಂಬಗಳನ್ನು ಅಂದಿನ ಕಾಂಗ್ರೆಸ್ ಸರ್ಕಾರ ಒಕ್ಕಲೆಬ್ಬಿಸಿದ್ದುದರ ವಿರುದ್ಧ ಎ.ಕೆ. ಗೋಪಾಲನ್‌ರವರು ಅಮರಾವತಿಯಲ್ಲಿ 1961 ಜೂನ್ 6 ರಿಂದ 17 ರವರೆಗೆ ಅಮರಣಾಂತ ಉಪವಾಸ ಕೈಗೊಂಡಿದ್ದರು. ಎ.ಕೆ.ಗೋಪಾಲನ್‌ರವರು ಕೈಗೊಂಡ ಈ ಅಮರಣಾಂತ ಉಪವಾಸದ ಕಾರಣ ರೈತರ ಬೇಡಿಕೆಗಳು ಈಡೇರಿಸಲ್ಪಟ್ಟವು. 1963 ಡಿಸೆಂಬರ್‌ನಲ್ಲಿ ಪುನಃ ಇಡುಕ್ಕಿ ಜಿಲ್ಲೆಯ ಬೇರೆ ತಾಲ್ಲೂಕೊಂದರಲ್ಲಿ ರೈತರನ್ನು ಒಕ್ಕಲೆಬ್ಬಿಸುವುದರ ವಿರುದ್ಧ ಪುನಃ ಅಮರಣಾಂತ ಉಪವಾಸ ಕೈಗೊಂಡರು.

ಸಿಪಿಐ(ಎಂ) ಸ್ಥಾಪನೆಯಲ್ಲಿ :

1964 ರಲ್ಲಿ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಿಂದ ಹೊರ ಬಂದ ಸಂಗಾತಿಗಳಲ್ಲಿ ಎ.ಕೆ. ಗೋಪಾಲನ್‌ರವರೂ ಒಬ್ಬರು. ಮುಂದೆ ತಕ್ಷಣ ಸಿಪಿಐ(ಎಂ) ಪಕ್ಷಕ್ಕೆ ರೂಪ ನೀಡುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು. 1964 ಅಕ್ಟೋಬರ್ 31 ರಿಂದ ನವೆಂಬರ್ 7 ರವರೆಗೆ ನಡೆದ ಪಕ್ಷದ 7ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾಗಿ ಆಯ್ಕೆಯಾದರು.

ಅದೇ ವರ್ಷ ಡಿಸೆಂಬರ್‌ನಲ್ಲಿ ರಾಷ್ಟ್ರೀಯ ಭದ್ರತಾ ಕಾಯಿದೆ ಅಡಿಯಲ್ಲಿ ಪುನಃ ಬಂಧನಕ್ಕೆ ಒಳಗಾದರು. 1968 ರಲ್ಲಿ ಪಕ್ಷದಲ್ಲಿ ಉದ್ಭವವಾದ ಎಡ ತೀವ್ರವಾದ ಧೋರಣೆಗೆ ಎದುರಾಗಿ ಪಕ್ಷ ನಡೆಸಿದ ಸೈದ್ಧಾಂತಿಕ ಕೆಲಸಗಳಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು. 1969 ರಲ್ಲಿ ಕೆಲವು ಕಾಲ ಪಕ್ಷದ ಕೇರಳ ರಾಜ್ಯ ಕಾರ್ಯದರ್ಶಿಗಳಾಗಿ ಸಹಾ ಕೆಲಸ ಮಾಡಿದ್ದರು. 1969 ರಲ್ಲಿ ಚರಿತ್ರಾರ್ಹವಾದ ಪಕ್ಷದ ಕೇರಳ ಅಲ್ಲಪುರಂ ಸಮ್ಮೇಳನದ ಘೋಷಣೆಯಂತೆ ಬಡವರು ವಾಸಿಸುವ 10 ಸೆನ್ಸ್ ಭೂಮಿಗೆ ಬೇಲಿ ಹಾಕಿ ವಶಪಡಿಸಿಕೊಳ್ಳುವ ಹೋರಾಟಕ್ಕೆ ನಾಯಕತ್ವ ನೀಡಿದರು. ಅದೇ ವರ್ಷ ಮೇ 25 ರಿಂದ ಟ್ರಾವಂಕೂರ್ ಮಹಾರಾಜರ ಬಳಿ ಇದ್ದಂತಹ ಹೆಚ್ಚುವರಿ ಭೂಮಿಯಲ್ಲಿ ಪ್ರವೇಶಿಸಿದ ಎ.ಕೆ. ಗೋಪಾಲನ್‌ರವರು ಆ ಭೂಮಿಯಲ್ಲಿ ಕೆಂಬಾವುಟ ನೆಟ್ಟು ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡರು.

1974 ದೇಶದಲ್ಲಿಯೇ ಪ್ರಸಿದ್ಧಿಯಾದ ರೈಲ್ವೆ ಕೆಲಸಗಾರರ ಐತಿಹಾಸಿಕ ಮುಷ್ಕರದಲ್ಲಿ ಮುಖ್ಯ ಪಾತ್ರ ವಹಿಸಿದ್ದರು. 1975 ರಲ್ಲಿ ತುರ್ತು ಪರಿಸ್ಥಿತಿಗೆ ಎದುರಾದ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

ಕರ್ನಾಟಕದ ನಂಟು :

ಅಂದಿನ ಮಲಬಾರಿಗೂ



ಮಂಗಳೂರಿಗೂ ನಿಕಟ ಸಂಬಂಧವಿತ್ತು. ಸಹಜವಾಗಿಯೇ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಎ.ಕೆ.ಜಿಯವರ ಚಟುವಟಿಕೆ ಮಂಗಳೂರಿನವರೆಗೂ ವಿಸ್ತರಿಸಿತ್ತು. ಸ್ವಾತಂತ್ರ್ಯ ನಂತರದಲ್ಲಿ ಅವರು ಸಿರ್ಸಿ ಮತ್ತು ಹಾವೇರಿಗೆ ಭೇಟಿ ನೀಡಿ ಅಲ್ಲಿನ ಕಿಸಾನ್ ಆಂದೋಲನಕ್ಕೆ ಸಹಾಯಮಾಡಿದರು. 1970 ರ ದಶಕದಲ್ಲಿ ಸಿಪಿಐ(ಎಂ) ಮತ್ತು ರೈತಸಂಘ ಅಂದಿನ ಕೋಲಾರ ಜಿಲ್ಲೆಯಲ್ಲಿ ರೂಪಿಸಿದ ಭೂ ಆಕ್ರಮಣ ಚಳುವಳಿಯಲ್ಲಿ ಅವರು ಭಾಗವಹಿಸಿದ್ದರು. ಶಿಡ್ಲಘಟ್ಟ, ಬಾಗೇಪಲ್ಲಿ, ಚಿಂತಾಮಣಿ, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಭೂ ಅತಿಕ್ರಮಣ ಚಳುವಳಿಗೆ ಎ.ಕೆ.ಜಿಯವರು ನೇತೃತ್ವ ನೀಡಿದರು.

ತುರ್ತು ಪರಿಸ್ಥಿತಿ ವಿರುದ್ಧ :

ಎ.ಕೆ.ಜಿ. ದೀರ್ಘಕಾಲ ವಿರೋಧ ಪಕ್ಷದ ನಾಯಕರಾಗಿದ್ದರು. 1975ರಲ್ಲಿ ಆಂತರಿಕ ಭದ್ರತೆಯ ನೆಪದಲ್ಲಿ ಶ್ರೀಮತಿ ಇಂದಿರಾಗಾಂಧಿ ಸರ್ಕಾರ ಘೋಷಿಸಿದ ಆಂತರಿಕ ತುರ್ತು ಪರಿಸ್ಥಿತಿಯನ್ನು ಅವರು ಬಲವಾಗಿ ವಿರೋಧಿಸಿದರು. ಅವರನ್ನು ಬಂಧಿಸಿ ಒಂದು ವಾರ ಜೈಲಿನಲ್ಲಿಟ್ಟಿದ್ದರು ಮಾತ್ರವಲ್ಲ ಚಿತ್ರಹಿಂಸೆ ನೀಡಿದರು. ಬಿಡುಗಡೆಯಾಗಿ ಬಂದ ಬಳಿಕ 21–7–1975 ರಂದು ಅವರು ಲೋಕಸಭೆಯಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಮಾಡಿದ ಭಾಷಣ ಪಾರ್ಲಿಮೆಂಟ್ ಭವನ ನಡಗುವಂತಾಯಿತು. ತುರ್ತು ಪರಿಸ್ಥಿತಿ ಅಂತ್ಯದ ವೇಳೆಗೆ ಅವರ ಆರೋಗ್ಯ ತುಂಬಾ ಹದಗೆಟ್ಟಿತು. 22 ಮಾರ್ಚ್ 1977 ರಂದು ಮಧ್ಯ ರಾತ್ರಿಯ ವೇಳೆಗೆ ಇಂದಿರಾಗಾಂಧಿ ಚುನಾವಣೆಯಲ್ಲಿ ಸೋತರು ಎಂಬ ಸುದ್ದಿ ಕಿವಿಗೆ ಬಿದ್ದ ನಂತರ ಎ.ಕೆ.ಜಿ. ಕೊನೆಯುಸಿರೆಳೆದರು. ಸುಮಾರು 27 ವರ್ಷಗಳ ನಂತರ 2004 ರಲ್ಲಿ ಎ.ಕೆ.ಜಿ ಅವರ ಪೂರ್ಣ ಪ್ರಮಾಣದ ಪ್ರತಿಮೆಯನ್ನು ಲೋಕಸಭಾ ಭವನದೊಳಗೆ ಅನಾವರಣಗೊಳಿಸಿ ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಲಾಯಿತು.

(ಅಪ್ರತಿಮ ಹೋರಾಟಗಾರ ಎ.ಕೆ.ಜಿ.

ರಾಜಕೀಯ ಸಮಯ ಸಾಧಕತನ......

ಪುಟ ೮ ರಿಂದ

ಇನ್ನಷ್ಟು ಸಂತೋಷವಾಗುತ್ತದೆ. ಏಕೆಂದರೆ ಆರ್ಥಿಕ ಸುಧಾರಣೆಗಳ ಧೋರಣೆಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಆಯ್ಕೆಯ ಅವಕಾಶ ಅತ್ಯಲ್ಪ.

ಬಿಜೆಪಿ ಪೀಕಲಾಟ

ಇಂತಹ ಸಮಾನ ಅಂಶಗಳೇನಿದ್ದರೂ, ನಮ್ಮ ದೇಶದ ಜನತೆ ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯಲ್ಲಿ ತಮ್ಮ ನಂಬಿಕೆ ಮತ್ತು ಅದಕ್ಕೆ ತಮ್ಮ ಬದ್ಧತೆಯನ್ನು ಸಂಶಕ್ಕೆಡೆಯಿಲ್ಲದಂತೆ ದೃಢಪಡಿಸಿದ್ದಾರೆ. ಈ ವಿಷಯದಲ್ಲಿ ಅವರಿಗೆ ಆರೆಸ್ಸೆಸ್‌ನ ರಾಜಕೀಯ ಅಜೆಂಡಾವನ್ನು ಬಿಜೆಪಿ ಅನುಸರಿಸುತ್ತಿರುವುದು ಅಸಹ್ಯವೆನಿಸಿದೆ. ಇದೀಗ ಬಿಜೆಪಿ ನೇತೃತ್ವದ ಯಾವುದೇ ಮೈತ್ರಿಕೂಟವನ್ನು ಕಾಡುವ ವೈರುಧ್ಯ, ಇದ-ಕ್ಕೆ ಪರಿಹಾರವೇ ಇಲ್ಲ. ಈ ಮೈತ್ರಿಕೂಟ ಬಹುಮತ ತೋರಿಸುವಷ್ಟು ಸಂಖ್ಯೆ ಪಡೆದರೆ, ಆಗ ಬಿಜೆಪಿ ತನ್ನ ಮೂಲ ಕೋಮುವಾದಿ ಅಜೆಂಡಾವನ್ನು ಹಿಂದಕ್ಕೆ ಸರಿಸಬೇಕಾಗುತ್ತದೆ. ಮತ್ತೊಂದೆಡೆ, ಆರೆಸ್ಸೆಸ್ ನಿರ್ದೇಶನದಂತೆ ಕೋಮುವಾದಿ ಅಜೆಂಡಾವನ್ನು ಆಕ್ರಮಣಕಾರಿಯಾಗಿ ಅನುಸರಿಸದಿದ್ದರೆ, ಬಿಜೆಪಿಗೆ ತನ್ನ ಸ್ವಂತ ರಾಜಕೀಯ ನೆಲೆಯನ್ನು ಕ್ರೋಡೀಕರಿಸುವುದಾಗಲೀ, ವಿಸ್ತರಿಸುವದಾಗಲೀ ಸಾಧ್ಯವಾಗುವುದಿಲ್ಲ. ಈ ವೈರುಧ್ಯ ಆಗಲೇ ಕಾಣಬರುತ್ತಿದೆ. ಮುಂಬರುವ ಚುನಾವಣೆಗಳಲ್ಲಿ ಗೆಲ್ಲಬಹುದೆಂಬ ಭ್ರಮೆಯ ಆಧಾರದಲ್ಲಿ ತಮ್ಮ ಪ್ರಧಾನ ಮಂತ್ರಿ ಅಭ್ಯರ್ಥಿ ಯಾರಾಗಬೇಕೆಂಬ ಅದರ ಆಯ್ಕೆಗಳು ಇದನ್ನು ಬಿಂಬಿಸುತ್ತಿವೆ.

ಆದರೆ ಜನತೆಯ ನಿಜವಾದ ಆಶೋತ್ತರಗಳು ಇಂತಹ ರಾಜಕೀಯ ಕೂಟಗಳಲ್ಲಿ, ಮೈತ್ರಿಗಳಲ್ಲಿ ಯಾವ ಪಕ್ಷ ಎಲ್ಲಿರುತ್ತದೆ ಎಂಬ ಊಹಾಪೋಹಗಳ ನಡುವೆ ಸಾಕಷ್ಟು ಗಮನ ಪಡೆದಿಲ್ಲ. ಎಸ್‌ಪಿಯಂತಹ ಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರವನ್ನು ಪಾರು ಮಾಡುತ್ತಲೇ ಇದ್ದರೂ, ಮೂರನೇ ರಂಗದ ಬಗ್ಗೆ ಮಾತಾಡುತ್ತಿದ್ದರೆ, ಅದು ಜನಗಳಿಗೆ ಅವರ ಈಗಿನ ಶೋಚನೀಯ ಪರಿಸ್ಥಿತಿಗಳಿಂದ ಸ್ವಲ್ಪ ಪರಿಹಾರ ನೀಡಬಲ್ಲ ಒಂದು ಬದಲಾವಣೆ ಬೇಕಾಗಿದೆ ಎಂಬ ಒತ್ತಡ ಆ ಪಕ್ಷಗಳ ಸ್ವ-ಂತ ರಾಜಕೀಯ ಮತ್ತು ಸಾಮಾಜಿಕ ನೆಲೆಗಳಿಂದಲೇ ಬರುತ್ತಿರುವುದರಿಂದಾಗಿ. ಆರ್ಥಿಕ ನಿಧಾನಗತಿ, ಎಲ್ಲ ಸರಕುಗಳ ನಿರಂತರ ಬೆಲೆಯೇರಿಕೆ, ಆಳಗೊಳ್ಳುತ್ತಿರುವ ಕೃಷಿ ಸಂಕಟ- ಇವೆಲ್ಲ ಒಟ್ಟು ಸೇರಿ ಜನಗಳ ಮೇಲೆ ಅಭೂತಪೂರ್ವ ನೋವು-ಸಂಕಟಗಳನ್ನು ಹೇರುತ್ತಿವೆ. ಇವುಗಳಿಗೆ ಪರಿಹಾರ ಬೇಕು, ಒಂದು ಉತ್ತಮ ಬದುಕು ಬೇಕು ಎಂಬ ಜನತೆಯ ಕೂಗು ಒಂದು 'ಮೂರನೇ ರಂಗ'ದ ಸರಕಾರ ಬೇಕೆಂಬ ಇಂತಹ ರಾಜಕೀಯ ಅಭಿವ್ಯಕ್ತಿ ಪಡೆ-ಯುತ್ತಿದೆ.

ಕಾಂಗ್ರೆಸೇತರ, ಬಿಜೆಪಿಯೇತರ ಎಂದರಷ್ಟೇ ಸಾಕೇ?

ಆದರೆ, ಕೇವಲ ಒಂದು ಕಾಂಗ್ರೆಸೇತರ, ಬಿಜೆಪಿಯೇತರ ಸರಕಾರ ಬಂದರಷ್ಟೇ ಸಾಕೇ, ಅದರಿಂದ ಜನತೆ ನಿರೀಕ್ಷಿಸುವ ಅವರಿಗೆ ಬಹಳ ಅಗತ್ಯವಾಗಿರುವ ಪರಿಹಾರ ಸಿಗಬಲ್ಲುದೇ ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ. ಇಂತಹ ಪರಿಹಾರ ಕೇವಲ ಪರ್ಯಾಯ ಧೋರಣೆಗಳಿಂದಷ್ಟೇ ಸಾಧ್ಯ. ಆದ್ದರಿಂದ ಜನಗಳಿಗೆ ಬೇಕಾಗಿರುವುದು ಕೇವಲ ಒಂದು ಪರ್ಯಾಯ ಸರಕಾರವಷ್ಟೇ ಅಲ್ಲ, ಒಂದು ಪರ್ಯಾಯ ಜನಪರ ಧೋರಣೆಗಳ ದಿಕ್ಕಿನಲ್ಲಿ ಸಾಗಬಲ್ಲ ಒಂದು ಪರ್ಯಾಯ ಸರಕಾರ ಬೇಕಾಗಿದೆ.

ಸಿಪಿಐ(ಎಂ)ನ ಇತ್ತೀಚೆಗಷ್ಟೇ ಮುಕ್ತಾಯಗೊಂಡ ಸಂಘರ್ಷ ಸಂದೇಶ ಜಾಥಾ ಇಂತಹ ಪರ್ಯಾಯ ಧೋರಣೆಗಳನ್ನು, ಹಸಿವು ಕಾಡದ ಬದುಕಿನ, ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಆಶ್ರಯದ ಮೂಲಭೂತ ಹಕ್ಕನ್ನು ಪ್ರತಿ ಭಾರತೀಯರಿಗೆ ನೀಡಬಲ್ಲ ಪರ್ಯಾಯ ಧೋರಣೆಗಳನ್ನು ಎತ್ತಿ ತೋರಿದೆ. ಪ್ರತಿ ಭಾರತೀಯ ಈ ಹಕ್ಕುಗಳನ್ನು ಅನುಭವಿಸುವಂತೆ ಮಾಡಲು ಅಗತ್ಯವಾದ ಸಂಪನ್ಮೂಲಗಳನ್ನು ದೇಶ ಪಡೆದಿದೆ ಎಂದು ಜಾಥಾ ತೋರಿಸಿ ಕೊಟ್ಟಿದೆ. ಆದರೆ ಸದ್ಯಕ್ಕೆ ಈ ಸಂಪನ್ಮೂಲಗಳನ್ನು ಬೃಹತ್ ಭ್ರಷ್ಟಾಚಾರಗಳು, ಮಹಾ ಹಗರಣಗಳ ಮೂಲಕ ಲೂಟಿ ಹೊಡೆಯಲಾಗುತ್ತಿದೆ, ಇಲ್ಲವೇ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುವಂತೆ, ಬಡವರನ್ನು ಮತ್ತಷ್ಟು ದಾರಿದ್ರ್ಯಕ್ಕೆ ತಳ್ಳುವಂತೆ ರೂಪಿಸಿರುವ ಧೋರಣೆಗಳ ಮೂಲಕ ಸಾಗಿಸಲಾಗುತ್ತಿದೆ. ಈ ಧೋರಣೆಗಳನ್ನು ಬದಲಿಸಬೇಕಾಗಿದೆ.

ನಮ್ಮ ದೇಶದ ಧೋರಣೆಗಳ ದಿಕ್ಕಿನಲ್ಲಿ ಇಂತಹ ಬದಲಾವಣೆ ತರುವುದು ನಮ್ಮ ಆಳುವ ವರ್ಗಗಳ ಮೇಲೆ ಭಾರೀ ಒತ್ತಡಗಳನ್ನು ತರುವ ಮೂಲಕ ಮಾತ್ರವೇ ಸಾಧ್ಯ. ಇದಕ್ಕಾಗಿ ಜನತೆಯ ಹೋರಾಟಗಳನ್ನು ಬಲಿಷ್ಟಗೊಳಿಸಬೇಕಾಗಿದೆ. ಈ ಉದ್ದೇಶದಿಂದಲೇ ಸಿಪಿಐ(ಎಂ) ಮೇ ಉತ್ತರಾರ್ಧದಲ್ಲಿ ದೇಶವ್ಯಾಪಿ ಸಾಮೂಹಿಕ ಪಿಕೆಟಿಂಗ್‌ಗೆ ಕರೆ ನೀಡಿದೆ. ಇದು ಒಂದು ಬೃಹತ್ ಕಾನೂನುಭಂಗ ಚಳುವಳಿಯ ಸ್ವರೂಪವನ್ನುಪಡೆಯಬಹುದು. ಇಂತಹ ತೀವ್ರ ಹೋರಾಟಗಳು ಆಳುವ ವರ್ಗಗಳ ಮೇಲೆ ಧೋರಣೆಗಳ ದಿಕ್ಕನ್ನು ಬದಲಿಸಲು ಅಗತ್ಯ ಒತ್ತಡವನ್ನು ಹಾಕಬೇಕು. ಅದೇ ವೇಳೆಯಲ್ಲಿ ಇಂತಹ ಹೋರಾಟಗಳು ಕಾಂಗ್ರೆಸೇತರ, ಬಿಜೆಪಿಯೇತರ ಜಾತ್ಯಾತೀತ ಪಕ್ಷಗಳು ಕೇವಲ ಅಧಿಕಾರ ಹಂಚಿಕೊಳ್ಳಲಿಕ್ಕಾಗಿಯೇ ಒಂದು ರಂಗವನ್ನು ರಚಿಸುವ ರಾಜಕೀಯ ಸಮಯಸಾಧಕತನವನ್ನುತ್ಯಜಿಸಿ, ಪರ್ಯಾಯ ಧೋರಣೆಗಳನ್ನು, ನಮ್ಮ ಜನಗಳ ಬದುಕಿನ ಪರಿಸ್ಥಿತಿಗಳನ್ನು ಗಮನಾರ್ಹವಾಗಿ ಉತ್ತಮ ಪಡಿಸಬಲ್ಲ ಮತ್ತು ಎಲ್ಲ ಭಾರತೀಯರಿಗೆ ಒಂದು "ಉತ್ತಮ ಭಾರತ"ವನ್ನು ನಿರ್ಮಿಸಬಲ್ಲ ಧೋರಣೆಗಳನ್ನು ಜಾರಿ ಮಾಡುವ ಒಂದು ಸರಕಾರಕ್ಕಾಗಿ ಒಂದು ರಂಗವನ್ನು ರಚಿಸುವಂತೆ ಮಾಡಬೇಕು. ■

'ಮೈನಾ' ಎಂಬ ಸುಂದರ 'ಹಕ್ಕಿ' ಅಪರಾಧಿ ನಾನಲ್ಲ ಎಂಬ ಹಳೆರಾಗ

ಆರ್.ರಾಮಕೃಷ್ಣ

ಅವನೊಬ್ಬ ಒಳ್ಳೆಯ ಕ್ರೀಡಾ ಪಟು. ಅವನು ಟಿ.ವಿ. ಚಾನೆಲ್ ಒಂದರ ರಿಯಾಲಿಟಿ ಶೋ ಸಂಬಂಧದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದಾನೆ. ಆ ತಂಡ ರಮಣೀಯ ಪರ್ವಣಿ ಶ್ರೇಣಿಯ 'ದೂದ್ ಸಾಗರ್' ಜಲಪಾತದ ಬಳಿಯಲ್ಲಿ ಟೆಂಟ್ ಹಾಕಿದೆ. ಭಿಕ್ಷುಕರ ವೇಷದಲ್ಲಿ ಹೋಗಿ ಹೆಚ್ಚು ಭಿಕ್ಷೆ ಬೇಡಿ ತರುವ ಸವಾಲು. ಅಂಗವಿಕಲನ ವೇಷದಲ್ಲಿ ಅವನು ಆ ರೈಲಿನಲ್ಲಿ. ನೂರು ರೂಪಾಯಿ ಕೈಗಿತ್ತು, ಭಿಕ್ಷೆಗೆ ಬದಲು ದುಡಿದು ತಿನ್ನುವ ದಾರಿ ಹುಡುಕಬಾರದೆ ? ಎನ್ನುವಳು ಅವಳು. ಭಿಕ್ಷುಕ

ಪತ್ರಿಕೆ ವ್ಯಾಪಾರಿಯಾದ. ಟಿ.ವಿ ಸ್ಪರ್ಧೆಗೆ ಎಳ್ಳು ನೀರು. ಅನುದಿನವೂ ಭೇಟಿ.

ನಾಟಕೀಯ ಸನ್ನಿವೇಶದಲ್ಲಿ ಇಬ್ಬರಿಗೂ ಗೊತ್ತಾಗುವುದೇನೆಂದರೆ ಆಕೆ ಎಲ್ಲರಂತೆ ತಾನೆ ಎದ್ದು ಸಲೀಸಾಗಿ ಓಡಾಡಲಾರದ ಅಂಗವಿಕಲೆ. ಪೋಲಿಯೋ ಪೀಡಿತೆ. ಈತ ಕಳ್ಳನನ್ನು ಬೆನ್ನಟ್ಟಿ ಹಿಡಿಯುವ ಸಾಹಸಿ. ತಿರುವುಗಳ ನಂತರ ಪ್ರೀತಿ. ಮದುವೆ. ಇಬ್ಬರ ಉದ್ಯೋಗ. ದುಡಿಮೆ.

ಇಷ್ಟೆ ಆಗಿದ್ದರೆ ಬಂದು ಹೋಗುವ ಹಲವು ಮಾಮೂಲಿ ಸಿನಿಮಾಗಳ ಪಟ್ಟಿಗೆ ಇದನ್ನು ಸೇರಿಸಬಹುದಿತ್ತು. ಅದರೆ ಅಷ್ಟೆ ಇಲ್ಲ.

ಮೇಲೆ ಹೇಳಿದ ಕತೆ ಹೀರೋನ ಫ್ಲಾಷ್ ಬ್ಯಾಕ್. ಆತ ಈಗ ತನ್ನನ್ನು ಬೆನ್ನಟ್ಟಿ ಹಿಡಿದ ಪೋಲೀಸರ ಬಂಧಿ. ಆತನ ಮೇಲೆ 37 ಸರಣಿ ಹತ್ಯೆಯ ಆರೋಪಗಳಿವೆ. ಮಾಧ್ಯಮಗಳ ಪ್ರಕಾರ ಆತನೊಬ್ಬ ಸೀರಿಯಲ್ ಕಿಲ್ಲರ್. ಈ ಸಂಬಂಧ ಇನ್ನೇನು ಕೋರ್ಟು ಶಿಕ್ಷೆ ಪ್ರಕಟಿಸುವುದರಲ್ಲಿದೆ.

ಚೆನ್ನೈನಿಂದ 'ಕ್ರಿಮಿನಲ್'ನನ್ನು ಹಿಡಿದು ತರುವಾಗ ಪೋಲಿಸ್ ಅಧಿಕಾರಿಗೆ ಮನವರಿಕೆಯಾಗಿದ್ದು ಏನೆಂದರೆ ಆತ ಸರಣಿ ಕಿಲ್ಲರ್ ಅಲ್ಲ. ವೈದ್ಯಕೀಯ ತಪಾಸಣೆ ಹೆಸರಲ್ಲಿ ಹೆಂಡತಿಯನ್ನು ವಂಚಿಸಿ ಆಕೆಯ ನಗ್ನ ದೇಹದ ವಿಡಿಯೋ ಶೂಟ್ ಮಾಡಿ ಅದನ್ನು ಬಳಸಿ ಬ್ಲಾಕ್ ಮೇಲ್ ಮಾಡುವ ಕ್ರಿಮಿನಲ್ ವೈದ್ಯನೊಬ್ಬನನ್ನೇ ಅವನು ಕೊಂದದ್ದು. ಮಾಡಿದ ಕೊಲೆ ಒಂದೇ ಅದೂ ಅನಿವಾರ್ಯವಾಗಿ. ಹೀಗಾಗಿ ಏನಾದರೂ ಮಾಡಿ ನಾಯಕನನ್ನು ಆ ಮೂಲಕ ಮುಗ್ಧ ಅಂಗವಿಕಲ ಯುವತಿಯ ಬದುಕನ್ನು ಕಾಪಾಡಬೇಕು.

ಆದರೆ ಅದು ಅಷ್ಟು ಸುಲಭವಿಲ್ಲ. ಗೃಹ ಮಂತ್ರಿ ತನ್ನ ತಮ್ಮ ಮಾಡಿದ ಕ್ರಿಮಿನಲ್ ಪಾತಕಗಳನ್ನು ನಾಯಕನ ತಲೆಗೆ ಕಟ್ಟಿ ಎಲ್ಲ ಪ್ರಕರಣ ಮುಚ್ಚಿಹಾಕಲು ಹೊಂಚು ಹಾಕಿದ್ದಾನೆ. ಕೊನೆಗೆ ಪೋಲಿಸ್ ಇಲಾಖೆಯಲ್ಲೇ ಎರಡು ಬಣಗಳ ತಿಕ್ಕಾಟ. ಒಂದು ಬಣ ಯುವ ಜೋಡಿಯನ್ನು ಪಾರು ಮಾಡಿ ಕಳಿಸುವಾಗ ರೈಲು ನಿಲ್ದಾಣದಲ್ಲಿ ಗೃಹ ಮಂತ್ರಿ ತಂಡದ ಪೋಲಿಸರ ಗುಂಡಿಗೆ ನಾಯಕ ನಾಯಕಿ ಇಬ್ಬರೂ ಬಲಿಯಾಗುತ್ತಾರೆ.


ನಾಯಕ ನಾಯಕಿಯ ಮೊದಲ ಭೇಟಿ, ಪ್ರೀತಿ ಹುಟ್ಟುವ ರೀತಿಯಲ್ಲಿ ಸ್ವಲ್ಪ ನಾಟಕೀಯತೆ ಇದ್ದರೂ ಸಿನಿಮಾದಲ್ಲಿ ಬಹಳ ಸುಂದರವಾಗಿ ನಿರೂಪಿಸಲಾಗಿದೆ. ಹಸಿರು ಹೊದ್ದ ಪರ್ವತ ಶ್ರೇಣಿ, ಹಾಲಿನ ನೊರೆಯ ಬಣ್ಣದ ದಿವ್ಯ ಜಲಪಾತದ ಹಿನ್ನೆಲೆಯಲ್ಲಿ ಅರಳುವ ಈ 'ಪ್ರೇಮ ಕಾವ್ಯ'ವನ್ನು ಮೆಚ್ಚಿಕೊಳ್ಳದಿರಲು ಕಾರಣಗಳೇ ಇಲ್ಲ. ಅದರಲ್ಲೂ ನಾಯಕಿ ನಿತ್ಯಾ ಮೆನನ್ ಕಬ್ಬಿನ ರಸ ಕುಡಿದು ತುಟಿಯ ಮೇಲೆ ನೊರೆ ಮತ್ತಿಸಿಕೊಂಡು ಮುಗ್ಧ ಮಗುವಿನಂತೆ ನಗುವ ಚೆಲುವನ್ನು ಸಿನಿಮಾದಲ್ಲಿ ನೋಡಿಯೇ ಸಂತೋಷ ಪಡಬೇಕು.

ಅಪರಾಧಿ ಡಾಕ್ಟರ್ ಗೃಹಮಂತ್ರಿಯ ತಮ್ಮನೇ ಆದರೂ ಆತ ಮಾಡಿದ 36 ಕೊಲೆ-ಪಾತಕಗಳನ್ನೆಲ್ಲ ಮುಗ್ಧನೊಬ್ಬನ ತಲೆಗೆ ಕಟ್ಟಿ ನ್ಯಾಯಾಲಯದಿಂದ ಶಿಕ್ಷೆ ಕೊಡಿಸಿ ಬಿಡುವುದು ಅಷ್ಟು ಸುಲಭವೇ ? ಎಂಬ ಪ್ರಶ್ನೆಗೆ ಉತ್ತರ ಎಲ್ಲಿದೆ.

ನಾಯಕಿ ಸ್ವತಃ ಅಂಗವಿಕಲೆಯಾಗಿದ್ದು 'ದುಡಿದು ಬದುಕಬೇಕು' ಎನ್ನುವಾಗ ಆಕೆಯಲ್ಲಿ ಕಂಡ ದಿಟ್ಟತನ, ವೈದ್ಯ ಕಿರುಕುಳ ಕೊಡುವುದನ್ನು ಎದುರಿಸುವುದರಲ್ಲಿ ಕಾಣುವುದಿಲ್ಲ. ಗಂಡನಿಗೂ ಹೇಳದೇ, ಆತ್ಮೀಯರಿಗೂ ಹೇಳದೇ ನರಳುವುದು. ನಾಯಕನ ವೈಯುಕ್ತಿಕ ದುಸ್ಸಾಹಸಗಳಿಗೆ, ಆಮೇಲೆ ವೈದ್ಯನ ಕೊಲೆಯ ಸಮರ್ಥನೆಗೆ ಪೂರಕವಾಗಿವೆ ಅಷ್ಟೆ. ಕಷ್ಟದ ಸನ್ನಿವೇಶಗಳನ್ನು ಎದುರಿಸಲು ಆತ್ಮೀಯರ, ಸ್ನೇಹಿತರ, ಅಗತ್ಯ ಬಿದ್ದಾಗ ಕಾನೂನು ಮತ್ತು ಸಮಾಜದ ಬೆಂಬಲ ಪಡೆದುಕೊಳ್ಳಬೇಕು ಎಂಬುದು ಸಿನಿಮಾ ಹೀರೊ ಹೀರೋಯಿನ್‌ಗಳಿಗೆ ಯಾ-ಕೆ ಹೊಳೆಯುವುದಿಲ್ಲ. ಇದು ಒಂದು ಪ್ರಶ್ನೆ. ಸಮಾಜದಲ್ಲಿ ಕೊಲೆಪಾತಕಿಗಳಾಗಿ ರೌಡಿಗಳಾಗಿ, ಸೀರಿಯಲ್ ಕಿಲ್ಲರ್‌ಗಳಾಗಿ ಬಿಂಬಿತವಾದವರು ನಿಜವಾಗಿಯೂ ಅಪರಾಧಗಳನ್ನು ಮಾಡಿರುವುದಿಲ್ಲ... ಅಥವಾ ಉದ್ದೇಶಪೂರ್ವಕವಾಗಿ ಮಾಡಿರುವುದಿಲ್ಲ...ಅಥವಾ ಅದು ಬಿಟ್ಟು ಅವರಿಗೆ ಬೇರೆ ದಾರಿಯೇ ಇರಲಿಲ್ಲ.... ಹೀಗಂತ ಸಾಧಿಸಲು ಹೆಣಗುವುದು- ಇದು ಪ್ರಸ್ತುತ ಸಿನಿಮಾರಂಗದಲ್ಲಿ ಅಬ್ಬರಿಸುತ್ತಿರುವ 'ಸಿದ್ಧಾಂತ'. ಇದರ ನೆರಳು ಈ 'ಮೈನಾ' ಹಕ್ಕಿಯ ಮೇಲೆ ಬಿದ್ದಿರುವುದೆಷ್ಟು ? ಸಿನಿಮಾದ ಬಗೆಗೆ ಹೆಚ್ಚು ಗೊತ್ತಿದ್ದವರು ಉತ್ತರ ಬರೆಯಬಹುದು. ■

ಜನಶಕ್ತಿ
ಕನ್ನಡ ವಾರಪತ್ರಿಕೆ

ಎನ್‌ಡಿಎಯ ಫ್ಲಾಪ್ ಸ್ಕೀಮ್‌ಗೆ ಈಗ ಯುಪಿಎ-2ರ ಹೊಸ ಪ್ಯಾಕೇಜ್!



ವೇದರಾಜ ಎನ್.ಕೆ.

ಒಂಭತ್ತು ವರ್ಷಗಳ ಹಿಂದೆ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಸಮಾಜದ ಅತ್ಯಂತ ಬಡವಿಭಾಗಗಳಿಗೆ, ಅಸಂಘಟಿತ ವಲಯದ ಬಡವರಿಗೆಂದು ಒಂದು 'ಸಮಗ್ರ ಸಾಮಾಜಿಕ ಭದ್ರತಾ' ಸ್ಕೀಮನ್ನು ಭಾರೀ ಪ್ರಚಾರದ ನಡುವೆ ಆರಂಭಿಸಿತ್ತು- ಆಗಿನ ಪ್ರಧಾನ ಮಂತ್ರಿಗಳ ಸ್ವಕ್ಷೇತ್ರ ಲಕ್ನೌನಲ್ಲಿ. ಮಾರ್ಚ್ 2004ರೊಳಗೆ 50 ಜಿಲ್ಲೆಗಳಲ್ಲಿ 10ಲಕ್ಷ ಅನೌಪಚಾರಿಕ ವಲಯದ ಕಾರ್ಮಿಕರನ್ನು ಈ ಯೋಜನೆಯಲ್ಲಿ ಸೇರಿಸುವ ಗುರಿಯನ್ನೂ ಘೋಷಿಸಲಾಗಿತ್ತು. ಅದಕ್ಕೆ ನೌಕರರ ಭವಿಷ್ಯ ನಿಧಿ ಸಂಘಟನೆ(ಇಪಿಎಫ್‌ಒ)ಯಿಂದ ಆರಂಭದ ಬಂಡವಾಳವಾಗಿ 5 ಕೋಟಿ ರೂ.ಗಳ ಸಾಲವನ್ನೂ ಕೊಡಿಸಲಾಗಿತ್ತು. ಆದರೂ ಈ ಯೋಜನೆ ನೆಲ ಬಿಟ್ಟು ಏಳಲೇ ಇಲ್ಲ.

ಇದಾದ ಮೂರು ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. 'ಭಾರತ ಹೊಳೆಯುತ್ತಿದೆ' ಎಂದು ನಂಬಿಸಲು ಪ್ರಯತ್ನಿಸಿದ್ದ ಎನ್‌ಡಿಎ ಅಧಿಕಾರಕ್ಕೆ ಮರಳಲಾಗಲಿಲ್ಲ. ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಅದನ್ನು ಕೈಬಿಟ್ಟಿತು. ನೌಕರರ ಭವಿಷ್ಯ ನಿಧಿ ವಂತಿಗೆಗಳನ್ನು ಸಂಗ್ರಹಿಸಿ ನಿರ್ವಹಿಸುವ ಇಪಿಎಫ್‌ಒ ಕಳೆದ 8ವರ್ಷಗಳಿಂದ ಈ 5 ಕೋಟಿ ರೂ. ಸಾಲ ಹಿಂದಿರುಗಿಸುವಂತೆ ಕೇಂದ್ರ ಕಾರ್ಮಿಕ ಮಂತ್ರಾಲಯವನ್ನು ಕೇಳುತ್ತಲೇ ಇದೆ. ಇದರಲ್ಲಿ ಖರ್ಚಾದದ್ದು ಕೇವಲ 18.75ಲಕ್ಷ ರೂ. ಏಕೆಂದರೆ ಆ ಸ್ಕೀಮ್ ಕಾಗದದಲ್ಲೆ ಉಳಿದಿತ್ತು. ಆದರೂ ಯುಪಿಎ ಕಾರ್ಮಿಕ ಮಂತ್ರಾಲಯ ನಿರಾಕರಿಸುತ್ತಲೇ ಬಂದಿದೆ. ಮಹಾ ಲೆಕ್ಕ ಪರಿಶೋಧಕರು(ಸಿಎಜಿ) ಎಂಟು ವರ್ಷಗಳಿಂದ ಇತ್ಯರ್ಥವಾಗದಿರುವ ಬಾಬ್ತು ಎಂದು ಈ ಬಗ್ಗೆ ಪ್ರತಿಕೂಲ ಟಿಪ್ಪಣಿ ಮಾಡುತ್ತಾ ಬಂದಿದ್ದಾರೆ.


ತಮಾಷೆಯೆಂದರೆ ಈಗ ಯುಪಿಎ-2 ಸರಕಾರದ 2013-14ರ ಬಜೆಟ್ ಇಂತಹುದೇ ಒಂದು ಯೋಜನೆಯನ್ನು ಪ್ರಕಟಿಸಿದೆ. ತಮಾಷೆ ಇಷ್ಟಕ್ಕೇ ನಿಂತಿಲ್ಲ. ಬಜೆಟಿನಲ್ಲಿ ಈ ಪ್ರಕಟಣೆ ಮಾಡುವ ಎರಡು ದಿನಗಳ ಮೊದಲು "ಆ ಸ್ಕೀಮನ್ನು ಹೇಗಿದ್ದರೂ ಭವಿಷ್ಯ ನಿಧಿ ಕಚೇರಿಯೇ ನಿರ್ವಹಿಸಬೇಕಿತ್ತು, ಮತ್ತು ಆರಂಭಿಕ ಖರ್ಚನ್ನು ಸ್ಕೀಮಿಗೆ ಬರುವ ಆದಾಯದಿಂದ ಮರುಪಾವತಿ ಮಾಡಬೇಕಿತ್ತು...ಅದನ್ನು ಕೇಂದ್ರ ಸರಕಾರದಿಂದ ವಸೂಲು ಮಾಡುವುದರಲ್ಲಿ ಅರ್ಥವಿಲ್ಲ" ಎಂದು ತರ್ಕ ಹೂಡಿದ ಕಾರ್ಮಿಕ ಮಂತ್ರಾಲಯ ಅದನ್ನು ಮನ್ನಾ ಮಾಡುವ (ರೈಟ್-ಆಫ್) ಸಾಧ್ಯತೆಯ ಬಗ್ಗೆ ಏಕೆ ಯೋಚಿಸಬಾರದು ಎಂದು ಭವಿಷ್ಯನಿಧಿ ಕಚೇರಿಯನ್ನು ಆಗ್ರಹಿಸಿತು. ಭವಿಷ್ಯ ನಿಧಿ ಮಂಡಳಿ ಟ್ರಸ್ಟಿಗಳು ಏನು ತಾನೇ ಮಾಡಲು ಸಾಧ್ಯ? ಫೆಬ್ರುವರಿ 26ರಂದು ಸಭೆ ಸೇರಿ ಯುಪಿಎ ಸರಕಾರ ಹೇಳಿದಂತೆ 5 ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಿದರು.

ಹೀಗಿದೆ ನಮ್ಮ ಆಳುವ ವರ್ಗಗಳ ಜನಪರ ಕಾಳಜಿ- ಚುನಾಯಿಸುವವರು ಜನಸಾಮಾನ್ಯರು, ಆದರೆ ಐದು ವರ್ಷಗಳ ಕಾಲ ಆಳುವ ವರ್ಗಗಳ ಸೇವೆ. ಅಲ್ಲೊಂದು, ಇಲ್ಲೊಂದು ಪ್ರದರ್ಶನಕ್ಕೆಂದು ಬಡಜನರ ಹೆಸರಿನಲ್ಲಿ ಸ್ಕೀಮುಗಳು. ಇದನ್ನು ಇಂಗ್ಲಿಷಿನಲ್ಲಿ ಫ್ಲಾಗ್‌ಶಿಪ್ ಸ್ಕೀಮ್ ಅನ್ನುತ್ತಾರೆ, ಆಳುವ ಪಕ್ಷಗಳ ಧ್ವಜವಾಹಕಗಳು. ಅದರಲ್ಲೂ ಜನಸಾಮಾನ್ಯರಿಗೇ ನಾಮ! ಮೇಲೆ ಹೇಳಿದ 5 ಕೋಟಿ ರೂ.ಗಳಂತೆ.

ಈ 'ಹೊಸ' ಯುಪಿಎ ಸ್ಕೀಮಾದರೂ ಏನು? ಈಗಾಗಲೇ ಇರುವ ಆಮ್ ಆದ್ಮಿ ಬಿಮಾ ಯೋಜನಾ(ಎಎಬಿವೈ), ಇಂದಿರಾ ಗಾಂಧಿ ಮಾತೃತ್ವ ಸಹಯೋಗ್ ಯೋಜನಾ(ಐಜಿಎಂಎಸ್‌ವೈ), ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ(ಆರ್‌ಎಸ್‌ಬಿವೈ), ಜನನಿ ಸುರಕ್ಷಾ ಯೋಜನಾ(ಜೆಎಸ್‌ವೈ) ಮತ್ತು ಜನಶ್ರೀ ಬಿಮಾ ಯೋಜನಾ(ಜೆಬಿವೈ) ಇವುಗಳ 'ಸಮಗ್ರೀಕರಣ'!

ಭ್ರಷ್ಟಾಚಾರದ ಬಗ್ಗೆ ಆತಂಕವಲ್ಲ, ಮೂರು 'ಸಿ'ಗಳ ಭಯ!

ಲೋಕಪಾಲ ಮಸೂದೆ ಇನ್ನೂ ನೆನೆಗುದಿಯಲ್ಲಿದೆ, ಏಕೆಂದರೆ ಯುಪಿಎ ಮುಖಂಡರಿಗೆ ಭ್ರಷ್ಟಾಚಾರಕ್ಕಿಂತ ಅದನ್ನು ಬಯಲಿಗೆ ತರುತ್ತಿರುವವರ ಬಗ್ಗೆಯೇ ಹೆಚ್ಚು ಆಕ್ರೋಶ.



ಸಿ.ಎ.ಜಿ. ಬಗ್ಗೆ ಈ ಮುಖಂಡರು 2ಜಿ ಹಗರಣ ಬಯಲಾದಾಗ ಆರಂಭಿಸಿದ ವಾಗ್ಸಮರ, ಸುಪ್ರಿಂ ಕೋರ್ಟ್ ಟಿಪ್ಪಣಿಗಳು ಬಾಯಿ ಮುಚ್ಚುವಂತೆ ಮಾಡಿದ ಮೇಲೂ ವಿವಿಧ ಸ್ವರೂಪಗಳಲ್ಲಿ ಪ್ರಕಟವಾಗುತ್ತಲೇ ಇದೆ. ಈಗ ಯುಪಿಎ ಸರಕಾರದ ಒಳ್ಳೆ ಕೆಲಸಗಳು ಜಾರಿಯಾಗದಿರಲು ಮೂರು 'ಸಿ'ಗಳು ಕಾರಣ ಎಂಬ ಪ್ರಚಾರ ಚಾಲ್ತಿಯಲ್ಲಿದೆ. ಈ ಮೂರು 'ಸಿ'ಗಳೆಂದರೆ ಸಿಎಜಿ, ಸಿವಿಸಿ(ಕೇಂದ್ರೀಯ ಜಾಗೃತಾ ಆಯೋಗ) ಮತ್ತು ಸಿಬಿಐ.

ಆದರೆ ನಾವು 2ಜಿ, ಸಿಡಬ್ಲ್ಯುಜಿ, ಕಲ್ಲಿದ್ದಲು ಗಣಿ ಹಂಚಿಕೆ ಮೊದಲಾದವುಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಶ್ನೆಗಳನ್ನು ಕೇಳುತ್ತೇವಷ್ಟೇ, ಯಾವುದೇ ಕೆಲಸದಲ್ಲಿ ಸಾರ್ವಜನಿಕ ಹಿತ ಇದ್ದರೆ ಅದನ್ನು ನಾವು ಪ್ರಶ್ನಿಸುತ್ತಿಲ್ಲ ಎಂದು ಸಿವಿಸಿ(ಕೇಂದ್ರೀಯ ಜಾಗೃತಾ ಆಯೋಗ) ಮುಖ್ಯಸ್ಥರು ಇದಕ್ಕೆ ಪ್ರತಿಕ್ರಿಯಿಸಿದ್ದಾರೆ.

"ನಾವು ತನಿಖೆ ನಡೆಸುವಾಗ..ಖಾಸಗಿ ದುರಾಸೆ ತಲೆ ಹಾಕಿರುವುದು ಕಾಣುತ್ತದೆ. ಉದಾಹರಣೆಗೆ, 2ಜಿ. ಅಷ್ಟೊಂದು ತಲೆ ಚಿಟ್ಟು ಹಿಡಿಸುವಂತಹ ಲಾಭ ಮಾಡಿದ್ದರೆ, ಅದನ್ನು ಯಾರು ಮಾಡಿದ್ದು?" ಎಂದು ಕೇಳಿರುವ ಅವರು ಸಮಸ್ಯೆ ಬರುವುದು ಸಾರ್ವಜನಿಕ ಹಿತಗಳನ್ನು ಬಲಿಗೊಟ್ಟಾಗ ಎಂದರು.

ಭ್ರಷ್ಟಾಚಾರ ಅಥವ ಖಾಸಗಿ ದುರಾಸೆ ಬಂದಾಗಲೆಲ್ಲ, ಸಾರ್ವಜನಿಕ ಹಿತಗಳನ್ನು ಬದಿಗೊತ್ತಿರುವುದನ್ನು ನಾವು ಕಾಣುತ್ತೇವೆ, ಆಗಲೇ ಸಮಸ್ಯೆ ಬರುವುದು ಎಂದು ಅವರು ಹೇಳುತ್ತಾರೆ.

ನಿಜ, ಅಡ್ಡಿ ಮೂರು 'ಸಿ'ಗಳಲ್ಲ, ಆಳುವ ವರ್ಗಗಳ ರಾಜಕಾರಣಿಗಳು-ಅಧಿಕಾರಶಾಹಿಗಳು- ಕಾರ್ಪೊರೇಟ್ ಕೂಟದ ಖಾಸಗಿ ದುರಾಸೆಗಳು. ಈ 'ಸಿ'ಗಳಿಲ್ಲದಿದ್ದರೆ ತಾವು ಹೇಳಿದ್ದೇ ಕಾನೂನು, ಸಾರ್ವಜನಿಕ ಹಿತ ಎಂದನಿಸುತಿತ್ತು, ತಮ್ಮ ದುರಾಸೆಗಳಿಗೆ ಯಾರ ಅಡ್ಡಿಯೂ ಇರುತ್ತಿರಲಿಲ್ಲ ಎಂಬುದೇ ಅವರ ಆಕ್ರೋಶ.

ಬಾಕ್ಸ್

ಹಸುಳೆಗಳಿಗಿದು ದೇಶವಲ್ಲ

ಭಾರತ ಪ್ರತಿದಿನ 4200 ಐದು ವರ್ಷದ ಕೆಳಗಿನ ಮಕ್ಕಳನ್ನು ಕಳಕೊಳ್ಳುತ್ತಿದೆ. ಇನ್ನೂ ನೋವಿನ ಸಂಗತಿಯೆಂದರೆ ಇವುಗಳಲ್ಲಿ ಬಹಳಷ್ಟು ಸಾವುಗಳನ್ನು ಖಂಡಿತ ತಪ್ಪಿಸಬಹುದಿತ್ತು. ನಮ್ಮ ಆಳುವ ಮಂದಿ ನಮ್ಮದು ಈಗ ಜಗತ್ತಿನ ಪ್ರಮುಖ ಆರ್ಥಿಕಗಳಲ್ಲಿ ಒಂದೆಂದು ಜಗತ್ತಿನ ಗಮನ ಸೆಳೆಯುತ್ತಿದೆ ಎಂದು ಬೆನ್ನು ತಟ್ಟಿಕೊಳ್ಳುತ್ತಿರುವಾಗಲಂತೂ ಇದು ನಾಚಿಕೆಗೇಡಿನ ಸಂಗತಿಯೇ.

ಜಗತ್ತಿನಲ್ಲಿ ಸಾವಿಗೀಡಾಗುತ್ತಿರುವ ಐದು ವರ್ಷಗಳ ಕೆಳಗಿನ ಮಕ್ಕಳಲ್ಲಿ ಸುಮಾರು ಐದನೇ ಒಂದರಷ್ಟು ಭಾರತದವರು. ಪ್ರತಿವರ್ಷ ಈ ವಯೋಗುಂಪಿನ 16 ಲಕ್ಷ ಭಾರತೀಯ ಮಕ್ಕಳು ಸಾವಿಗೀಡಾಗುತ್ತಾರೆ. ಈ ಸಂಖ್ಯೆ ಇಡೀ ಜಗತ್ತಿನಲ್ಲೇ ಅತಿ ಹೆಚ್ಚು. ಇದರಲ್ಲೂ ಅರ್ಧಕ್ಕಿಂತ ಹೆಚ್ಚು ಹುಟ್ಟಿದ ಮೊದಲನೇ ತಿಂಗಳಲ್ಲೇ ಸಾಯುತ್ತಾರೆ.

ಇದಕ್ಕೆ ಮುಖ್ಯ ಕಾರಣ ಗರ್ಭಿಣಿಯರಿಗೆ ಹೆರಿಗೆಯ ಮೊದಲು ಮತ್ತು ಹೆರಿಗೆಯ ನಂತರ ಸರಿಯಾದ ಆರೋಗ್ಯ ಪಾಲನೆ ಲಭ್ಯವಿಲ್ಲದಿರುವುದು.

ಮತ್ತೊಂದು ಕಾರಣ ಹೆಚ್‌ಐವಿ ಮತ್ತು ಏಡ್ಸ್ ತಡೆಗೆ ಸಂಪನ್ಮೂಲ ಒದಗಿಸುವ ದಾನಿಗಳು ಬಹಳವಿದ್ದುದರಿಂದ ಆರೋಗ್ಯಪಾಲನೆಯಲ್ಲಿ ಅವಕ್ಕೇ ಹೆಚ್ಚಿನ ಆದ್ಯತೆ ಸಿಕ್ಕಿ ತಾಯಿ-ಮಗು ಆರೋಗ್ಯದ ಬಾಬ್ತು ಹಿಂದಕ್ಕೆ ಸರಿಯಿತು. ಈಗ ಮತ್ತೆ ತಾಯಿ-ಮಗು ಆರೋಗ್ಯದ ಪ್ರಶ್ನೆಯತ್ತ ಗಮನ ಹರಿಸಲಾಗುತ್ತಿದೆ, ಆದರೆ ಇದಕ್ಕೆ ಹೆಚ್‌ಐವಿ/ಏಡ್ಸ್ ತಡೆಗೆ ಹಣ ಕೊಡುತ್ತಿದ್ದ ದಾನಿಗಳ ಉತ್ಸಾಹ ಕಡಿಮೆಯಾಗುತ್ತಿರುವುದೇ ಕಾರಣ ಎಂಬುದು ಮತ್ತೊಂದು ಖೇದಕರ ಸಂಗತಿ.

ಅಗ್ಗದ ಜೀವರಕ್ಷಕ ಔಷಧಿಗಳು ನಮ್ಮ ಬಡಜನವಿಭಾಗಗಳಿಗೆ ಲಭ್ಯವಾಗುವಂತಿದ್ದರೆ ಇವರಲ್ಲಿ ಬಹಳಷ್ಟು ಮಕ್ಕಳು ಬದುಕಿರುತ್ತಿದ್ದರು. ಹಾಗಾಬೇಕಾದರೆ ಆರೋಗ್ಯ ಪಾಲನೆಯಲ್ಲಿ ಪ್ರಭುತ್ವದ/ಸರಕಾರದ ಮಧ್ಯಪ್ರವೇಶ ಅತ್ಯಗತ್ಯ. ತಾಯಂದಿರ ಆರೋಗ್ಯ ಮತ್ತು ಮಕ್ಕಳ ಸೇವೆಗಳನ್ನು ಸಾರ್ವತ್ರಿಕಗೊಳಿಸುವುದು ಇದಕ್ಕಿರುವ ಏಕೈಕ ದಾರಿ ಎಂದು ಪರಿಣಿತರ ಅಭಿಪ್ರಾಯ. ಆದರೆ ಪ್ರಭುತ್ವ ಹೆಚ್ಚೆಚ್ಚು ಹಿಂದೆ ಸರಿಯುವ, ಅದರಿಂದಾಗಿ ಆರೋಗ್ಯಪಾಲನೆ ಹೆಚ್ಚೆಚ್ಚು ಖಾಸಗೀಕರಣ ಹೊಂದುತ್ತಿರುವ ನವ-ಉದಾರವಾದಿ ದಾರಿಯಲ್ಲಿ ಇದನ್ನು ಹೇಗೆ ತಾನೇ ನಿರೀಕ್ಷಿಸಲು ಸಾಧ್ಯ?


ಉದಾರವಾದಿ ನೀತಿಗೆ ಮತ್ತೊಂದು ಬಲಿಪಶು...

ಪುಟ 9 ರಿಂದ

ಬಿಕ್ಕಟ್ಟು ಇನ್ನಷ್ಟು ತೀವ್ರವಾಯಿತು. ದೇಶಗಳೇ ದಿವಾಳಿಯಾಗುವ ಮಟ್ಟಕ್ಕೆ ಬಂದವು. ತೀರಾ ನಲುಗಿ ಹೋಗಿದ್ದ ಗ್ರೀಸ್ ದೇಶದ ಸರ್ಕಾರಿ ಸಾಲಪತ್ರಗಳನ್ನು ಬಹಳ ಕಡಿಮೆ ದರದಲ್ಲಿ ಖರೀದಿಸಿದ ಸೈಪ್ರಸ್‌ನ ಬ್ಯಾಂಕುಗಳು, ಆ ಮೂಲಕ ಅಪಾರ ಲಾಭವನ್ನು ದೋಚುವ ಕನಸು ಕಾಣುತ್ತಿದ್ದವು. ಆದರೆ ಆ ಸಾಲಪತ್ರಗಳನ್ನು ಈಗ ಕವಡೆ ಕಾಸಿಗೆ ಮಾರಬೇಕಾದ ಸ್ಥಿತಿ ಬಂದಿದೆ. ಅಲ್ಲದೆ ಅವುಗಳು ನೀಡಿದ್ದ ವಿಪರೀತವಾದ ಸಾಲಗಳು ಕೂಡಾ ವಸೂಲಾಗದ ದುರ್ದಸೆಯೂ ಬಂತು. ನೋಡು ನೋಡುತ್ತಿರುವಷ್ಟರಲ್ಲೇ, ದೊಡ್ಡ ವ್ಯವಹಾರ ನಡೆಸಿ ಹೆಚ್ಚು ಲಾಭ ಗಳಿಸುತ್ತಿದ್ದ ಈ ಬ್ಯಾಂಕುಗಳು ತರಗೆಲೆಗಳ ಹಾಗೆ ಕುಸಿದು ಹೋದವು. ಶ್ರೀಮಂತ ಹಾಗೂ ಸಮೃದ್ಧ ದೇಶವಾಗಿದ್ದ ಸೈಪ್ರಸ್ ದಿವಾಳಿಯಾಗಿ ನೆಲಕಚ್ಚಿದ್ದರೆ, ಅಪಾರ ಪ್ರಮಾಣದ ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿದ್ದ ಅಲ್ಲಿನ ಬ್ಯಾಂಕುಗಳು ದೈನೇಸಿಯಾಗಿ ನಿಂತಿವೆ.

ಈ ಬ್ಯಾಂಕುಗಳಲ್ಲಿ ತಮ್ಮ ಕಳ್ಳ ಸಂಪತ್ತನ್ನು ಶೇಖರಿಸಿ ಇಟ್ಟ ಶ್ರೀಮಂತರಲ್ಲಿ, ರಷಿಯಾದ ಶ್ರೀಮಂತರ ಪಾಲೇ ಹೆಚ್ಚು. ಸೋವಿಯತ್ ಒಕ್ಕೂಟದ ಪತನದ ನಂತರ, ಮೊದಲಿದ್ದ ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಅಪಾರವಾಗಿ ಲೂಟಿಮಾಡಿದ ಭ್ರಷ್ಟ ಅಧಿಕಾರಿಗಳು, ಕೆಟ್ಟ ರಾಜಕಾರಣಿಗಳು ಹಾಗೂ ಖದೀಮ ಉದ್ಯಮಿಗಳು ತಮ್ಮ ಗಳಿಕೆಯನ್ನು ಉಳಿಸಿಡಲು ಬಳಸಿದ್ದು ಸೈಪ್ರಸ್ಸಿನ ಬ್ಯಾಂಕುಗಳನ್ನು. ಒಂದು ಅಂದಾಜಿನಂತೆ ಈ ಹಣದ ಮೊತ್ತ ಸುಮಾರು 1,70,000 ರಿಂದ 2,20,000 ಕೋಟಿ ರೂಪಾಯಿಗಳಷ್ಟಿದೆ.

ಬಿಕ್ಕಟ್ಟು ಆರಂಭಿಕ ಹಂತದಲ್ಲಿದ್ದಾಗ ಸೈಪ್ರಸ್ ರಷಿಯಾದಿಂದ ಸುಮಾರು 12,500 ಕೋಟಿ ರೂಪಾಯಿಗಳ ಸಾಲವನ್ನು ಪಡೆದಿತ್ತು. ಆದರೆ ಈಗ ಬಿಕ್ಕಟ್ಟು ವಿಕೋಪಕ್ಕೆ ಹೋಗಿದೆ. ದೇಶದ 2 ನೇ ದೊಡ್ಡ ಬ್ಯಾಂಕು ಲಾಯ್ಕಿ (Laiki) ದಿವಾಳಿಯಾಗಿದೆ. ಅದನ್ನು ಉಳಿಸಲೇಬೇಕಾದ ಪರಿಸ್ಥಿತಿ ಸರ್ಕಾರ-ಕ್ಕೆ. ಅದಕ್ಕಾಗಿ ರಷಿಯಾದಿಂದ ಮತ್ತಷ್ಟು ಸಾಲ ಪಡೆಯಲು ನಡೆಸಿದ ಪ್ರಯತ್ನ ವಿಫಲವಾಯಿತು. ಬಿಕ್ಕಟ್ಟಿನಿಂದ ಬಳಲುತ್ತಿರುವ ದೇಶಗಳ ಬ್ಯಾಂಕುಗಳಿಗೇ ನೇರವಾಗಿ ಆರ್ಥಿಕ ನೆರವು ನೀಡಲು ಯೂರೋಪಿಯನ್ ಒಕ್ಕೂಟ ಸ್ಥಾಪಿಸಿದ "ಯೂರೋಪ್ ಸ್ಥಿರೀಕರಣ ವ್ಯವಸ್ಥೆ"ಯ ಮೂಲಕ ಸಹಾಯ ಪಡೆಯಲು ನಡೆಸಿದ ಯತ್ನವೂ ಫಲ ನೀಡಲಿಲ್ಲ. ಜರ್ಮನಿ ಅಂತಹ ಸಹಾಯ ನೀಡಲು ಅಡ್ಡಿಯಾಗಿ ಬಂತು. ಗತ್ಯಂತರವಿಲ್ಲದೆ ಅಂತರಾಷ್ಟ್ರೀಯ ಹಣಕಾಸು ನಿಧಿ (IMF) ಗೆ ಮೊರೆ ಹೋಗಬೇಕಾಗಿ ಬಂತು. ತುರ್ತಾಗಿ ಬೇಕಿದ್ದ ಸುಮಾರು 70 ಸಾವಿರ ಕೋಟಿ ರೂಪಾಯಿಗಳ ಸಾಲ ಮಂಜೂರು ಮಾಡಲು ಅಂತರಾಷ್ಟ್ರೀಯ ಹಣಕಾಸು ನಿಧಿ ಹಾಗೂ ಒಕ್ಕೂಟದ ಬಲಾಢ್ಯ ದೇಶಗಳು ಮಾಮೂಲಿಯಾದ ಶರತ್ತುಗಳ (ಅಂದರೆ ವೇತನ ಕಡಿತ, ಉದ್ಯೋಗ ಕಡಿತ, ಕಲ್ಯಾಣ ಯೋಜನೆಗಳ ರದ್ದತಿ, ಪಿಂಚಣಿಯಂತಹ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಕಡಿತ ಇತ್ಯಾದಿ) ಜತೆಗೆ ಇದುವರೆಗೆ ಎಲ್ಲೂ ಕಂಡು ಬರದಿದ್ದ ಹೊಸ ಶರತ್ತೊಂದನ್ನು ಹೇರಿದವು. ಅದೆಂದರೆ, ಸೈಪ್ರಸ್ಸಿನ ಬ್ಯಾಂಕುಗಳಲ್ಲಿರುವ ಠೇವಣಿಗಳ ಮೇಲೆ ನೂತನ ತೆರಿಗೆಯನ್ನು (ಒಂದು ವರ್ಷಕ್ಕೆ ಮಾತ್ರ) ಕಡ್ಡಾಯವಾಗಿ ವಿಧಿಸುವುದು. ಒಂದು ಲಕ್ಷ ಯೂರೋಗಳಿಗಿಂತಲೂ (ಸುಮಾರು 70 ಲಕ್ಷ ರೂಪಾಯಿ) ಮೀರಿದ ಠೇವಣಿಗಳಿಗೆ ಶೇ 9.9 ರಷ್ಟು ಮತ್ತು ಅದಕ್ಕಿಂತಲೂ ಕಡಿಮೆ ಮೊತ್ತದ ಠೇವಣಿಗಳಿಗೆ ಶೇ 6.75 ರಷ್ಟು ನಿಗದಿ ಪಡಿಸಿದ ಈ ತೆರಿಗೆ ವಸೂಲಿಯಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 32,000 ಕೋಟಿ ರೂಪಾಯಿಗಳಷ್ಟು ಮೊತ್ತದ ಹಣ



ಸೇರ್ಪಡೆಯಾಗುತ್ತಿತ್ತು.

ಈ ನಡುವೆ ಸರ್ಕಾರಕ್ಕೆ ಇನ್ನೊಂದು ಸವಾಲೂ ಎದುರಾಗಿತ್ತು. ಠೇವಣಿಗಳ ಮೇಲೆ ತೆರಿಗೆ ವಿಧಿಸಲು ಸಂಸತ್ತಿನ ಒಪ್ಪಿಗೆ ಪಡೆಯಬೇಕಾಗಿತ್ತು. ಭಾನುವಾರದಂದೇ ಸಂಸತ್ತಿನ ಅಧಿವೇಶನ ಕರೆಯಲು ನಿರ್ಧರಿಸಲಾಗಿತ್ತು. ಆದರೆ ಒಟ್ಟು 56 ಜನ ಸದಸ್ಯರಲ್ಲಿ, ವಿರೋಧ ಪಕ್ಷಗಳಿಗೆ ಸೇರಿದ 25 ಜನ ಈ ಪ್ರಸ್ತಾಪವನ್ನು ವಿರೋಧಿಸುವ ನಿರ್ಧಾರ ಪ್ರಕಟಿಸಿದರು. ಆಡಳಿತ ಸದಸ್ಯರೂ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ಸಂಸತ್ತಿನಲ್ಲಿ ಪ್ರಸ್ತಾಪ ಅಂಗೀಕಾರವಾಗುವ ಯಾವುದೇ ಭರವಸೆಗಳಿಲ್ಲ ಎಂದು ಸರ್ಕಾರ-ಕ್ಕೆ ಮನವರಿಕೆಯಾಯಿತು. ಭಾನುವಾರದ ಅಧಿವೇಶನವನ್ನು ಮುಂದೂಡಲಾಯಿತು. ಮಂಗಳವಾರದಂದು ಸಭೆ ಸೇರಿದ ಸಂಸತ್ತಿನ ಅಧಿವೇಶನ, ಸಾಲ ಮಂಜೂರಾತಿಗೆ ಹೇರಿದ ಶರತ್ತುಗಳನ್ನು ಸಾರಾಸಗಟಾಗಿ ತಿರಸ್ಕರಿಸಿತು.

ಬೇರೆ ದಾರಿ ಕಾಣದೆ ಸರ್ಕಾರ ಪುನ: ರಶಿಯಾದ ಬಳಿ ಕೈಚಾಚಿತು. ಸೈಪ್ರೆಸ್ಸಿನ ಅರ್ಥ ಸಚಿವರು ಮೋಸ್ಕೊಗೆ ತೆರಳಿ ಸುಮಾರು 28,000 ಕೋಟಿ ರೂಗಳ ತುರ್ತು ಸಾಲಕ್ಕಾಗಿ ಮಾತುಕತೆ ನಡೆಸಿದರೂ ಪ್ರಯೋಜನವಾಗಲಿಲ್ಲ. ಈ ನಡುವೆ IMF ಹಾಗೂ ಒಕ್ಕೂಟದ ಇತರ ದೇಶಗಳು ಮತ್ತು ಯೂರೋಪಿಯನ್ ಕೇಂದ್ರ ಬ್ಯಾಂಕು ಸೈಪ್ರಸ್ಸಿನ ಮೇಲೆ ತೀವ್ರ ಒತ್ತಡ ಹೇರಿ ತಕ್ಷಣದಲ್ಲೇ ತಾವು ಹಾಕಿದ್ದ ಶರತ್ತುಗಳಿಗೆ ಒಪ್ಪದೇ ಇದ್ದಲ್ಲಿ, ದೇಶವನ್ನು ಯೂರೋ ಒಕ್ಕೂಟದಿಂದಲೇ ಹೊರ ಹಾಕುವ ಬೆದರಿಕೆಯನ್ನು ಒಡ್ಡಿದವು.

ಬೇರೆ ದಾರಿಯಿಲ್ಲದೆ ಸರ್ಕಾರ 25.03.2013 ರಂದು ಸಾಲದ ಒಪ್ಪಂದಕ್ಕೆ ಸಹಿ ಹಾಕಿದ್ದಲ್ಲದೆ ವಿಧಿಸಿದ ಎಲ್ಲಾ ಶರತ್ತುಗಳಿಗೂ ಒಪ್ಪಿಕೊಂಡಿತು. ಅದರ ಪ್ರಕಾರ ದೇಶದ ಎರಡನೇ ದೊಡ್ಡ ಬ್ಯಾಂಕ್ ಆಗಿರುವ ಲ್ಯಾಕಿಯನ್ನು ಮುಚ್ಚಲಾಗುವುದು. ದೇಶದ ಬ್ಯಾಂಕುಗಳಲ್ಲಿರುವ ಠೇವಣಿಗಳಲ್ಲಿ ಒಂದು ಲಕ್ಷ ಯೂರೋಗಳಿಗಿಂತ (ಸುಮಾರು 70 ಲಕ್ಷ ರೂಪಾಯಿಗಳು) ಅಧಿಕ ಮೊತ್ತದ ಠೇವಣಿಗಳನ್ನು ಮುಟ್ಟುಗೋಲು ಹಾಕಿ, ಆ ಹಣವನ್ನು ಬ್ಯಾಂಕುಗಳನ್ನು ಉಳಿಸುವ ಸಲುವಾಗಿ ಬಳಸಲಾಗುವುದು.

ಬಹುಶಃ ಇತ್ತೀಚಿನ ಇತಿಹಾಸದಲ್ಲೇ ಇಷ್ಟು ಕೆಟ್ಟದಾದ ಷರತ್ತುಗಳನ್ನು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಯಾವ ದೇಶಕ್ಕೂ ಬಂದಿರಲಿಲ್ಲ. ಬೇಕಾಬಿಟ್ಟಿಯಾಗಿ ಯಾವುದೇ ನಿಯಂತ್ರಣವಿಲ್ಲದೆ ವ್ಯವಹಾರ ನಡೆಸಿ ದಂಡಿಯಾಗಿ ಲಾಭ ದೋಚಿದ್ದ ಬ್ಯಾಂಕುಗಳು ಮುಳುಗಿಯೇ ಹೋಗುವ ಪರಿಸ್ಥಿತಿ ಬಂದಾಗ, ಸರ್ಕಾರ ಸುಮಾರು 71,500 ಕೋಟಿ ರೂಪಾಯಿಗಳ ಸಾಲವನ್ನು ಪಡೆದು ಹದಗೆಟ್ಟ ಪರಿಸ್ಥಿತಿಯನ್ನು ಸುಧಾರಿಸಲು ಹೊರಟಿದೆ. ಅಂದರೆ ಸೈಪ್ರಸ್ಸಿನ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೂ ಸುಮಾರು 7 ಲಕ್ಷ ರೂಗಳಿಗಿಂತ ಹೆಚ್ಚಿನ ಸಾಲದ ಹೊರೆ. ಈ ಸಾಲ ತೀರಿಸುವವರಾರು.? ಬಡ್ಡಿ ಕಟ್ಟುವವರಾರು.? ದೇಶದ ಜನಗಳೇ ತಾನೆ.

ಈ ನಡುವೆ, ಸೈಪ್ರಸ್ಸಿನ ಬ್ಯಾಂಕುಗಳು ಒಳ್ಳೆಯ ಸ್ಥಿತಿಯಲ್ಲಿದ್ದಾಗ ಅಲ್ಲಿ ಹಣ ಹೂಡಿ ತೆರಿಗೆರಹಿತ ಆದಾಯದ ಲಾಭಗಳಿಸಲು ಜಗತ್ತಿನ ಇತರ ಶ್ರೀಮಂತ ಕುಳಗಳಂತೆ, ನಮ್ಮ ದೇಶದ ಬಂಡವಾಳಿಗರೂ ಪ್ರಯತ್ನ ನಡೆಸಿದರೂ. ಅಲ್ಲಿಯ ಮೂಲಭೂತ ಸೌಕರ್ಯಗಳು ಹಾಗೂ ಸ್ಥಿರಾಸ್ತಿ (Real Estate) ಗಳ ಕ್ಷೇತ್ರಗಳಲ್ಲಿ ಹಣ ಹೂಡಿ ವಿಫುಲವಾದ ಸಂಪತ್ತನ್ನು ಗಳಿಸುವ ಹಂಚಿಕೆಯೂ ನಡೆದಿತ್ತು. ಆದರೆ ಅದು ಪ್ರಾರಂಭವಾಗಿದ್ದು ಇತ್ತೀಚಿಗೆ. ಅದರಿಂದಾಗಿ ಹೂಡಿದ್ದ ಹಣ ದೊಡ್ಡ ಮೊತ್ತದ್ದೇನಾಗಿರಲಿಲ್ಲ. ಉದಾಹರಣೆಗೆ ನೆಟ್‌ವರ್ಕ್ 18 ಮೀಡಿಯಾ ಇನ್ವೆಸ್ಟ್‌ಮೆಂಟ್ಸ್ ಎಂಬ ಭಾರತದ ಕಂಪನಿಯ ಒಟ್ಟು ಠೇವಣಿಗಳ ಮೊತ್ತ ಸುಮಾರು 1.43 ಕೋಟಿ ರೂ ಮಾತ್ರವೇ ಆಗಿತ್ತು. ಇದರ ಮೇಲೆ ಸರ್ಕಾರ ಹಾಕಲು ಉದ್ದೇಶಿಸಿರುವ ತೆರಿಗೆಯಿಂದಾಗಿ ಈ ಕಂಪನಿಗೆ ಲಾಭದ ಬದಲಾಗಿ ನಷ್ಟವೇ ಆಗಬಹುದು. ಏನಿದ್ದರೂ, ದೋಚುವ ಅವಕಾಶ ಎಲ್ಲಿಯೇ ಕಂಡು ಬಂದರೂ ನಮ್ಮ ದೇಶದ ಬಂಡವಾಳಿಗರು ಅಲ್ಲಿಗೆ ಧಾವಿಸುವುದರಲ್ಲಿ ಜಗತ್ತಿನ ಶ್ರೀಮಂತ ದೇಶಗಳ ಬಂಡವಾಳಿಗರಿಗಿಂತ ಹಿಂದೆ ಏನೂ ಬಿದ್ದಿಲ್ಲ ಎಂಬುದು ವಾಸ್ತವ.

ಈ ನಡುವೆ ಸೈಪ್ರಸ್ಸಿನ ಸರ್ಕಾರ ದೇಶದ ಎಲ್ಲಾ ಬ್ಯಾಂಕುಗಳಿಗೆ 16.3.2013 ರಿಂದಲೇ ರಜಾ ಘೋಷಿಸಿತ್ತು. 25.3.2013 ರಂದು ಸಾಲದ ಒಪ್ಪಂದವಾದ ಹಿನ್ನೆಯಲ್ಲಿ 26.3.2013 ರಿಂದ ಬ್ಯಾಂಕುಗಳು ಬಾಗಿಲು ತೆರೆಯಲಿವೆ ಎಂದು ಹೇಳಿತ್ತು. ಆದರೆ ಅದು ಸುಲಭದ ಮಾತಾಗಿರಲಿಲ್ಲ. ಏಕೆಂದರೆ ಬ್ಯಾಂಕುಗಳು ಬಾಗಿಲು ತೆರೆದ ಕೂಡಲೇ ಜನ ಹಿಂಡು ಹಿಂಡಾಗಿ ಮುಗಿಬಿದ್ದು ತಮ್ಮ ಹಣವನ್ನೆಲ್ಲಾ ವಾಪಸ್ಸು ತೆಗೆಯುವ ಆತಂಕ ಎದುರಾಗಿತ್ತು. ಬ್ಯಾಂಕುಗಳಿಗೆ ರಜಾ ಘೋಷಿಸಿದ್ದು ಕೂಡಾ ಇದನ್ನು ತಡೆಗಟ್ಟುವ ಸಲುವಾಗಿಯೇ. 11 ದಿನಗಳಿಂದ ಬ್ಯಾಂಕುಗಳು ಮುಚ್ಚಿರುವ ಕಾರಣ ಸಾಮಾನ್ಯ ಜನರ ಪರದಾಟ ಹೇಳತೀರದು. ಕ್ರೆಡಿಟ್ ಕಾರ್ಡ್‌ಗಳನ್ನು, ಚೆಕ್ಕುಗಳನ್ನು ಬಳಸಿ ಖರೀದಿ ನಡೆಸಲು ಯಾವುದೇ ವ್ಯಾಪಾರಸ್ಥರು ಒಪ್ಪುತ್ತಿಲ್ಲ. ನಗದು ಬೇಕೆಂದೇ ಆಗ್ರಹ. ಆದ-ರೆ ನಗದಾದರೂ ಜನರ ಬಳಿ ಎಲ್ಲಿದೆ? ಬ್ಯಾಂಕುಗಳಿಂದಲೇ ತೆಗೆಯಬೇಕು. ಅಂದರೆ ದಿನ ಬಳಕೆಯ ಸಾಮಾಗ್ರಿಗಳನ್ನು ಕೊಳ್ಳಲೂ ಸಾಧ್ಯವಾಗುತ್ತಿಲ್ಲ. ಈ ನಡುವೆ ಬ್ಯಾಂಕುಗಳನ್ನು 28.3.2013 ರಿಂದ ಪುನರಾರಂಭಿಸುವ ಹೇಳಿಕೆ ಹೊರಬಿದ್ದಿದೆ. ಅದರ ಆತಂಕ ದೂರವಾಗಿಲ್ಲ. ಪರಿಸ್ಥಿತಿ ಎಲ್ಲಿಗೆ ಹೋಗಿ ಮುಟ್ಟಬಹುದು ಎಂದು ಅಂದಾಜು ಮಾಡಲೂ ಸಾಧ್ಯವಿಲ್ಲ.

ಈ ನಡುವೆ ಅಮೇರಿಕೆಯ ಸಾಮ್ರಾಜ್ಯಶಾಹಿಯ ಮುಖವಾಣಿಯಾಗಿರುವ 'ವಾಷಿಂಗ್ಟನ್ ಪೋಸ್ಟ್' ದೈನಿಕ ತನ್ನ 16.3.2013 ರ ಅಂತರ್ಜಾಲ ಆವೃತ್ತಿಯಲ್ಲಿ "ಸೈಪ್ರಸ್ಸಿಗೆ ಸಾಲ ಮಂಜೂರು ಮಾಡುವ

ಕಾರ್ಮಿಕ ಚಳುವಳಿಯ ಮೇಲೆ......

ಪುಟ 16 ರಿಂದ

ವರ್ಗದ ಪಕ್ಷವಾಗಿ ಕಾರ್ಮಿಕರನ್ನು ಸಂಘಟಿಸುವುದನ್ನಷ್ಟೇ ಮಾಡಬೇಕು. ಯಾವುದೇ ಬುದ್ಧಿಜೀವಿಗಳಿಗೆ ಪಕ್ಷದಲ್ಲಿ ಸೇರ್ಪಡೆ ಮಾಡಿಕೊಳ್ಳಬಾರದು.. ಹೀಗೆ ಅವರ ವಾದಗಳೇ ಪಕ್ಷದ ತೀರ್ಮಾನವಾದವು. ಈ ತೀರ್ಮಾನಗಳು ಎಷ್ಟು ತಪ್ಪು ಎಂಬುದು ಪದೇ ಪದೇ ಪಕ್ಷದ ಸದಸ್ಯರ, ನಾಯಕರ ಅನುಭವಕ್ಕೆ ಬಂದಿತು.

1923 ರಲ್ಲಿ ಸೇರಿದ ಮೂರನೇ ಅಧಿವೇಶನದಲ್ಲಿ ಕಾರ್ಮಿಕ ಚಳುವಳಿಯ ಅನುಭವವನ್ನು ಸಮಗ್ರವಾಗಿ ಚರ್ಚೆಗೊಳಪಡಿಸಲಾಯಿತು. ಎಡಪಂಥೀಯ ತಪ್ಪು ನಿರ್ಧಾರಗಳನ್ನು ಸರಿಪಡಿಸುವ ಕೆಲಸವನ್ನು ಈ ಅಧಿವೇಶನ ಕೈಗೊಂಡಿತು. ಕೋಮಿಂಟಾಂಗ್ ಪಕ್ಷದ ಜೊತೆ ಮೈತ್ರಿಯನ್ನು ಮಾಡಿಕೊಳ್ಳುವ ಆ ಮೂಲಕ ಅತೀವ ಶೋಷಣೆ, ದಬ್ಬಾಳಿಕೆಯಿಂದ ತತ್ತರಿಸುತ್ತಿರುವ ಇಡೀ ಚೀನಾದ ಜನ ಸಮುದಾಯದೊಂದಿಗೆ ವಿಶಾಲ ಬೆಸುಗೆಯನ್ನು ಬೆಸೆಯುವುದಕ್ಕೆ ಇದು ನಾಂದಿಯಾಯಿತು.

ಕೋಮಿಂಟಾಂಗ್ ಪಕ್ಷವೂ ಕೂಡ 1911 ರ ಕ್ರಾಂತಿಯ ನಂತರ ಸರ್ಕಾರದ ಮೇಲೆ ಹಿಡಿತವನ್ನು ಸಾಧಿಸಲಾಗದೆ, ಯುದ್ಧಕೋರ ಪಾಳೆಯಗಾರರ ಕೈಗೆ ಆಡಳಿತದ ಚುಕ್ಕಾಣಿಯನ್ನೊಪ್ಪಿಸಿ ಅವರ ಬೇಟೆಗೆ ತುತ್ತಾಗಿತ್ತು. ಅರಾಜಕ ಸ್ಥಿತಿಯಲ್ಲಿತ್ತು. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ ಧೃಡ ಹೋರಾಟಗಳು ಸನ್ ಯಾತ್ ಸೆನ್‌ರವರ, ಅವರ ಪಕ್ಷದ ಪ್ರಾಮಾಣಿಕವಾಗಿ ದೇಶದ ವಿಮೋಚನೆಯನ್ನು ಬಯಸುವವರ ಗಮನವನ್ನೂ ಸೆಳೆದಿತ್ತು.

ಈ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ವೈಯುಕ್ತಿಕ ನೆಲೆಯಲ್ಲಿ ಕೋಮಿಂಟಾಂಗ್ ಪಕ್ಷವನ್ನು ಸೇರಬೇಕೆಂದೂ, ಸೇರಿ ಅದನ್ನು ಒಂದು ಕ್ರಾಂತಿಕಾರೀ ಸಂಯುಕ್ತ ರಂಗವನ್ನಾಗಿ ಪರಿವರ್ತಿಸಲು ಶ್ರಮಿಸಬೇಕೆಂದೂ ತೀರ್ಮಾನಿಸಲಾಯಿತು. ಹಾಗೆಯೇ ಕಮ್ಯುನಿಸ್ಟ್ ಪಕ್ಷ ಕ್ರಾಂತಿಯ ನೇತೃತ್ವವನ್ನು ಪೂರ್ಣವಾಗಿ ಕೋಮಿಂಟಾಂಗ್ ಪಕ್ಷದ ಕೈಗೊಪ್ಪಿಬೇಕು. ಅದು ಕೇವಲ ಕಮ್ಯುನಿಸ್ಟ್ ಸಿದ್ಧಾಂತಗಳ ಪ್ರಚಾರ, ಶಿಕ್ಷಣಕ್ಕೆ ಸೀಮಿತವಾಗಬೇಕೆಂಬ ಬಲಪಂಥೀಯ ತಪ್ಪು ವಾದವನ್ನು ತಿರಸ್ಕರಿಸಲಾಯಿತು. ಕಮ್ಯುನಿಸ್ಟ್ ಪಕ್ಷದ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಳ್ಳುವುದು, ಸ್ವತಂತ್ರವಾಗಿ ಜನರನ್ನು ಸಂಘಟಿಸಲು ಮೈತ್ರಿಯಿಂದ ದೊರಕುವ ವಿಶಿಷ್ಟ ಅವಕಾಶವನ್ನು ಬಳಸಿಕೊಳ್ಳಬೇಕು. ಸಮರಧೀರ ಹೋರಾಟಗಳನ್ನು ರೂಪಿಸಬೇಕು ಎಂದು ತೀರ್ಮಾನಿಸಲಾಯಿತು. ಈ ಮಹಾಧಿವೇಶನದಲ್ಲಿ ಮಾವೋರವರು ಈ ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೊದಲಬಾರಿಗೆ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು. 1921 ರಲ್ಲಿ 53 ಸದಸ್ಯರನ್ನು ಹೊಂದಿದ್ದ ಪಕ್ಷ 1923ರ ಮೂರನೇ ಅಧಿವೇಶನದ ವೇಳೆಗೆ 432 ಸದಸ್ಯರನ್ನು ಹೊಂದಿ ಶೀಘ್ರ ಬೆಳವಣಿಗೆಯನ್ನು ಸಾಧಿಸಿತ್ತು. ■

→

ಕ್ರಮ ಮತ್ತೊಂದು ಆರ್ಥಿಕ ಬಿಕ್ಕಟ್ಟಿನ ಆರಂಭದ ಪ್ರಕ್ರಿಯೆಯಾಗಲಿದೆ" ಎಂದು ಹಪಹಪಿಸಿದೆ. 'ದಿ ಡೈಲಿಸ್ಟಾರ್' ಪತ್ರಿಕೆ ತನ್ನ 20.3.2013 ರ ಅಂತರ್ಜಾಲ ಆವೃತ್ತಿಯಲ್ಲಿ "ಸಾಲದ ಶರತ್ತುಗಳು ಸೈಪ್ರಸ್ಸಿನ ಆರ್ಥಿಕತೆಗೆ ಮರಣದ ಶೂಲಗಳಾಗಿವೆ" ಎಂದು ಬೊಬ್ಬೆ ಹಾಕಿದೆ.

ಅವುಗಳ ಆತಂಕ ಸಹಜವಾದದ್ದೇ. ಇಡೀ ಯೂರೋಪ್ ಇಂದು ತೀವ್ರವಾದ ಆರ್ಥಿಕ ಹಿಂಜರಿತಕ್ಕೆ ಒಳಗಾಗಿದೆ. ಕೆಲವೇ ವಾರಗಳ ಹಿಂದೆ, ಯೂರೋಪಿನ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾಗಿದ್ದ ಮೊರಿಯೋ ಡ್ರಾಗಿ, "ಬಿಕ್ಕಟ್ಟಿನ ಸ್ಥಿತಿ ಈಗ ಹತೋಟಿಗೆ ಬಂದಿದೆ" ಎಂದು ಕೊಚ್ಚಿಕೊಂಡಿದ್ದರು. ಅದಾದ ಸ್ವಲ್ಪ ದಿನಗಳಲ್ಲೇ ಸ್ಪೇನಿನ ಬ್ಯಾಂಕುಗಳ ಕುಸಿತದ ವರದಿ ಮುಖಕ್ಕೆ ರಾಚಿದಂತೆ ಮೂಡಿಬಂತು. ಇಡೀ ಯೂರೋಪಿನ ಬ್ಯಾಂಕುಗಳು ಕುಸಿಯುತ್ತಿವೆ. ಹೆಚ್ಚುತ್ತಿರುವ ನಿರುದ್ಯೋಗ ಹಾಗೂ ಅಪಾರ ಪ್ರಮಾಣದಲ್ಲಿ ಎದ್ದು ಬರುತ್ತಿರುವ ಕೆಟ್ಟ ಗೃಹ ಸಾಲಗಳು ಬ್ಯಾಂಕುಗಳಿಗೆ ಮಾರಣಾಂತಿಕ ಪೆಟ್ಟು ನೀಡುತ್ತಿವೆ. ಶೇ. 26 ರಷ್ಟು ಗಂಭೀರ ಪ್ರಮಾಣದ ನಿರುದ್ಯೋಗದಿಂದ ತತ್ತರಿಸುತ್ತಿರುವ ಸ್ಪೇನ್‌ವೊಂದರಲ್ಲೇ 4 ಲಕ್ಷಕ್ಕಿಂತಲೂ ಹೆಚ್ಚು ಗೃಹಸಾಲಗಳು ಕೆಟ್ಟು ಹೋಗಿವೆ. ಇಡೀ ಯೂರೋಪಿಯನ್ ಸಮುದಾಯದ ವಾರ್ಷಿಕ ಉತ್ಪನ್ನ 2007 ನೇ ಇಸವಿಗೆ ಹೋಲಿಸಿದಾಗ ಶೇ. 3 ರಷ್ಟು ಕುಸಿದಿದೆ. ಗ್ರೀಸ್‌ನಲ್ಲಿ ಶೇ 7.6 ರಷ್ಟು ಕುಸಿತ ಕಂಡುಬಂದಿದ್ದರೆ, ಸ್ಪೇನಿನಲ್ಲಿ ಶೇ. 6.3 ರಷ್ಟು ಕುಸಿತ ಸಂಭವಿಸಿದೆ. ಈ ತಲ್ಲಣಗಳ ನಡುವೆಯೇ ಸೈಪ್ರಸ್ಸಿನ ಬ್ಯಾಂಕುಗಳ ದಿವಾಳಿಯ ವಿದ್ಯಮಾನ ಸಂಭವಿಸಿದೆ. ಅದು ಉಂಟು ಮಾಡಬಹುದಾದ ಭೀಕರ ಪಲ್ಲಟಗಳನ್ನು ನೆನೆಸಿಕೊಂಡೇ ನಡುಕ ಪ್ರಾರಂಭವಾಗಿದೆ. 1931 ರಲ್ಲಿ ಆಗಿನ ಆಸ್ಟ್ರೀಯಾದ ಕ್ರೆಡಿಟ್ ಅನ್ಸಾಲ್ಟ್ ಬ್ಯಾಂಕು ದಿವಾಳಿಯಾದಾಗ ಯೂರೋಪ್ ಹಾಗೂ ಅಮೇರಿಕೆಯ ಬ್ಯಾಂಕುಗಳಿಂದ ಅಪಾರ ಪ್ರಮಾಣದ ಠೇವಣಿಗಳನ್ನು ಜನ ವಾಪಸ್ಸು ಪಡೆದದ್ದನ್ನು ಹಾಗೂ ಅದರಿಂದಾಗಿಯೇ "ಮಹಾ ಹಿಂಜರಿತ (great depre.......ion)" ಉಲ್ಬಣಗೊಂಡಿದ್ದನ್ನು ಮರೆಯುವುದಾದರೂ ಹೇಗೆ?

ಇದೆಲ್ಲದರ ನಡುವೆ ಸೈಪ್ರಸ್ಸಿನ ಬಿಕ್ಕಟ್ಟಿನಲ್ಲಿ ಮಧ್ಯಪ್ರವೇಶ ಮಾಡಿರುವ ಯೂರೋಪಿಯನ್ ಕೇಂದ್ರ ಬ್ಯಾಂಕ್, ಐಎಂಎಫ್ ಮತ್ತು ಯೂರೋಪಿಯನ್ ಒಕ್ಕೂಟದ ಕ್ರಮಗಳಲ್ಲಿ ಸಾಮ್ರಾಜ್ಯಶಾಹಿಗಳ ರಾಜಕೀಯ ಚದುರಂಗದಾಟವೂ ತಳಕು ಹಾಕಿಕೊಂಡಿದೆ. ಇರಾಕ್ ಮತ್ತು ಲಿಬಿಯಾಗಳ ಮೇಲೆ ವಿನಾಕಾರಣ ಆಕ್ರಮಣ ನಡೆಸಿ ಅಲ್ಲಿನ ಸರ್ಕಾರಗಳನ್ನು ಬರ್ಬರವಾಗಿ ಬುಡಮೇಲು ಮಾಡಿದ್ದಾದ ನಂತರ, ಇದೀಗ ಸಿರಿಯಾದ ಮೇಲೆ ಮುಗಿಬೀಳಲು ಹಾತೊರೆಯುತ್ತಿರುವ ಅಮೇರಿಕಾ ಮತ್ತು ಸಹವರ್ತಿ ಕೂಟಕ್ಕೆ ಅಡ್ಡಿಯಾಗಿರುವುದು ರಶಿಯಾ ಮತ್ತು ಚೀನಾ. ಸಹಜವಾಗಿಯೇ ಈ ಎರಡೂ ದೇಶಗಳು ಅಮೇರಿಕಾ ಮತ್ತದರ ಕೂಟದ ಕೆಂಗಣ್ಣಿಗೆ ಗುರಿಯಾಗಿವೆ. ಈ ದೇಶಗಳನ್ನು ಇಕ್ಕಟ್ಟಿಗೆ ಸಿಕ್ಕಿಸುವ ಯಾವುದೇ ಅವಕಾಶ ಸಿಕ್ಕಿದಲ್ಲಿ ಅದನ್ನು ಪೂರ್ತಿಯಾಗಿ ಬಳಸುವ ಧಾವಂತದಲ್ಲಿ ಈ ಕೂಟ ನಿರತವಾಗಿವೆ. ಸೈಪ್ರಸ್ಸಿನ ಬ್ಯಾಂಕುಗಳಲ್ಲಿರುವ ಠೇವಣಿಗಳಲ್ಲಿ ದೊಡ್ಡ ಪಾಲು ರಶಿಯಾದ ಶ್ರೀಮಂತ ಕುಳಗಳದ್ದು. ದೊಡ್ಡ ಠೇವಣಿಗಳನ್ನು ಮುಟ್ಟುಗೋಲು ಹಾಕುವ ವಿಚಿತ್ರವಾದ ಶರತ್ತೊಂದನ್ನು ವಿಧಿಸುವ ಮೂಲಕ ರಶಿಯಾದ ಶ್ರೀಮಂತರಿಗೆ ಹಾನಿ ತಟ್ಟಿಸುವ ಉದ್ದೇಶ ಈ ಕೂಟದ್ದು. ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆಯುವ ಹುನ್ನಾರ.

ಆದರೆ ಸಂಚು, ಹವಣಿಕೆ, ಹುನ್ನಾರಗಳ ಅವಕಾಶಗಳನ್ನೇ ಮೊಟಕು ಮಾಡುವಷ್ಟರ ಮಟ್ಟಿಗೆ ಬಿಕ್ಕಟ್ಟು ತೀವ್ರವಾಗಿದೆ. ಠೇವಣಿ ಮೇಲಿನ ತೆರಿಗೆಯ ಪ್ರಸ್ತಾಪದ ವದಂತಿಗಳು ಫೆಬ್ರವರಿ ತಿಂಗಳ ಕೊನೆಯಲ್ಲೇ ಹರಡಿದ್ದವು. ಆಗಿನಿಂದಲೇ ಸೈಪ್ರಸ್ಸಿನ ಬ್ಯಾಂಕುಗಳಿಂದ ಪ್ರತಿ ದಿನವೂ ಸರಾಸರಿ 700 ರಿಂದ 1000 ಕೋಟಿ ರೂಗಳಷ್ಟು ಠೇವಣಿ ಹಣ ವಿದೇಶಗಳಿಗೆ ಹರಿದು ಹೋಗಲಾರಂಭಿಸಿವೆ. ಅಂದರೆ ಸರ್ಕಾರ ನಿರ್ಬಂಧ ಹಾಕುವಷ್ಟರಲ್ಲಿ ಸುಮಾರು 18,000 ಕೋಟಿ ರೂಗಳು ದೇಶದ ಬ್ಯಾಂಕುಗಳಿಂದ ಹೊರಗೆ ರವಾನೆಯಾಗಿದೆ.

2008 ರಲ್ಲಿ ಅಮೇರಿಕಾದ ದೈತ್ಯ ಬ್ಯಾಂಕ್ 'ಲೆಹಮಾನ್ ಬ್ರದರ್ಸ್' ದಿವಾಳಿಯಾದಾಗ, ನವ ಉದಾರೀಕರಣದ ವಕ್ತಾರರು ಏನೇ ಆದರೂ ಬ್ಯಾಂಕುಗಳಲ್ಲಿನ ಠೇವಣಿಗಳಿಗೆ ಧಕ್ಕೆಯಾಗಲು ಬಿಡೆವು ಎಂದು ಸಾರಿದ್ದರು. ಇಷ್ಟು ಬೇಗ ಅವರು ಮಾತು ತಪ್ಪುತ್ತಾರೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಬಂಡವಾಳದ ಗುಣವೇ ಅದು. ಕೊಟ್ಟ ಮಾತನ್ನು ಕೆಟ್ಟದಾಗಿಯೇ ಮರೆಯುವುದು. ಅದರ ದಾಸರು ಇನ್ನೇನು ತಾನೇ ಮಾಡಿಯಾರು.

ಈ ನಡುವೆ ಸೈಪ್ರಸ್ಸಿನ ಜನರ ಸಂಕಷ್ಟಗಳ ಬಟ್ಟಲು ತುಂಬಿ ತುಳುಕಲಾರಂಭಿಸಿದೆ. ಕಾರ್ಮಿಕರ ಪ್ರತಿಭಟನೆ ನಡೆದಿದೆ. ವಿದ್ಯಾರ್ಥಿಗಳ ಹೋರಾಟ ಆರಂಭವಾಗಿದೆ. ಜನ ಬೀದಿಗಿಳಿದಿದ್ದಾರೆ. ಬೀದಿಗಿಳಿಯದೆ, ಇಳಿದು ದನಿಯೆತ್ತದೆ, ಎತ್ತಿದ ದನಿಯಲ್ಲಿ ಸಂಘರ್ಷ ನಡೆಸದೆ ಅವರಿಗೆ ಬೇರಾವ ದಾರಿಯಿದೆ? ಏಕೆಂದರೆ ಸಂಕಷ್ಟದಿಂದ ಪಾರಾಗುವ ಪರ್ಯಾಯ ಜನರ ಬಳಿಯೇ ಇದೆ. ■

ಕವಿತೆ

ಗಂಡಿಗೆ ಹೆಣ್ಣು ಮಾಯೆ

ಮೂರು ವರ್ಷದ ಎಳೆಯ ಕಂದ
ಗೋಲಿ ಆಡುತ್ತಿದೆ ಮನೆಯ ಮುಂದೆ
ಸಿಹಿ ತಿಂಡಿಯ ಆಮಿಷ ಒಡ್ಡಿ
ಕರೆಯುತ್ತಾನೆ ಪಕ್ಕದ ಮನೆಯ 'ಅಪ್ಪ'

ಐದು ವರ್ಷದ ಹಸುಳೆ ಮಗು
ರಸ್ತೆಯ ಅಂಚಲ್ಲಿ ಕುಳಿತಿದೆ
ಮಲಬಾಧೆಗೆ
ತಲುಬೇರಿ ನಿಲ್ಲಲಾರದೆ ನಿರ್ಜನ
ಪ್ರದೇಶಕ್ಕೆ
ಹೊತ್ತು ಕೊಂಡೊಯ್ಯುತ್ತಾನೆ
ದಾರಿಹೋಕ.

ಹದಿನಾರರ ಹರೆಯದ
ಹುಡುಗಿಯೊಬ್ಬಳು
ಶಾಲೆಯಿಂದ ಬರುತ್ತಿದ್ದಾಳೆ
ಕಾಡದಾರಿಯಲ್ಲಿ
ಜಿಗಿದು ನೆಕ್ಕಿ ಬಿಸಾಕಿ ನಡೆಯುತ್ತಾನೆ
ಹೊಂಚು ಹಾಕಿ ಕುಳಿತಿದ್ದ
ಕಾಮುಕನೊಬ್ಬ.

ಎಪ್ಪತ್ತರ ಹಣ್ಣು ಮುದುಕಿಯೊಬ್ಬಳು
ಎಳೆ ಬಿಸಿಲಲ್ಲಿ ಮೈಚಾಚಿಕೊಂಡಿದ್ದಾಳೆ
ಚಳಿಗೆ ನಡುಗಿ ಮೈಕಾಯಿಸಿಕೊಳ್ಳಲು
ಬಂಡೆಯ ಮರೆಗೆ ಉರುಳುತ್ತಾನೆ
ಬಿಸಿರಕ್ತದ ಕಾಟ ತಾಳಲಾರದ
ಕಾವಲುಗಾರನೋರ್ವ.

ನಮ್ಮಲ್ಲಿ ಹಿರಿಕಿರಿಯರೆನ್ನುವ
ಭೇದಭಾವ
ಇಲ್ಲ ಆತಿಥ್ಯಕ್ಕೂ ಅತ್ಯಾಚಾರಕ್ಕೂ.
ಇಲ್ಲವೇ ಇಲ್ಲ ಜಾತಿಧರ್ಮ
ತರತಮಭಾವ
ಎಲ್ಲರೂ ಸಮಾನರೆ ರಕ್ಷಕರೂ
ಭಕ್ಷಕರೂ.

ಗಂಡಿಗೆ ಹೆಣ್ಣುಮಾಯೆ, ಹೆಣ್ಣುಮಾಯೆ,
ಹೆಣ್ಣುಮಾಯೆ
ಹೆಣ್ಣಿಗೆ ಗಂಡು ಸಾವೆ? ಗಂಡು ಸಾವೆ?
ಗಂಡು ಸಾವೆ?
ಬೇಸರಿಸಬೇಡಿ ಬೆಳೆಸಿದ ತಂದೆಯರೆ,
ಅಣ್ಣಂದಿರೆ, ಗಂಡದಿರೆ
ಈ ಕವಿತೆ ಎಲ್ಲರಿಗೂ ಸಮಾನವಾಗಿ
ಅಪ್ಲೈ ಆಗುವುದಿಲ್ಲ.

– ಮಾಧವಿ ಭಂಡಾರಿ,
ಕೆರೆಕೋಣ.

JANASHAKTHI KANNADA VARA PATRIKE APR 07, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Saturday
Licensed to Post without prepayment License No. WPP-283



ಕಾರ್ಮಿಕ ಚಳುವಳಿಯ ಮೇಲೆ ಕ್ರೂರ ಧಾಳಿ ಮತ್ತು ಕೋಮಿಂಟಾಂಗ್ ಪಕ್ಷದ ಜೊತೆ ಮೈತ್ರಿಗೆ ಮಹತ್ವದ ತೀರ್ಮಾನ.

ಜಿ.ಎನ್. ನಾಗರಾಜ್ 28

ಇಡೀ ಚೀನಾದಲ್ಲಿ ಕಾರ್ಮಿಕ ಚಳುವಳಿಯ ಅಲೆ ಬೆಳೆಯುತ್ತಿದ್ದಂತೆ ಚೀನಾದ ಆಳುವ ವರ್ಗವಾದ ಪಾಳೆಯಗಾರಿ ಯುದ್ಧಕೋರರು ಹಾಗೂ ವಿವಿಧ ಸಾಮ್ರಾಜ್ಯಶಾಹಿಗಳು ಗಾಬರಿಯಾದರು. ಕಾರ್ಮಿಕ ಚಳುವಳಿ ಮತ್ತಷ್ಟು ವ್ಯಾಪಿಸುತ್ತಾ ಹೋಯಿತು. ಚೀನಾದ ರಾಜಧಾನಿಯಾದ ಬೀಜಿಂಗ್‌ನಿಂದ ಮುಖ್ಯ ನಗರಗಳ ಮೂಲಕ ಹಾದು ಹೋಗುವ ಹ್ಯಾಂಗ್‌ಕೊ ರೈಲ್ವೆ ಮಾರ್ಗದುದ್ದಕ್ಕೂ ವಿವಿಧ ಪ್ರದೇಶಗಳಲ್ಲಿ 16 ರೈಲ್ವೆ ಕಾರ್ಮಿಕರ ಸಂಘಗಳು ರೂಪುಗೊಂಡುವು. ಈ ಎಲ್ಲಾ ಕಾರ್ಮಿಕ ಸಂಘಗಳು ಸೇರಿ ಇಡೀ ರೈಲ್ವೆ ಕಾರ್ಮಿಕರ ಸಂಘಗಳ ಒಕ್ಕೂಟವೊಂದನ್ನು ರಚಿಸಲು ಮುಂದಾದವು. ಆ ಸಭೆ ನಡೆಸಲು ಯೋಜಿತವಾಗಿದ್ದ ನಗರದ ಪಾಳೆಯಗಾರಿ ಆಡಳಿತಗಾರ ಈ ಸಭೆ ಹಾಗೂ ಒಕ್ಕೂಟವನ್ನು ನಿಷೇಧಿಸಿದ. ಆದರೆ ಪೋಲೀಸು ಹಾಗೂ ಸೈನ್ಯದ ತಡೆ ಗೋಡೆಗಳನ್ನು ಬೇಧಿಸಿ ಕಾರ್ಮಿಕರು ಮುನ್ನುಗ್ಗಿದರು ಹಾಗೂ ಸಭೆ ನಡೆಸಿ ಒಕ್ಕೂಟವನ್ನು ರಚಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ಕಾರ್ಮಿಕರ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು, ಕಾರ್ಮಿಕರ ರಾಜಕೀಯ ಅರಿವನ್ನು ಹೆಚ್ಚಿಸಲು ತೀರ್ಮಾನ ಕೈಕೊಂಡರು.

ಯಶಸ್ವೀ ರೈಲ್ವೆ ಮುಷ್ಕರ

ಆದರೆ ಬಲಪ್ರಯೋಗ ಮಾಡಿ ಕಾರ್ಮಿಕರನ್ನು ನಗರ ಬಿಡುವಂತೆ ಮಾಡಲಾಯಿತು. ಈ ಎಲ್ಲ ದಬ್ಬಾಳಿಕೆಗಳು ಹಾಗೂ ಕಾರ್ಮಿಕ ಸಂಘಟನೆಯ ನಿಷೇಧದ ವಿರುದ್ಧ ಬೀಜಿಂಗ್-ಹ್ಯಾಂಗ್‌ಕೊ ಮಾರ್ಗದಲ್ಲಿ ಮುಷ್ಕರವನ್ನು ಘೋಷಿಸಲಾಯಿತು. ಈ ಮುಷ್ಕರ ಪ್ರಯಾಣಿಕರು, ಸರಕು ಹಾಗೂ ಮಿಲಿಟರಿ ರೈಲುಗಳೆಲ್ಲವೂ ನಿಂತು ಹೋದವು. ಮುಷ್ಕರದ ಮೂರನೇ ದಿನ ವುಹಾನ್ ಎಂಬ ನಗರದಲ್ಲಿ ಹತ್ತು ಸಾವಿರ ಆ ಭಾಗದ ಕಾರ್ಮಿಕರ ಒಂದು ದೊಡ್ಡ ಮೆರವಣಿಗೆಯನ್ನು ನಡೆಸಲಾಯಿತು.

ಮುಷ್ಕರದ ಅಪೂರ್ವ ಯಶಸ್ಸು ಸಾಮ್ರಾಜ್ಯಶಾಹಿ ಶಕ್ತಿಗಳನ್ನು ದಿಕ್ಕುಗೆಡಿಸಿತು. ಆ ದೇಶಗಳ ರಾಯಭಾರಿಗಳು ಅಂದಿನ ಸರ್ಕಾರಕ್ಕೆ ಒಟ್ಟಾಗಿ ಒಂದು ಪತ್ರ ಸಲ್ಲಿಸಿದರು. ಹ್ಯಾಂಗ್‌ಕೊ ನಗರದಲ್ಲಿದ್ದ ಬ್ರಿಟಿಷ್ ರಾಯಭಾರಿ ಪ್ರತಿನಿಧಿ ಪಾಳೆಯಗಾರೀ ಯುದ್ಧಕೋರರ ಸಭೆಯೊಂದನ್ನು ನಡೆಸಿದ. ಈ ಎಲ್ಲ ಕ್ರಿಯೆಗಳು ಆಳುವ ವರ್ಗದ ದಮನಕಾರೀ ಯೋಜನೆಯನ್ನು ಹರಿತಗೊಳಿಸಿದುವು.

ಕಾರ್ಮಿಕರ ಹತ್ಯಾಕಾಂಡ

ಕಾರ್ಮಿಕ ಸಂಘದ ನಾಯಕರನ್ನು ಸಂಧಾನಕ್ಕೆಂದು ಕರೆದು ದಾರಿಯಲ್ಲಿಯೆ ಅವರನ್ನು ಅಡ್ಡಗಟ್ಟಿ ಬಂಧನಕ್ಕೊಳಪಡಿಸಿದರು. ಅದಕ್ಕೆ ಮೊದಲೇ ಕಾರ್ಮಿಕ ಸಂಘದ ಕೇಂದ್ರ ಕಛೇರಿಯ ಮೇಲೆ ಸೈನಿಕ ಧಾಳಿ ನಡೆಸಿ ಗುಂಡು ಹಾರಿಸಿ 37 ಕಾರ್ಮಿಕರನ್ನು ಕೊಂದು ಹಾಕಿದರು. 200 ಕ್ಕೂ ಹೆಚ್ಚು ಜನರಿಗೆ ತೀವ್ರ ಗಾಯಗಳುಂಟಾದವು. ಕಾರ್ಮಿಕ ಸಂಘದ ಅಧ್ಯಕ್ಷನನ್ನು ಬಂಧಿಸಿ ಅಲ್ಲಿಯ ರೈಲ್ವೆ ನಿಲ್ದಾಣದಲ್ಲಿ ಕಂಬಕ್ಕೆ ಕಟ್ಟಿ ಹಾಕಿ ಮುಷ್ಕರದ ಕರೆಯನ್ನು ಹಿಂದಕ್ಕೆ ಪಡೆಯಲು ಬೆದರಿಕೆ ಹಾಕಿದರು ಅವರು ಖಡಾಖಂಡಿತವಾಗಿ ನಿರಾಕರಿಸಿದ್ದರಿಂದ ಕೊಂದರು. ಕಾರ್ಮಿಕರ ಮನೆ ಮನೆಗಳಿಗೆ ನುಗ್ಗಿ ಬಾಯೋನೆಟ್‌ನಿಂದ ತಿವಿದು ಹಿಂಸಿಸಿದರು.

ಹೀಗೆ ಆಳುವ ವರ್ಗ ರಾಕ್ಷಸೀ ಕ್ರೌರ್ಯವನ್ನು ಪ್ರದರ್ಶಿಸಿ ಈ ಒಕ್ಕೂಟದ ವಿವಿಧ ಸಂಘಗಳಿಗೂ ಬೆದರಿಕೆ ಹಾಕಿದರು. 1000 ಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆಯಲಾಯಿತು. ಆದರೆ ಒಕ್ಕೂಟದ ತೀರ್ಮಾನವಿಲ್ಲದೇ ಯಾವ ಸಂಘವೂ ಎಂತಹ ಕ್ರೂರ ಹಿಂಸೆಯ ನಡುವೆಯೂ ಮುಷ್ಕರ ಕೈ ಬಿಡಲಿಲ್ಲ. ಮುಷ್ಕರ ಮುಂದುವರೆಯಿತು. ಈ ಹಿಂಸಾಕಾಂಡ ಇಡೀ ಚೀನಾದ ಕಾರ್ಮಿಕರನ್ನು ಮಾತ್ರವಲ್ಲ ವಿದ್ಯಾರ್ಥಿಗಳನ್ನ, ಬುದ್ಧಿಜೀವಿಗಳನ್ನು ರೊಚ್ಚಿಗೇಳಿಸಿತು. ಚೀನಾದ ಅನೇಕ ನಗರಗಳಲ್ಲಿ ಬೆಂಬಲದ ಮುಷ್ಕರಗಳು ಇತರ ಹೋರಾಟಗಳು ನಡೆದವು. ಅಂತರ ರಾಷ್ಟ್ರೀಯ ಮಟ್ಟದಲ್ಲಿಯೂ ತೀವ್ರ ಪ್ರತಿಭಟನೆಗಳು, ಸೌಹಾರ್ದದ ಸಂದೇಶಗಳು ಬಂದವು. ಕಮ್ಯುನಿಸ್ಟ್ ಅಂತರ ರಾಷ್ಟ್ರೀಯವೂ ಪ್ರತಿಭಟನೆ ವ್ಯಕ್ತಪಡಿಸಿತು. ಆದರೆ ಕಾರ್ಮಿಕರ ಸಂಘಟನೆ ಹಾಗೂ ನೈತಿಕ ಶಕ್ತಿಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಮುಷ್ಕರವನ್ನು ಹಿಂಪಡೆಯಲಾಯಿತು. ಈ ಚಳುವಳಿ ಚೀನಾ ದೇಶದ ಚರಿತ್ರೆಯಲ್ಲಿ 'ಫೆಬ್ರುವರಿ ಹತ್ಯಾಕಾಂಡ' ಎಂದೇ ಕುಖ್ಯಾತವಾಯಿತು.

ಈ ಹತ್ಯಾಕಾಂಡದ ನಂತರ ಮೇ ನಾಲ್ಕರ ಚಳುವಳಿಯ ಜೊತೆಗೆ ಆರಂಭವಾಗಿದ್ದ ಕಾರ್ಮಿಕ ಚಳುವಳಿಯ ಅಲೆ ಮೂರು ವರ್ಷಗಳ ಕಾಲ ಚೀನಾದಾದ್ಯಂತ ಹಬ್ಬಿ ಕೆಲ ಕಾಲ ಸ್ತಬ್ದವಾಯಿತು. ಈ ಹೋರಾಟದ ಮೇಲಿನ ಕ್ರೂರ ಧಾಳಿ ಮತ್ತು ಆ ಮೂರು ವರ್ಷಗಳಲ್ಲಿ ಸಾಧಿಸಿದ್ದ ಅನೇಕ ಕಾರ್ಮಿಕ ಚಳುವಳಿಯ ಯಶಸ್ಸೂ ಕೂಡ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ದೊಡ್ಡ ಪಾಠವನ್ನು ಕಲಿಸಿತು. ಚೀನಾದಲ್ಲಿ ಕಾರ್ಮಿಕ ವರ್ಗ ಇನ್ನೂ ಬಹಳ ಸಣ್ಣ ಸಂಖ್ಯೆಯಲ್ಲಿರುವ ಸಮುದಾಯ. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ ಮೇಲಿನ ದಬ್ಬಾಳಿಕೆಯನ್ನು ನಿವಾರಿಸಲು ಹಾಗೂ ಕಾರ್ಮಿಕ ವರ್ಗದ ಚಳುವಳಿ ಬಲಿಷ್ಠವಾಗಲು ಇತರೆಲ್ಲ ಪ್ರಜಾಸತ್ತಾತ್ಮಕ ವರ್ಗಗಳ ಬೆಂಬಲ ಬೇಕು. ಚೀನಾದ ಅಂದಿನ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿಗಳ ಬಾಲಬಡುಕವಾದ ಪಾಳೆಯಗಾರೀ ಭೂಮಾಲಕರ ಚೀನಾ ಸರ್ಕಾರವನ್ನು ತೊಲಗಿಸದ ಹೊರತು ಕಾರ್ಮಿಕ ವರ್ಗದ ಮೇಲೆ ನಡೆಯುತ್ತಿರುವ ಪಾಶವೀ ದಬ್ಬಾಳಿಕೆ ಕೊನೆಗೊಳ್ಳುವುದಿಲ್ಲ. ಈ ಪಾಳೆಯಗಾರಿ ಪ್ರಭುತ್ವದಿಂದ ಅದೇ ರೀತಿಯ ದಬ್ಬಾಳಿಕೆಗೆ ತುತ್ತಾದ, ಆದ್ದರಿಂದ ಈ ಆಳ್ವಿಕೆಯನ್ನು ವಿರೋಧಿಸುವ ಎಲ್ಲ ಶಕ್ತಿಗಳನ್ನೂ ಒಟ್ಟಯಿಸಬೇಕಾದ ತುರ್ತು ಅಗತ್ಯವಿದೆ ಎಂಬುದನ್ನು ಅನುಭವದಿಂದ ಕಂಡುಕೊಂಡರು. ಇದು ಪಕ್ಷದಲ್ಲಿ ತೀವ್ರ ಚರ್ಚೆಗೊಳಗಾಯಿತು. ಅದೇ ಸಮಯದಲ್ಲಿ ಕಾರ್ಮಿಕ ಚಳುವಳಿಯ ಶೀಘ್ರ ಬೆಳವಣಿಗೆ ಹಾಗೂ ಅದರ ದಿಟ್ಟ, ಶಿಸ್ತು ಬದ್ಧ ಹೋರಾಟಗಳು, ಆಳುವ ವರ್ಗವನ್ನು ಮಣಿಸಿದ ವಿಜಯಗಳು ಇಡೀ ದೇಶದ ಜನರ ಮೆಚ್ಚುಗೆಯನ್ನು ಗಳಿಸಿದವು. ಹಾಗೂ ಕ್ರಾಂತಿಕಾರೀ ಚಳುವಳಿಯ ಮುಂದಿನ ಹಂತದ ಬೆಳವಣಿಗೆಗೆ ಕಾರಣವಾಯಿತು.

ಕಮ್ಯುನಿಸ್ಟ್ ಪಕ್ಷದಲ್ಲಿ ಸರಿಯದ ಕ್ರಾಂತಿಕಾರೀ ಮಾರ್ಗಕ್ಕಾಗಿ ಅಂತರಿಕ ಸಂಘರ್ಷ

ಚೀನೀ ಕಮ್ಯುನಿಸ್ಟ್ ಪಕ್ಷದ ಮೊದಲ ಅಧಿವೇಶನದಲ್ಲಿ ಮೂರು ಬಗೆಯ ಚಿಂತನೆಗಳು ಮೂಡಿಬಂದ ಬಗ್ಗೆ ನೀವು ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಅದರಲ್ಲಿ ಕಮ್ಯುನಿಸ್ಟ್ ಪರಿಭಾಷೆಯಲ್ಲಿ ವಿವರಿಸುವಂತೆ ಬಲ ಪಂಥೀಯ ತಪ್ಪು ಮಾರ್ಗ, ಎಡಪಂಥೀಯ ತಪ್ಪು ಮಾರ್ಗ ಮತ್ತು ಸರಿಯಾದ ಮಾರ್ಗದ ಅಭಿಪ್ರಾಯಗಳೂ ಇದ್ದವು. ಅದರಲ್ಲಿ ಪ್ರಧಾನವಾಗಿದ್ದದ್ದು ಎಡಪಂಥೀಯ ತಪ್ಪು ಮಾರ್ಗ. ಕೋಮಿಂಟಾಂಗ್ ಪಕ್ಷ-1911ರ ಕ್ರಾಂತಿಗೆ ನೇತೃತ್ವ ನೀಡಿದ ಸನ್ ಯಾತ್ ಸೇನ್‌ರವರ ಪಕ್ಷ ಕ್ರಾಂತಿ ವಿರೋಧೀ ದಗಲಬಾಜಿತನದ ವರ್ತನೆಯಿಂದ ಕೂಡಿದೆ ಅವರ ಜೊತೆ ಯಾವುದೇ ಸಂಬಂಧ ಕೂಡದು. ಕಾರ್ಮಿಕ

ಪುಟ 15 ಕ್ಕೆ



'ಮೈನಾ' ಚಿತ್ರ ವಿಮರ್ಶೆ ಪುಟ 12 ರಲ್ಲಿ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI